ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 10 ಸಂಚಿಕೆ 34 ಆಗಸ್ಟ್ 21, 1988 ಬೆಲೆ 1-00 ರೂ.

ಒಳಗಿನ ಪುಟಗಳಲ್ಲಿ

ರಾಷ್ಟ್ರೀಯ ರಂಗ : ಐಕ್ಯ ಚುನಾವಣಾ ಹೋರಾಟದತ್ತ ಪ್ರಮುಖ ಹೆಜ್ಜೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಕೇಂದ್ರ ಸಮಿತಿ ನವದೆಹಲಿಯಲ್ಲಿ ಆಗಸ್ಟ್ 8 ರಿಂದ ಮೂರು ದಿನ ಸಭೆ ಸೇರಿತ್ತು. ಹಿಂದಿನ ಕೇಂದ್ರ ಸಮಿತಿ ಸಭೆಯ ನಂತರ ದೇಶದಲ್ಲಿನ ರಾಜಕೀಯ ಬೆಳವಣಿಗೆಗಳ ಪರಿಶೀಲನೆಯನ್ನು ಈ ಸಭೆಯಲ್ಲಿ ನಡೆಸಲಾಯಿತು. ಸಭೆಯ ನಂತರ ಹೊರಡಿಸಲಾದ ಹೇಳಿಕೆ ಈ ವಿವಿಧ ರಾಜಕೀಯ ಬೆಳವಣಿಗೆಗಳನ್ನು ಕುರಿತಂತೆ ಸಿ.ಪಿ.ಐ.(ಎಂ) ನಿಲುವನ್ನು ದೇಶದ ಮುಂದಿಟ್ಟಿದೆ.

ತಮಿಳುನಾಡಿನಲ್ಲಿ ಚುನಾವಣೆ ನಡೆಸಲು ನಿರಾಕರಿಸುತ್ತಾ, ಅತ್ತ ನಾಗಾಲ್ಯಾಂಡ್‌ನಲ್ಲಿ ವಿಧಾನಸಭೆಯನ್ನು ವಿಸರ್ಜಿಸಿ ರಾಷ್ಟ್ರಪತಿ ಆಳ್ವಿಕೆ ಹೇರಿರುವುದು ಕೇಂದ್ರ ಸರ್ಕಾರದ ಅಸಮರ್ಥನೀಯ ಹಾಗೂ ಸರ್ವಾಧಿಕಾರಿ ಕ್ರಮಗಳು ಎಂದು ಕೇಂದ್ರ ಸಮಿತಿ ಬಲವಾಗಿ ಖಂಡಿಸಿ, ಕಾಂಗ್ರೆಸ್(ಐ) ತನಗೆ ಎಲ್ಲೆಲ್ಲಿ ಅಧಿಕಾರ ಕಿತ್ತುಕೊಳ್ಳಲು ಅಥವಾ ನಿರಂತರ ಅಧಿಕಾರ ನಡೆಸಲು ಸಾಧ್ಯವಿಲ್ಲವೋ ಅಲ್ಲೆಲ್ಲಾ ರಾಷ್ಟ್ರಪತಿ ಆಳ್ವಿಕೆ ಹೇರಲು ದೃಢ ನಿರ್ಧಾರ ಮಾಡಿದಂತಿದೆ ಎಂದು ಟೀಕಿಸಿದೆ.

ಕೇರಳದ ಕೋಝಿಕೋಡ್ ಲೋಕಸಭಾ ಕ್ಷೇತ್ರದಿಂದ ಮಳೆಗಾಲ ಸುಮಾರಾಗಿ ಮುಗಿಯುತ್ತಾ ಬಂದರೂ ಇನ್ನೂ ಉಪಚುನಾವಣಾ ದಿನಾಂಕ ಗೊತ್ತುಪಡಿಸದಿರುವುದನ್ನು ಕೇಂದ್ರ ಸಮಿತಿ ಪ್ರತಿಭಟಿಸಿದೆ.

ಕಾಂಗ್ರೆಸ್ಸೇತರ ಸರಕಾರಗಳ ಮೇಲೆ ಹಲ್ಲೆ

ಕಾಂಗ್ರೆಸ್ ಅಧಿಕಾರದಿಂದ ಹೊರದಬ್ಬಲ್ಪಟ್ಟ ರಾಜ್ಯಗಳಲ್ಲೆಲ್ಲಾ ಸರ್ಕಾರಗಳ ವಿರುದ್ಧ ಕಾಂಗ್ರೆಸ್(ಐ) ವಿಷಪೂರಿತ ಅಪಪ್ರಚಾರ ನಡೆಸುತ್ತಿದೆ ಎಂದು ಕೇಂದ್ರ ಸಮಿತಿ ಗಮನಿಸಿ ಎಡಪಕ್ಷಗಳ ನೇತೃತ್ವದ ಸರಕಾರಗಳಿರುವಲ್ಲಿ ಇದು ಇನ್ನೂ ವಿಪರೀತವಾಗಿದೆ ಎಂದು ಹೇಳಿದೆ. ಹಿಂಸಾಚಾರವೂ ಸೇರಿದ ಈ ಅಪಪ್ರಚಾರಗಳಲ್ಲಿ ಕೇಂದ್ರ ಮಂತ್ರಿಗಳು, ಸ್ವತಃ ಪ್ರಧಾನ ಮಂತ್ರಿಗಳೇ ಸಕ್ರಿಯವಾಗಿ ಭಾಗವಹಿಸುತ್ತಿರುವುದು ಈಗ ಸಾಮಾನ್ಯ ಸಂಗತಿಯಾಗಿ ಬಿಟ್ಟಿದೆ. ಆಂಧ್ರಪ್ರದೇಶ ಮತ್ತು ಕರ್ನಾಟಕದ ಕಾಂಗ್ರೆಸ್ಸೇತರ ಸರಕಾರಗಳ ವಿರುದ್ಧ ಅಪಪ್ರಚಾರ ನಡೆಸುವುದರಲ್ಲೂ ಅದು ಹಿಂದೆ ಬಿದ್ದಿಲ್ಲ.

ಕೇರಳದ ಸರ್ಕಾರ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ದಕ್ಷವಾಗಿ ನಡೆಸಿ ಬೆಲೆಗಳನ್ನು ಹತೋಟಿಯಲ್ಲಿಡುವಲ್ಲಿ ಯಶಸ್ವಿಯಾದಾಗ, ಕೇಂದ್ರ ಸರ್ಕಾರ ರಾಜ್ಯಕ್ಕೆ ಆಹಾರಧಾನ್ಯಗಳ ಪೂರೈಕೆಯನ್ನು ಕಡಿಮೆ ಮಾಡಿ ಕರ್ತವ್ಯಚ್ಯುತಿ ಮಾಡಿದೆ. ಇದರಿಂದ ಓಣಂ ಹಬ್ಬದ ಮೊದಲು ಮಾರುಕಟ್ಟೆ ಮಂದವಿರುವಾಗ ಬೆಲೆಯೇರುವಂತಾಗಿದೆ. ಇದಕ್ಕೆ ರಾಜ್ಯದ ಕಾಂಗ್ರೆಸ್ (ಐ)ಪಕ್ಷ, ರಾಜ್ಯಸರ್ಕಾರವೇ ಜವಾಬ್ದಾರಿಯೆಂದು ಸತತವಾಗಿ ಮಾಡುತ್ತಿರುವ ಅಪಪ್ರಚಾರ 50ರ ದಶಕದ ಕುಪ್ರಸಿದ್ಧ "ವಿಮೋಚನಾ ಹೋರಾಟ"ದ ದಿನಗಳನ್ನು ನೆನಪಿಸುತ್ತಿದೆ. ಇದರ ಜತೆಗೆ ರಾಜ್ಯ ಸರ್ಕಾರದ ಮೇಲೆ ಕೇಂದ್ರ ಸರ್ಕಾರದ ಆರ್ಥಿಕ ಬಿಗಿಮುಷ್ಟಿ ಬೇರೆ.

ಪಶ್ಚಿಮ ಬಂಗಾಳದ ಎಡರಂಗ ಆರಂಭಿಸಿರುವ ರಾಜ್ಯದ ವಿರುದ್ಧ ಪಕ್ಷಪಾತ ಹಾಗೂ 59ನೇ ತಿದ್ದುಪಡಿಯಂತಹ ಸರ್ವಾಧಿಕಾರಿ ಕ್ರಮಗಳ ವಿರುದ್ಧ ಐದಂಶದ ಸಾಮೂಹಿಕಪ್ರಕ್ಷೋಭೆಗೆ ಕೇಂದ್ರ ಸಮಿತಿ ಪೂರ್ಣ ಬೆಂಬಲ ವ್ಯಕ್ತಪಡಿಸಿತು.

ತ್ರಿಪುರಾ

ತ್ರಿಪುರಾದಲ್ಲಿ ಸಿ.ಪಿ.ಐ. (ಎಂ) ಮೇಲಿನ ತೀವ್ರ ದಮನವನ್ನು ಪ್ರತಿಭಟಿಸಿರುವ ಕೇಂದ್ರ ಸಮಿತಿ ಅಲ್ಲಿ ಪಂಚಾಯತುಗಳು, ಸಹಕಾರಿಗಳು ಮುಂತಾದ ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಸಂಸ್ಥೆಗಳನ್ನೆಲ್ಲಾ ವಿಸರ್ಜಿಸಲಾಗಿದೆ, ಸ್ವಾಯತ್ತ ಜಿಲ್ಲಾ ಮಂಡಳಿಗಳನ್ನು ನಿಷ್ಪ್ರಯೋಜಕಗೊಳಿಸುವ ಯತ್ನ ನಡೆದಿದೆ ಎಂದು ಹೇಳಿದೆ. ಈ ತೀವ್ರ ದಮನವನ್ನು ಎದುರಿಸಿ ದುಡಿಯುವ ಜನಗಳ ಬಾವುಟವನ್ನು ಎತ್ತಿ ಹಿಡಿದಿರುವ ಪಕ್ಷದ ಸದಸ್ಯರು ಹಾಗೂ ಗೆಳೆಯರನ್ನು ಅಭಿನಂದಿಸುತ್ತಾ ಈ ಧೀರ ಪ್ರತಿರೋಧ ರಾಜ್ಯದ ಒಳಗಡೆ ಹಾಗೂ ಇತರೆಡೆಗಳಲ್ಲಿ ಎಲ್ಲ ಪ್ರಜಾಪ್ರಭುತ್ವವಾದಿಗಳ ಪ್ರಜ್ಞೆಯನ್ನು ಜಾಗೃತಿಗೊಳಿಸಿ ಕಾಂಗ್ರೆಸ್–ಟಿ.ಯು.ಜೆ.ಎಸ್. ಮಂತ್ರಿಮಂಡಲ ತನ್ನ ಪ್ರಜಾಪ್ರಭುತ್ವ ವಿರೋಧಿ ಧೋರಣೆಗಳನ್ನು ಬಿಟ್ಟು ಕೊಡುವಂತೆ ಮಾಡುತ್ತವೆ ಎಂಬ ಭರವಸೆಯನ್ನು ಕೇಂದ್ರ ಸಮಿತಿ ವ್ಯಕ್ತಪಡಿಸಿದೆ.

ಪಂಜಾಬ್

ಅಪರೇಶನ್ ಬ್ಲಾಕ್ ಥಂಡರ್ ನಂತರ ಉಂಟಾದ ಅನುಕೂಲಪರಿಸ್ಥಿತಿಯ ಸೂಕ್ತ ರಾಜಕೀಯ ಕ್ರಮ ಆರಂಭಿಸುವಲ್ಲಿ ಕೇಂದ್ರ ಸರ್ಕಾರ ವಿಫಲಗೊಂಡಿರುವುದರಿಂದ ಪಂಜಾಬಿನಲ್ಲಿ ಉಗ್ರಗಾಮಿಗಳು ತಮ್ಮ ಕೊಲೆ–ಸುಲಿಗೆಗಳನ್ನು ಮುಂದುವರೆಸುತ್ತಿದ್ದಾರೆ. ಆಡಳಿತಾತ್ಮಕ ಕ್ರಮಗಳು ಅಗತ್ಯವಾದರೂ ಪಂಜಾಬ್ ಸಮಸ್ಯೆಗೆ ರಾಜಕೀಯ ವಿಧಾನಗಳಿಂದ ಮಾತ್ರವೇ ಪರಿಹಾರ ಸಾಧ್ಯ ಎಂಬ ನಿಲುವನ್ನು ಪುನರುಚ್ಚರಿಸುತ್ತಾ ಕೇಂದ್ರ ಸಮಿತಿ ಉಗ್ರಗಾಮಿಗಳ ವಿರುದ್ಧ ಜನಸಾಮಾನ್ಯರನ್ನು ಅಣಿನೆರೆಸಲು ಅಗತ್ಯವಾದ ಕ್ರಮ ಕೈಗೊಳ್ಳಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ. ಕೇಂದ್ರ ಸರ್ಕಾರ ಸದ್ಯದ ತನ್ನ ಸಮಯಸಾಧಕ ಧೋರಣೆ ಬಿಟ್ಟು ಸಮಸ್ಯೆಯನ್ನು ರಾಜಕೀಯವಾಗಿ ಪರಿಹರಿಸುವಂತೆ ಅದರ ಮೇಲೆ ಒತ್ತಡ ತರಬೇಕೆಂದು ಕೇಂದ್ರ ಸಮಿತಿ ಪಂಜಾಬಿನ ಮತ್ತು ಇತರೆಡೆಗಳಲ್ಲಿನ ಪ್ರಜಾಪ್ರಭುತ್ವವಾದಿ ಹಾಗೂ ಶಾಂತಿಪ್ರಿಯ ಶಕ್ತಿಗಳಿಗೆ ಕರೆ ನೀಡಿದೆ. ಭಯೋತ್ಪಾದಕತೆಯನ್ನು ಬಗ್ಗುಬಡಿಯಲು ಅಂಗೀಕರಿಸಿದ ಕ್ರಮಗಳನ್ನು ಬಳಸಿ ಕಾರ್ಮಿಕ ಸಂಘಟನೆಯ ಆಂದೋಲನವನ್ನು ಬಗ್ಗುಬಡಿಯಲು ಪಂಜಾಬ್ ಆಡಳಿತ ಕೈಗೊಂಡಿರುವ ಕ್ರಮಗಳನ್ನು ಕೇಂದ್ರ ಸಮಿತಿ ಖಂಡಿಸಿದೆ.

ಡಾರ್ಜಿಲಿಂಗ್ ಇತ್ಯರ್ಥ

ದೀರ್ಘ ಮಾತುಕತೆಗಳ ನಂತರ ಡಾರ್ಜಿಲಿಂಗ್ ಸಮಸ್ಯೆಯ ಇತ್ಯರ್ಥದ

(8ನೇ ಪುಟಕ್ಕೆ)

ಜನತೆಯ ಹಿತಾಸಕ್ತಿ ಕಾಪಾಡಿ

ಕೇಂದ್ರದ ವಿರುದ್ಧದ ಹೋರಾಟದಲ್ಲಿ ಜನರನ್ನು ಅಣಿನೆರಸಿ

ಆಗಸ್ಟ್ 16 ರಂದು ಬೆಂಗಳೂರಿನಲ್ಲಿ ಸಭೆ ಸೇರಿದ ಸಿ. ಪಿ. ಐ. (ಎಂ) ರಾಜ್ಯ ಸಮಿತಿ ಪ್ರಸ್ತುತ ರಾಜಕೀಯ ಪರಿಸ್ಥಿತಿಯನ್ನು ವಿಮರ್ಶಿಸಿ ಈ ಕೆಳಗಿನಂತೆ ಪತ್ರಿಕಾ ಹೇಳಿಕೆ ನೀಡಿದೆ.

ಕಳೆದ ಬಾರಿ ಹುಬ್ಬಳ್ಳಿಯಲ್ಲಿ ಸಭೆ ಸೇರಿದ ರಾಜ್ಯ ಸಮಿತಿಯು ಜನತಾ ಪಕ್ಷದ ಒಳಗಿನ ಬಿಕ್ಕಟ್ಟು ಕಾಂಗ್ರೆಸ್ (ಐ)ಗೆ ರಾಷ್ಟ್ರಮಟ್ಟದಲ್ಲಿ ಪರ್ಯಾಯ ರೂಪಿಸುವ ಪ್ರಯತ್ನಕ್ಕೆ ಧಕ್ಕೆ ಉಂಟು ಮಾಡುತ್ತದೆ ಎಂದು ಗುರುತಿಸಿತ್ತು. ಜನತಾ ಪಕ್ಷದೊಳಗಿನ ಬಿಕ್ಕಟ್ಟಿಗೆ ವಾಸ್ತವದಲ್ಲಿ ರಾಷ್ಟ್ರೀಯ ಬೆಳವಣಿಗೆಗಳು ಕಾರಣವಾಗಿವೆ. ರಾಮಕೃಷ್ಣ ಹೆಗಡೆಯವರ ರಾಜೀನಾಮೆ, ಬೊಮ್ಮಾಯಿಯವರ ಪ್ರವೇಶ, ದೇವೇಗೌಡ ಮತ್ತು ಅವರ ಬೆಂಬಲಿಗರು ರಾಜ್ಯ ಮಂತ್ರಿ ಮಂಡಲಕ್ಕೆ ಪುನರ್ ಪ್ರವೇಶಿಸಿರುವುದು ಇವೇ ಮೊದಲಾದವುಗಳ ಪರಿಣಾಮವಾಗಿ ತಾಂತ್ರಿಕ ಕಚ್ಚಾಟ ಅಂತ್ಯಗೊಂಡಂತೆ ಕಂಡು ಬರುತ್ತಿದೆ. ಇದು ಸ್ವಾಗತಾರ್ಹ ಬೆಳವಣಿಗೆ. ಜನತಾ ಸರ್ಕಾರವನ್ನು ಉರುಳಿಸಲು ಕಾಂಗ್ರೆಸ್ (ಐ) ಸಿಕ್ಕ ಎಲ್ಲಾ ಅವಕಾಶಗಳನ್ನು ಉಪಯೋಗಿಸಿಕೊಂಡಿತ್ತು. ತನ್ನ ವಿರೋಧಿಗಳ ವಿರುದ್ಧ ಅಂಚೆ ಮಸೂದೆ ಅಪಾಯಕಾರಿ ಕ್ರಮಗಳನ್ನು ಅನುಸರಿಸುವ ಕೇಂದ್ರ ಸರ್ಕಾರ ದೂರವಾಣಿ ಟೇಪ್ ಬಯಲುಗೊಳಿಸುವ ಕೆಲವು ಮಾಹಿತಿ ನೀಡುವ ಮೂಲಕ –ತಾನು ಜನತೆಯ ನಾಗರೀಕ ಹಕ್ಕುಗಳ ರಕ್ಷಣೆ ಮಾಡುವುದಕ್ಕಾಗಿ ಇದನ್ನು ಮಾಡಿದೆ ಎಂದು ಪ್ರತಿಪಾದಿಸಲು ಸಾಧ್ಯವಿಲ್ಲ. ಅವರು ಎಲ್ಲಾ ಫೋನುಗಳನ್ನು ಟೇಪ್ ಮಾಡುತ್ತಾರೆ. ಆದ್ದರಿಂದಲೇ ಅವರು ನ್ಯಾಯಾಂಗ ತನಿಖೆಗೆ ಒಪ್ಪುತ್ತಿಲ್ಲ. ಟೆಲಿಫೋನ್ ಸಂಭಾಷಣೆಯ ಟೇಪಿಂಗ್ ಬಗ್ಗೆ ಯಾವ ಗಂಭೀರ ಖೇದ ಇಲ್ಲದಿದ್ದಾಗ್ಯೂ, ಕಾಂಗ್ರೆಸ್ (ಐ) ನಾಯಕತ್ವವು ಹೆಗ್ಗಡೆಯವರ ಸಂಬಂಧ ಅವರ ಭಿನ್ನಮತೀಯರೊಂದಿಗೆ ಹದಗೆಡುತ್ತಿರುವ ಸಂದರ್ಭದಲ್ಲಿ ಅವರನ್ನು ಪೇಚಿಗೆ ಸಿಲುಕಿಸುವ 'ಏಕೈಕ ಗುರಿಯನ್ನು' ಮಾತ್ರ ಹೊಂದಿತ್ತು'. ಪೂಜಾರಿ, ಆಸ್ಕರ್ ಫರ್ನಾಂಡೀಸ್ ಮೊದಲಾದವರ ಮೂಲಕ ಕದಡಿದ ನೀರಿನಲ್ಲಿ ಮೀನು ಹಿಡಿಯುವ ಕಾಂಗ್ರೆಸ್ (ಐ) ಮಾಡಿದ ಪ್ರಯತ್ನ ಪೂರ್ಣ ಅರಗಿಸಿಕೊಳ್ಳಲಾಗಲಿಲ್ಲ.

ಮುಖ್ಯಮಂತ್ರಿಯ ರಾಜೀನಾಮೆ ಒಂದೆಡೆ ಹಾಗೂ ಭಿನ್ನಮತೀಯ ನಾಯಕತ್ವ ಕಾಂಗ್ರೆಸ್ (ಐ)ಕುತಂತ್ರಕ್ಕೆ ಒಪ್ಪಿಗೆ ನೀಡದಿದ್ದದ್ದು ಕಾಂಗ್ರೆಸ್ (ಐ) ಆಟವನ್ನು ಸೋಲಿಸಿತು. ಹಾಗೂ ಇದು ಸ್ವಾಗತಾರ್ಹವಾದ ಬದಲಾವಣೆ ಮತ್ತು ಐಕ್ಯತೆಯನ್ನು ಉಂಟು ಮಾಡಿತು.

ಸಿ. ಪಿ. ಐ. (ಎಂ) ರಾಜ್ಯ ಸಮಿತಿಯು ಈ ಮಂತ್ರಿ ಮಂಡಲದಿಂದ ತೀವ್ರ ಕ್ರಮ ಬದಲಾವಣೆಯನ್ನು ನಿರೀಕ್ಷಿಸದಿದ್ದರೂ ಇದು ಈ ಕೆಳಗಿನ ಆಶಯಗಳಿಗಾಗಿ ಹೋರಾಡುತ್ತದೆ ಎಂದು ಬಯಸುತ್ತದೆ.

1. ಕೇಂದ್ರ ಸರ್ಕಾರದ ಸರ್ವಾಧಿಕಾರದ ವಿರುದ್ಧ.

2. ಹೆಚ್ಚು ಅನುಕೂಲಕರವಾದ ರಾಜ್ಯ ಕೇಂದ್ರ ಸಂಬಂಧಗಳಿಗಾಗಿ.

3. ರಾಷ್ಟ್ರೀಯ ವಿರೋಧ ಪಕ್ಷಗಳ ಮುಖ್ಯ ಪ್ರವಾಹಗಳ ಸೇರಿ ಪ್ರಜಾಸತ್ತಾತ್ಮಕ ಜಾತ್ಯಾತೀತ ಅಂಶಗಳನ್ನು ಒಳಗೊಂಡ ಕನಿಷ್ಟ ಕಾರ್ಯಕ್ರಮಗಳನ್ನು ಜಾರಿಗೊಳಿಸಲಿಕ್ಕಾಗಿ.

ಆದ್ದರಿಂದ ನಮ್ಮ ಮುಂದಿರುವ ಮುಖ್ಯ ಪ್ರಶ್ನೆ ಎಂದರೆ, ಬೊಮ್ಮಾಯಿ ಮಂತ್ರಿಮಂಡಲ ಎಷ್ಟರಮಟ್ಟಿಗೆ ಈ ಅಗತ್ಯತೆಗಳ ಈಡೇರಿಕೆಗಾಗಿ ಕೆಲಸ ಮಾಡಲಿದೆ ಎನ್ನುವುದು. ಕೇಂದ್ರ ಸರ್ಕಾರದ ವಿರುದ್ಧ ನಿರಂತರವಾದ ಹೇಳಿಕೆಗಳು–ನಿಲುವು ತಾಳಬಹುದು. ಆದರೆ ಕೇಂದ್ರ ಸರ್ಕಾರದ ತಪ್ಪು ನೀತಿಗಳ ವಿರುದ್ಧ ಜನತೆಯನ್ನು ಅಣಿನೆರಸಲು ಜನತಾ ಪಕ್ಷದ ಸರ್ಕಾರ ಸಹಕಾರಿಯಾಗಬಲ್ಲದೇ? ನಮಗೆ ನಮ್ಮದೇ ಆದ ಸಂದೇಹವಿದೆ. ಈ ಹಿಂದೆ ಅವರ ಆಡಳಿತದ ಹತ್ತು ಅವರು ಈಗ ಅದನ್ನು ಇನ್ನಷ್ಟು ಉತ್ತಮಪಡಿಸುವ ನಿರೀಕ್ಷೆ ಇಲ್ಲ. ಶ್ರಮಜೀವಿ ಜನವರ್ಗದ ಕಡೆ ಹೆಗ್ಗಡೆ ಮಂತ್ರಿಮಂಡಲದ ನಿಲುವು ಅಷ್ಟೊಂದು ಅನುಕೂಲಕರವಾಗಿಲ್ಲದಿದ್ದಾಗ್ಯೂ, ಅವರ ಹೋರಾಟಗಳಲ್ಲಿ ಮಧ್ಯ ಪ್ರವೇಶಿಸದಿರುವ ನಿಲುವುಯನ್ನಾದರೂ ಕನಿಷ್ಟ ಪಕ್ಷ ವಹಿಸಿತ್ತು. ಕನಿಷ್ಟ ಪಕ್ಷ ಕಾರ್ಮಿಕ ಸಚಿವ ಶ್ರೀ ಎಸ್.ಕೆ. ಕಾಂತರವರು ಕಾರ್ಮಿಕರ ಪರವಾದ

(8ನೇ ಪುಟಕ್ಕೆ)

ಸ್ವತಂತ್ರ ತೀರ್ಮಾನಕ್ಕೆ ವೈಜ್ಞಾನಿಕ ನಿಲುವು

ಸೋವಿಯೆತ್ ಒಕ್ಕೂಟದಲ್ಲಿನ ಇತ್ತೀಚಿನ ಬೆಳವಣಿಗೆಗಳನ್ನು ವಿಶೇಷವಾಗಿ ಸಿ. ಪಿ. ಎಸ್. ಯು. ನ 19ನೇ ಸಮ್ಮೇಳನದ ಚರ್ಚೆ ಮತ್ತು ಠರಾವುಗಳಿಗೆ ಸಂಬಂಧ ಪಟ್ಟಂತೆ ನಮ್ಮ ಪಕ್ಷ ವಿವರವಾದ ಪರಿಶೀಲನೆ ನಡೆಸಬೇಕೆಂದು ನಮ್ಮ ಕಾರ್ಯಕರ್ತರು ಮತ್ತು ಮುಖಂಡರು ಬಯಸುತ್ತಿದ್ದಾರೆ. ಇದನ್ನು ಪೂರ್ಣವಾಗಿ ಮನಗಂಡು ಸಿ. ಪಿ. ಐ. (ಎಂ) ನ ಕೇಂದ್ರ ಸಮಿತಿ ಇದೇ ಅಗಸ್ಟ್ 8 ರಿಂದ 10 ರ ವರೆಗೆ ಜರುಗಿದ ಸಭೆಯಲ್ಲಿ ಒಂದು ನಿರ್ಣಯವನ್ನು ಅಂಗೀಕರಿಸಿ ಇವುಗಳನ್ನು ನಾವು ಹೇಗೆ ಪರಿಶೀಲಿಸಬೇಕೆಂಬ ಬಗ್ಗೆ ಮಾರ್ಗದರ್ಶನ ನೀಡಿದೆ. ಅದನ್ನು ಈ ಮುಂದೆ ಕೊಡಲಾಗಿದೆ.

ಸೋವಿಯೆತ್ ಒಕ್ಕೂಟದಲ್ಲಿನ ಇತ್ತೀಚಿನ ಬೆಳವಣಿಗೆಗಳನ್ನು, ವಿಶೇಷವಾಗಿ ಸಿ.ಪಿ. ಎಸ್.ಯು. ನ 19ನೇ ಸಮ್ಮೇಳನದ ಚರ್ಚೆ ಮತ್ತು ಠರಾವುಗಳಿಗೆ ಸಂಬಂಧ ಪಟ್ಟಂತೆ ನಮ್ಮ ಪಕ್ಷ ವಿವರವಾದ ಪರಿಶೀಲನೆ ನಡೆಸಬೇಕೆಂದು ನಮ್ಮ ಕಾರ್ಯಕರ್ತರು ಮತ್ತು ಮುಖಂಡರು ಬಯಸುತ್ತಿದ್ದಾರೆ. ಇದನ್ನು ಪೂರ್ಣವಾಗಿ ಮನಗಂಡು ಸಿ.ಪಿ.ಐ. (ಎಂ.) ನ ಕೇಂದ್ರ ಸಮಿತಿ ಇದೇ ಆಗಸ್ಟ್ 8 ರಿಂದ 10 ರ ವರೆಗೆ ಜರುಗಿದ ಸಭೆಯಲ್ಲಿ ಒಂದು ನಿರ್ಣಯವನ್ನು ಅಂಗೀಕರಿಸಿ ಇವುಗಳನ್ನು ನಾವು ಹೇಗೆ ಪರಿಶೀಲಿಸಬೇಕೆಂಬ ಬಗ್ಗೆ ಮಾರ್ಗದರ್ಶನ ನೀಡಿದೆ. ಅದನ್ನು ಈ ಮುಂದೆ ಕೊಡಲಾಗಿದೆ.

ನಮ್ಮ ದೇಶದಲ್ಲಿ ಹಾಗೂ ಇತರೆಡೆ ಬೂರ್ಜ್ವಾ ಪತ್ರಿಕೆಗಳು ಈ ಬೆಳವಣಿಗೆಗಳ ಬಗ್ಗೆ ಇರುವ ಗೊಂದಲದ ಲಾಭ ಪಡೆದು ಅಪಪ್ರಚಾರದ ಮಹಾಪೂರವನ್ನೇ ಹರಿಯಬಿಟ್ಟಿವೆ. ಕೆಲವು ಸೋವಿಯತ್ ಪ್ರಕಟಣೆಗಳಿಂದ ಇವಕ್ಕೆ ನೆರವೂ ದೊರೆತಿದೆ. ಈ ಅಪಪ್ರಚಾರದ ಹಿಂದೆ ಎರಡು ಉದ್ದೇಶಗಳಿವೆ— (i) ಸೋವಿಯತ್ ಒಕ್ಕೂಟದಲ್ಲೀಗ ಎಲ್ಲಾ ಸಮಾಜವಾದೀ ಮೌಲ್ಯಗಳನ್ನೂ ಬದಲಿಸಿ ಬೂರ್ಜ್ವಾ ಜಗತ್ತಿನ ಮೌಲ್ಯಗಳನ್ನು ಸ್ಥಾಪಿಸಲಾಗುತ್ತಿದೆಯೇನೋ ಎಂಬಂತೆ ಚಿತ್ರಿಸುವುದು (ii) ಇದುವರೆಗೆ ನಾವು ಮಾಡಿಕೊಂಡು ಬಂದಂತೆ ನಮ್ಮದೇ ಸ್ವತಂತ್ರ ತೀರ್ಮಾನಕ್ಕೆ ಬರಬೇಕೆಂಬ ಪಕ್ಷದ ಇಚ್ಛೆಯನ್ನು ಮೊದುಗೊಳಿಸುವುದು. ಇಂತಹ ಅಪಪ್ರಚಾರಕ್ಕೆ ಬಲಿಯಾಗಬಾರದೆಂದು ಕೇಂದ್ರ ಸಮಿತಿ ಪಕ್ಷದ ಕಾರ್ಯಕರ್ತರಿಗೆ ಎಚ್ಚರಿಕೆ ನೀಡಿದೆ.

ಸೋವಿಯತ್ ಒಕ್ಕೂಟದ ಇತ್ತೀಚಿನ ಬೆಳವಣಿಗೆ ಸಮಾಜವಾದೀ ದೇಶಗಳ ಅಂತರಿಕ ಧೋರಣೆಗಳಿಗೆ ಸಂಬಂಧಪಟ್ಟ ಒಂದು ಬೆಳವಣಿಗೆ. ಇಂತಹ ಬೆಳವಣಿಗೆಗಳನ್ನು ಕಮ್ಯೂನಿಸ್ಟ್ ಪಕ್ಷಗಳು ಸಮಾಜವಾದಿ ಆರ್ಥಿಕ ವ್ಯವಸ್ಥೆಯನ್ನು ಮತ್ತು ಸಮಾಜವಾದೀ ಪ್ರಭುತ್ವವನ್ನು ನಡೆಸುವ ಕಾರ್ಯದಲ್ಲಿ ಎದುರಿಸುವ ಮೂರ್ತ ಸಮಸ್ಯೆಗಳ ಹಿನ್ನೆಲೆಯಲ್ಲಿ ನಾವು ಅರ್ಥಮಾಡಿಕೊಳ್ಳಬೇಕು. ಮೊದಲನೆಯದಾಗಿ, ಈ ಅನುಭವ ಜಾಗತಿಕ ಆಂದೋಲನಕ್ಕೆ ಸೈದ್ಧಾಂತಿಕವಾಗಿ ಹಾಗೂ ಆಚರಣೆಯಲ್ಲಿ ಕೂಡಾ ಅತ್ಯಂತ ಮಹತ್ವಪೂರ್ಣವಾದುದು ಎಂದು ನಾವು ಪರಿಗಣಿಸಬೇಕು. ಭಾರತದಲ್ಲಿ ಸಮಾಜವಾದೀ ಸಮಾಜ ಕಟ್ಟಲು ಬದ್ಧವಾಗಿರುವ ನಮ್ಮ ಆಂದೋಲನಕ್ಕೂ ಮಹತ್ವ ಪೂರ್ಣವಾದ ಅನುಭವವಿದು. ನಿಜ ಸಂಗತಿಗಳನ್ನು ತಿಳಿದುಕೊಂಡು ಪ್ರತಿಕೂಲ ಪ್ರವೃತ್ತಿಗಳನ್ನು ಮತ್ತು ಬೆಳವಣಿಗೆಗಳನ್ನೂ ಸರಿಪಡಿಸಲು ಕೈಗೊಳ್ಳುತ್ತಿರುವ ಕ್ರಮಗಳು ಮಾರ್ಕ್ಸ್‌ವಾದ–ಲೆನಿನ್‌ವಾದದ ತಿಳುವಳಿಕೆಗೆ ಅನುರೂಪವಾಗಿದೆಯೋ ಅಥವಾ ಭಿನ್ನಾಭಿಪ್ರಾಯಕ್ಕೆ ಅವಕಾಶವಿದೆಯೋ ಎಂಬ ಬಗ್ಗೆ ನಮ್ಮದೇ ಸ್ವತಂತ್ರ ತೀರ್ಮಾನಕ್ಕೆ ನಾವು ಬರಬೇಕು.

ಕೇಂದ್ರ ಸಮಿತಿ ತನ್ನ ಜುಲೈ 1986 ರ ಅಧಿವೇಶನದಲ್ಲಿ ಸಿ.ಪಿ.ಎಸ್.ಯು. ನ 27 ನೇ ಕಾಂಗ್ರೆಸ್ ಸಮಾಜವಾದೀ ಪ್ರಜಾಪ್ರಭುತ್ವವನ್ನು ವಿಸ್ತರಿಸಬೇಕೆಂದು ಮತ್ತು ಆರ್ಥಿಕ ನಿರ್ವಹಣೆಯ ಪುನರಚನೆ ಆಗಬೇಕೆಂದು ಕೈಗೊಂಡ ನಿರ್ಣಯಗಳನ್ನು ಸ್ಥೂಲವಾಗಿ ಬೆಂಬಲಿಸಿತ್ತು. ಕಾಮ್ರೇಡ್ ಗೊರ್ಬಚೆವ್ ಹೇಳಿರುವಂತೆ ಉತ್ಪಾದನಾ ಶಕ್ತಿಗಳ ಬೆಳವಣಿಗೆ ಮತ್ತು ಸದ್ಯದ ಉತ್ಪಾದನಾ ಸಂಬಂಧಗಳು ಪರಸ್ಪರ ಅನುರೂಪವಾಗಿರದ್ದರಿಂದ ಇದನ್ನು ಮಾಡಬೇಕಾದುದು ಅವಶ್ಯವಾಯಿತು, ಅಂದರೆ ಉತ್ಪಾದನೆಯ ಸಮಾಜವಾದೀ ಸಂಬಂಧಗಳ ಈಗಿನ ಘಟ್ಟದಲ್ಲಿ ಅವನ್ನು ನಿರ್ವಹಿಸುವ ವಿಧಾನ ಅನುರೂಪವಾಗಿರದೆ, ಉತ್ಪಾದನಾ ಶಕ್ತಿಗಳ ಬೆಳವಣಿಗೆಯ ಅಗತ್ಯಗಳಿಗೆ ಅನುಗುಣವಾಗಿರದೆ ಹಿಂದೆ ಬೀಳುತ್ತಿದೆ. ಆದ್ದರಿಂದ ನಮ್ಮ ಕೇಂದ್ರ ಸಮಿತಿ ಸ್ಥೂಲವಾಗಿ ನಿರ್ವಹಣೆಯ ಸಂಬಂಧಗಳ ಪುನರ್ರಚನೆಗೆ ಬೆಂಬಲ ನೀಡಿತು. ಆ ನಂತರ ವಿಶೇಷವಾಗಿ 19ನೇ ಸಮ್ಮೇಳನದ ನಂತರ ಈ ಪ್ರಶ್ನೆಗಳು ಮೂರ್ತ ಪ್ರಸ್ತಾಪಗಳ ರೂಪದಲ್ಲಿ ಮಂಡಿಸಲ್ಪಡುತ್ತಿವೆ. ಇವುಗಳ ಗಂಭೀರ ಪರೀಕ್ಷಣೆ ನಡೆಸಲೇಬೇಕು. ಹಿಂದೆ ನಡೆದುದನ್ನು ತೀವ್ರವಾಗಿ ಟೀಕಿಸುತ್ತಾ ಈ ಪ್ರಸ್ತಾಪಗಳನ್ನು ಈಗ ಮುಂದಿಡಲಾಗುತ್ತಿದೆ. ಕೆಲವೊಮ್ಮೆ ಇಂತಹ ಟೀಕೆಗಳು ಹಿಂದೆ ನಡೆದುದೆಲ್ಲವನ್ನೂ ಪೂರ್ಣವಾಗಿ ನಿರಾಕರಿಸುವ ಮಟ್ಟದವರೆಗೂ ಹೋಗುತ್ತಿವೆ. ಸರ್ಕಾರೀ ಅಧಿಕಾರಿಗಳ ಸ್ವೇಚ್ಛಾಚಾರದ ವರ್ತನೆಗಳ ವಿರುದ್ಧ ಸೋವಿಯತ್ ನಾಗರಿಕರ ಕಾನೂನು ಹಾಗೂ ಪ್ರಜಾಪ್ರಭುತ್ವ ಹಕ್ಕುಗಳ ವಿಸ್ತರಣೆ, ವ್ಯಕ್ತಿಯ ಹಕ್ಕುಗಳಿಗೆ ನ್ಯಾಯಾಲಯದ ರಕ್ಷಣೆ, ಸ್ವತಂತ್ರ ನ್ಯಾಯಾಂಗ ಇತ್ಯಾದಿ ಹಿಂದಿನ ಸಂವಿಧಾನದಲ್ಲಿಲ್ಲದ ಅಂಶಗಳ ಬಗ್ಗೆ ಕೆಲವು ಪ್ರಸ್ತಾಪಗಳಿವೆ. ಪಕ್ಷೇತರ ಜನಸಮೂಹಗಳ, ಸಂಘಟನೆಗಳು, ಕಾರ್ಮಿಕ ಸಂಘಗಳು, ಮಹಿಳಾ ಸಂಘಟನೆಗಳು, ರೈತ ಸಹಕಾರಿಗಳು ಮುಂತಾದವನ್ನು ಕಾರ್ಮಿಕ ವರ್ಗದ ಪ್ರಜಾಪ್ರಭುತ್ವದ ಜೀವಂತ ಸಾಧನಗಳಾಗಿ ಚುರುಕುಗೊಳಿಸುವುದು, ಪಕ್ಷ ಮತ್ತು ಪ್ರಭುತ್ವದ ನಡುವೆ ಸರಿಯಾದ ಸಂಬಂಧ, ಪಕ್ಷದೊಳಗೆ ಬಹು ಅಭಿಪ್ರಾಯವಿರಲು ಸ್ವಾತಂತ್ರ್ಯ, ಅಭಿಪ್ರಾಯ ಅಭಿವ್ಯಕ್ತಿಯ ಸರ್ವವ್ಯಾಪೀ ಸ್ವಾತಂತ್ರ್ಯ ಮುಂತಾದವನ್ನು ಕುರಿತಾದ ಪ್ರಸ್ತಾಪಗಳು, ಅರ್ಥಿಕದಲ್ಲಿನ ಸ್ಥಗಿತತೆಯನ್ನು ನಿವಾರಿಸಲು, ಜನಾಂಗೀಯ ಸಳೆತವನ್ನು ನಿವಾರಿಸಲು ಪ್ರಸ್ತಾಪಗಳನ್ನು ಮುಂದಿಡಲಾಗಿದೆ. ವಿದೇಶಾಂಗ ಧೋರಣೆಯಲ್ಲೂ ಹೊಸ ಯೋಜನಾ ವೈಖರಿಯನ್ನು ಅನುಮೋದಿಸುವ, ಈ ಉದ್ದೇಶಗಳ ಸಾಧನೆಗಾಗಿ ಸೋವಿಯೆತ್ ಸಂವಿಧಾನಕ್ಕೆ ತಿದ್ದುಪಡಿಗಳನ್ನು ತರುವ ಪ್ರಸ್ತಾಪಗಳೂ ಇವೆ.

ಈ ವಿವಿಧ ಪ್ರಸ್ತಾಪಗಳ ಪರಿಣಾಮವನ್ನು ಮಾರ್ಕ್ಸ್‌ವಾದಿ–ಲೆನಿನ್‌ವಾದಿ ದೃಷ್ಟಿಯಿಂದ ಪರೀಕ್ಷಿಸಬೇಕಾಗಿದೆ. ಆರಂಭದಲ್ಲಿ ಈ ಸಮಸ್ಯೆಗಳನ್ನು ನಾವು ಹೇಗೆ ಪರಿಶೀಲಿಸಬೇಕು ಎಂಬುದರ ಬಗ್ಗೆ ಒಂದು ಸಾಮಾನ್ಯ ನಿಲುವನ್ನು ನಾವಿಲ್ಲಿ ಹೇಳಬಹುದು.

ಯಾವುದೇ ದೇಶದಲ್ಲಿ ಸಮಾಜವಾದದ ಮುನ್ನಡೆಯೊಂದಿಗೆ ಜನಸಮೂಹಗಳು ಆರ್ಥಿಕ ವ್ಯವಸ್ಥೆಯನ್ನು ನಡೆಸುವಲ್ಲಿ ಮತ್ತು ಪ್ರಭುತ್ವವನ್ನು ನಡೆಸುವಲ್ಲಿ ಕೂಡಾ ಹೆಚ್ಚೆಚ್ಚಾಗಿ ಪಾಲ್ಗೊಳ್ಳುವಂತಾಗಬೇಕು. ಮಾರ್ಕ್ಸ್‌ವಾದ–ಲೆನಿನ್‌ವಾದ ಆಧಾರದಲ್ಲಿ ಧೋರಣೆ ರೂಪಿಸಿಕೊಳ್ಳುವ ನಾವು ಇದನ್ನು ಅರಿತಿದ್ದೇವೆ. ಲೆನಿನ್ ಹೇಳಿರುವಂತೆ ಪ್ರತಿಯೊಬ್ಬ ಅಡಿಗೆಯವನೂ ಆಳುವುದನ್ನು ಕಲಿಯಬೇಕು ಎಂಬುದು ಹೆಚ್ಚೆಚ್ಚು ವಾಸ್ತವಗೊಳ್ಳಬೇಕು. ಬೆಳವಣಿಗೆಯ ವಿವಿಧ ಹಂತಗಳಲ್ಲಿ ಈ ಪಾಲ್ಗೊಳ್ಳುವಿಕೆ ಹೆಚ್ಚೆಚ್ಚು ಜನರನ್ನು ಒಳಗೊಳ್ಳಬೇಕು. ಆದ್ದರಿಂದ ಜನಸಮೂಹಗಳು ಪ್ರಜ್ಞಾಪೂರ್ವಕವಾಗಿ ಪಾಲ್ಗೊಳ್ಳುವುದಕ್ಕೆ ನೆರವಾಗುವ ಕ್ರಮಗಳು ಸ್ವಾಗತಾರ್ಹ. ಅವನ್ನು ಬೆಂಬಲಿಸಬೇಕು. ನಾಗರಿಕರನ್ನು ಅನಗತ್ಯವಾಗಿ ಹೇರಿರುವ ಮಿತಿಗಳಿಂದ ಮುಕ್ತಗೊಳಿಸಿ ಸಮಾಜವಾದೀ ಸಮಾಜದ ಮಿತಿಯೊಳಗೆ ಆರೋಗ್ಯಕರ ಚರ್ಚೆಗಳಿಗೆ ಅವಕಾಶ ಒದಗಿಸುವ ಕ್ರಮಗಳು ಸಮಾಜವನ್ನು ಬಲಗೊಳಿಸುತ್ತವೆ.

ಆದರೆ ಇವೆಲ್ಲಾ ಮಾರ್ಕ್ಸ್‌ವಾದ-ಲೆನಿನ್‌ವಾದದ ಮಾರ್ಗದರ್ಶಕ ಪಾತ್ರವನ್ನು ಕಾಪಾಡಿಕೊಂಡು, ಸಮಾಜಕ್ಕೆ ನೇತೃತ್ವ ನೀಡುವ ಶಕ್ತಿಯಾಗಿ, ಕಾರ್ಮಿಕ ವರ್ಗದ ಮುಂಚೂಣಿಗಾಗಿ ಪಕ್ಷದ ಪಾತ್ರವನ್ನು ಖಾತ್ರಿಗೊಳಿಸಿದರೆ ಮಾತ್ರ ಸಮಾಜವನ್ನು ಬಲಪಡಿಸುವುದು ಸಾಧ್ಯ. ಈ ಎರಡು ಶರತ್ತುಗಳನ್ನು ಪೂರೈಸದ ಯಾವುದೇ ಕ್ರಮ ಜನಸಮೂಹಗಳಲ್ಲಿ ಸಮಾಜವಾದೀ ಉತ್ಸಾಹ ಕುದುರಿಸಲಾರದು, ಸರ್ಕಾರ ನಡೆಸುವಲ್ಲಿ ಅವರು ಪಾಲ್ಗೊಳ್ಳುವಂತೆ ಮಾಡಲಾರದು.

ಇಲ್ಲಿಯೇ ಹಿಂದೆ ನಡೆದುದರ ಬಗ್ಗೆ ಭೂತಕಾಲದ ಬಗ್ಗೆ ಸರಿಯಾದ ನಿಲುವಿನ ಮಹತ್ವ ಇರುವುದು. ಕ್ರಾಂತಿಯ ನಂತರ, ಅಂತರ್ಯುದ್ಧದ ಸವಾಲುಗಳನ್ನು ಹೊಸ ಆರ್ಥಿಕ ಯೋಜನೆ (ಎನ್. ಇ. ಪಿ) ಅವಧಿಯ ಕಾರ್ಪಣ್ಯಗಳನ್ನು ಎದುರಿಸಿ, ಸಮಾಜವಾದವನ್ನು ಕಟ್ಟಿದ ಸೋವಿಯೆತ್ ಒಕ್ಕೂಟವನ್ನು ಎಲ್ಲರಿಂದ ಪ್ರತ್ಯೇಕಗೊಳಿಸಿ ಅದರ ವಿರುದ್ಧ ಎಲ್ಲರೂ ಸೇರಿ ಯುದ್ಧ ಮಾಡುವ ಸಾಮ್ರಾಜ್ಯಶಾಹೀ ಧೋರಣೆಗಳನ್ನು ಸೋಲಿಸಿದ, ಶಾಂತಿಯ ದೃಢ ಧೋರಣೆ ತಳೆದ, ನಾಜಿಗಳ ವಿರುದ್ಧ ಮಹಾನ್ ವಿಜಯ ಸಾಧಿಸಿದ, ಲಕ್ಷಾಂತರ ಸೋವಿಯೆತ್ ಜನತೆಯ ಬಲಿದಾನಗಳ, ಪರಮಾಣು ಯುದ್ಧ ತಡೆದು ಮಾನವ ಕುಲವನ್ನು ವಿನಾಶದಿಂದ ಕಾಪಾಡುವಲ್ಲಿ ಎಡೆಬಿಡದ ಹೋರಾಟ ನಡೆಸಿದ ಅಮೆರಿಕಾದೊಂದಿಗೆ ಪರಮಾಣು ಸಮಾನತೆಯನ್ನು ಸಾಧಿಸಿದ ಮತ್ತು ಮಹಾನ್ ಕಾರ್ಮಿಕ ವರ್ಗದ ಸಂವಿಧಾನ ರೂಪಿಸಿದ ಸೋವಿಯೆತ್ ಒಕ್ಕೂಟದ ಈ ಹಿಂದಿನ ಮಹಾನ್ ಸಾಧನೆಗಳನ್ನು ನಿರ್ಲಕ್ಷಿಸುವುದು ಸಾಧ್ಯವಿಲ್ಲ. ಯಾಕೆಂದರೆ ಈ ಸಾಧನೆಗಳ ತಳಪಾಯವಿದ್ದಾಗ ಮಾತ್ರವೇ ಹೊಸ ಪ್ರಜಾಪ್ರಭುತ್ವ ಸುಧಾರಣೆಗಳಿಗೆ ಅರ್ಥ ಬರುವುದು.

ಹಿಂದಿನ ವಿಕೃತಿಗಳನ್ನು, ತಪ್ಪು ದಾರಿಗಳನ್ನು ವಿಮರ್ಶಿಸುವಾಗ, ಟೀಕಿಸುವಾಗ ಈ ಸಾಧನೆಗಳನ್ನು ಉಪೇಕ್ಷಿಸುವ ಒಂದು ದೃಷ್ಟಿಕೋನ ಭವಿಷ್ಯಕ್ಕೆ ತೊಂದರೆಯುಂಟು ಮಾಡುತ್ತದೆ ಮತ್ತು ಹೊಸ ಪ್ರಜಾಪ್ರಭುತ್ವ ಸುಧಾರಣೆಗಳಲ್ಲೂ ಹಿಂದಿನ ಕಾರ್ಮಿಕ ವರ್ಗದ ಇತಿಹಾಸಕ್ಕೂ ಇರುವ ಕೊಂಡಿಯನ್ನು ಕಳಚಿ ಹಾಕುತ್ತದೆ. ಹಿಂದಿನ ಅವಧಿಯ ಕೊರತೆಗಳು, ತಪ್ಪುದಾರಿಗಳು ಹಾಗೂ ವಿಕೃತಿಗಳನ್ನು ಚರ್ಚಿಸುವಾಗ ಭೂತಕಾಲದ ಬಗ್ಗೆ ಈ ನಕಾರಾತ್ಮಕ ನಿಲುವು ಈ ಸುಧಾರಣೆಗಳ ಭವಿಷ್ಯದ ಸಾಧ್ಯತೆಗಳನ್ನು ವಿರೂಪಗೊಳಿಸುತ್ತದೆ.

ಸ್ಟಾಲಿನ್‌ಗೆ ಸಂಬಂಧಪಟ್ಟಂತೆ ಸಿ. ಪಿ. ಐ. (ಎಂ) ತನ್ನ ವಿಶ್ಲೇಷಣೆಯನ್ನು ಈಗಾಗಲೇ ಮಾಡಿದೆ. ಆದರೂ ಇದನ್ನು ಪುನಪರಿಶೀಲನೆ ಮಾಡಬೇಕು ಎಂದು ಕೆಲವು ಸಂಗಾತಿಗಳು ಅಭಿಪ್ರಾಯ ಪಡುವುದು ಸಾಧ್ಯವಿದೆ. ಅವರು ಇತ್ತೀಚಿನ ಈ ಬೆಳವಣಿಗೆಗಳ ಕುರಿತು ಮುಂದೆ ನಡೆಸುವ ಚರ್ಚೆಯಲ್ಲಿ ಈ ಪ್ರಶ್ನೆಯನ್ನು ಎತ್ತಬಹುದು.

ಕಾರ್ಮಿಕ ವರ್ಗದ ಪಕ್ಷ ಆ ವರ್ಗದ ಮುಂದಳ ಸಮಾಜವಾದ ಮತ್ತು ಸಮಾಜವಾದೀ ಸಮಾಜ ಸಂಘಟಿಸುವಲ್ಲಿ ಮತ್ತು ಕಟ್ಟುವಲ್ಲಿ ಅವರ ಮುಂದಾಳುತ್ವದ ಪಾತ್ರ ಎಂಬ ಲೆನಿನ್‌ವಾದೀ ಪರಿಕಲ್ಪನೆಗೆ ಸಿ.ಪಿ.ಐ. (ಎಂ) ಬದ್ಧವಾಗಿರುತ್ತದೆ. ಆಡಳಿತವನ್ನು ಮತ್ತು ಅರ್ಥಿಕವನ್ನು ಕಾರ್ಮಿಕ ವರ್ಗ ನಡೆಸುವ ಬದಲು ಪಕ್ಷವೇ ನಡೆಸುವುದು ಸಾಧ್ಯವಿಲ್ಲ ಎಂಬುದು ಸಿ.ಪಿ.ಐ.(ಎಂ) ಅಭಿಪ್ರಾಯ. ಪಕ್ಷದ ಬಲವಿರುವುದು ಮಾರ್ಕ್ಸ್‌ವಾದೀ–ಲೆನಿನ್‌ವಾದೀ ಸಿದ್ಧಾಂತದ, ಕಾರ್ಮಿಕ ವರ್ಗದ ಸಿದ್ಧಾಂತದ ಆಚರಣೆಯಲ್ಲಿ ಅಂದರೆ ಕಾರ್ಮಿಕ ವರ್ಗದ ಪ್ರಭುತ್ವಕ್ಕೆ ಮುಂದಾಳುತ್ವ ನೀಡುವುದು. ಆದ್ದರಿಂದ ಸಿ.ಪಿ.ಐ. (ಎಂ) ಈ ಪರಿಕಲ್ಪನೆಯಲ್ಲಿ ಉಂಟಾಗಿರುವ ಎಲ್ಲಾ ವಿಕೃತಿಗಳನ್ನು, ತಪ್ಪುಗಳನ್ನು ಸರಿಪಡಿಸುವುದರ ಪರವಾಗಿದೆ. ಪಕ್ಷದ ಕಾರ್ಯನಿರ್ವಹಣೆಯಲ್ಲಿನ ತಪ್ಪುಗಳನ್ನು ಟೀಕಿಸುವಾಗ ಪಕ್ಷದ ಮಾರ್ಗದರ್ಶನವಿಲ್ಲದೆ ಸೋವಿಯೆತ್ ಪ್ರಭುತ್ವ ಅಸ್ತಿತ್ವದಲ್ಲಿ ಉಳಿಯುವುದು ಮತ್ತು ಸಮಾಜವಾದೀ ಮುನ್ನಡೆಯ ವಿಜಯ ಸಾಧಿಸುವುದು ಸಾಧ್ಯವಿರಲಿಲ್ಲ ಎಂಬುದನ್ನೂ ನೆನಪಿನಲ್ಲಿಟ್ಟುಕೊಳ್ಳಬೇಕು. ಪಕ್ಷದ ಮತ್ತು ಕಾರ್ಮಿಕ ವರ್ಗದ ಪಾತ್ರವನ್ನು ದುರ್ಬಲ ಮಾಡುವ ಮತ್ತು ಅದನ್ನು ಸಮಾಜದ ಇತರರೊಂದಿಗೆ ಸಮೀಕರಿಸುವ ಪರಿಕಲ್ಪನೆಗಳು ಹಾನಿಕಾರಕ. ಪಕ್ಷ ಮತ್ತು ಕಾರ್ಮಿಕ ವರ್ಗದ ಪ್ರಭುತ್ವದ ನಡುವಿನ ಸಂಬಂಧಗಳನ್ನು ಸರಿಪಡಿಸುವ ಪ್ರಸ್ತಾಪಗಳನ್ನು ಪರಿಗಣಿಸುವಾಗ ನಮ್ಮ ಪಕ್ಷ ಈ ಮೂಲಭೂತ ತಿಳುವಳಿಕೆಯನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಪಕ್ಷದ ಒಳಗಾಗಲೀ ಅಥವಾ ಪ್ರಭುತ್ವದಲ್ಲಾಗಲೀ ಅಧಿಕಾರಶಾಹಿಯ ಬೆಳವಣಿಗೆ ಒಂದು ದೊಡ್ಡ ಆತಂಕ ತಡೆಯದಿದ್ದರೆ ಅದು ಅಪಾಯಕಾರಿಯಾಗುತ್ತದೆ. ಅದು ಪಕ್ಷ ಮತ್ತು ಪ್ರಜಾಪ್ರಭುತ್ವದ ಬೆಳವಣಿಗೆಗೆ ಒಂದು ದೊಡ್ಡ ಅಪಾಯವಾಗುತ್ತದೆ ಎನ್ನುವುದನ್ನು ಸೋವಿಯೆತ್ ಒಕ್ಕೂಟದ ಅನುಭವ ತೋರಿಸುತ್ತದೆ. ಅಧಿಕಾರಶಾಹಿಯ ಬೆಳವಣಿಗೆಯ ವಿರುದ್ಧ ಕೈಗೊಳ್ಳುವ ಕ್ರಮಗಳು ಪ್ರಜಾಸತ್ತಾತ್ಮಕ ಕೇಂದ್ರವಾದದ ಮೂಲಭೂತ ನೀತಿಯನ್ನು ಇನ್ನೊಂದು ತುದಿಯಲ್ಲಿ ಉಲ್ಲಂಘಿಸದೆ ಸರಿಯಾದ ಲೆನಿನ್‌ವಾದೀ ಸ್ವರೂಪದ ಮರುಸ್ಥಾಪನೆಗೆ ದಾರಿಮಾಡಬೇಕು.

ಅರ್ಥಿಕಥ ಪುನರ್ರಚನೆ ಉತ್ಪಾದನಾ ಶಕ್ತಿಗಳು ಉತ್ಪಾದನಾ ಸಂಬಂಧಗಳಿಗೆ ಅನುಗುಣವಾಗಿರುವುದರಿಂದ ಮತ್ತು ಸ್ಥಗಿತತೆಯಿಂದಾಗಿ ಅಗತ್ಯವಾಯಿತು. ಸಿ.ಪಿ.ಎಸ್. ಯು. ನ 19ನೇ ಸಮ್ಮೇಳನದಲ್ಲಂತೂ ಅಲ್ಲಿನ ಅರ್ಥಿಕ ಒಂದು ಬಿಕ್ಕಟ್ಟಿನ ಹಂತದಲ್ಲಿದೆ, ಅದನ್ನು ಸರಿಪಡಿಸಲು ವ್ಯಾಪಕ ಹಾಗೂ ತ್ವರಿತ ಕ್ರಮಗಳು ಅಗತ್ಯ ಎಂದು ಹೇಳಲಾಯಿತು. ಸಮಾಜವಾದೀ ಸಮಾಜದಲ್ಲಿ ಪರಸ್ಪರ ವಿರುದ್ಧವಾದ ವರ್ಗಗಳು ಅಸ್ತಿತ್ವದಲ್ಲಿ ಇರುವುದಿಲ್ಲವಾದ್ದರಿಂದ ಈ ವಿರೂಪತೆ ಪರಿಸ್ಥಿತಿಗೆ ಅನುಗುಣವಾಗಿ ಸಮಾಜವಾದೀ ಸಂಬಂಧಗಳನ್ನು ಬೆಳೆಸುವಲ್ಲಿನ ಸಂಘಟನಾತ್ಮಕ ವಿಫಲತೆಯಿಂದಾಗಿ ಆಗಿದೆ. ಈ ಹಿಂದುಳಿಕೆ ಹಾಗೂ ವಿರೂಪತೆಯನ್ನು ಸರಿಪಡಿಸಬೇಕು. ಇದಕ್ಕಾಗಿ ಕೈಗೊಳ್ಳುವ ಕ್ರಮಗಳು ಸದ್ಯದ ರೋಗವನ್ನು ಬೇರು ಸಹಿತ ಕೀಳುವ ಸಾಮರ್ಥ್ಯವುಳ್ಳದ್ದಾಗಿರಬೇಕು. ಸಮಾಜವಾದೀ ಸಮಾಜದಲ್ಲಿ ವೈಯುಕ್ತಿಕ ಪ್ರೋತ್ಸಾಹ ಕಮ್ಯುನಿಸಂನ ಮೊದಲ ಘಟ್ಟದಾದ್ಯಂತ ಅಗತ್ಯ ಎಂಬುದು ಸ್ಪಷ್ಟ. ಆದರೆ ಸಾಮಾಜಿಕ ಜಾಗೃತಿ ಮತ್ತು ಸಮಾಜವಾದೀ ಪ್ರಜ್ಞೆ ಕೂಡಾ ಹೆಚ್ಚುತ್ತಲೇ ಇರದಿದ್ದರೆ ಸತತ ಪ್ರಗತಿ ಅಸಾಧ್ಯ. ಉತ್ಪಾದನಾ ಶಕ್ತಿಗಳು ಮತ್ತು ಉತ್ಪಾದನಾ ಸಂಬಂಧಗಳ ನಡುವಿನ ಅನುರೂಪತೆಯನ್ನು ಮತ್ತೆ ಸ್ಥಾಪಿಸುವಲ್ಲಿ ಸಮಾಜವಾದೀ ಪ್ರಜ್ಞೆ ಒಂದು ಪ್ರಧಾನ ಪಾತ್ರ ವಹಿಸಬೇಕು. ಸದ್ಯದ ಕಷ್ಟಕರ ಪರಿಸ್ಥಿತಿಯನ್ನು ಎದುರಿಸಲು ಕೈಗೊಳ್ಳಬೇಕೆಂದಿರುವ ಎಲ್ಲಾ ಕ್ರಮಗಳನ್ನು ದೀರ್ಘಾವಧಿಯ ಈ ಒರೆಗಲ್ಲಿನಲ್ಲಿ ಪರೀಕ್ಷಿಸಬೇಕು.

ಅಂತರ ರಾಷ್ಟ್ರೀಯ ಪರಿಸ್ಥಿತಿಗೆ ಸಂಬಂಧಪಟ್ಟಂತೆ, ಕೇಂದ್ರ ಸಮಿತಿ ನಮ್ಮ ನಿಲುವನ್ನು ವಿವರಿಸುವ ಒಂದು ದಸ್ತಾವೇಜನ್ನು ಇತ್ತೀಚೆಗೆ ಅಂಗೀಕರಿಸಿದೆ.

ಸದಸ್ಯರು ಏಳುವ ಸಮಸ್ಯೆಗಳನ್ನು ಕುರಿತಂತೆ ಒಂದು ವೈಜ್ಞಾನಿಕ ನಿಲುವು ತಾಳಬೇಕು. ಯಾವುದೇ ಹೊಸ ಪ್ರಸ್ತಾಪವನ್ನು ನಿರ್ಲಕ್ಷ್ಯದಿಂದ ತಳ್ಳಿಹಾಕಬಾರದು ತಕ್ಷಣದ ಸನ್ನಿವೇಶದಲ್ಲಿ ಗಮನಿಸಲೇಬೇಕಾದ ಸಂದರ್ಭವನ್ನು ಮೂರ್ತವಾಗಿ ಅರ್ಥಮಾಡಿಕೊಳ್ಳಬೇಕು. ಆ ಮೇಲೇನೇ ತಕ್ಷಣದ ಸನ್ನಿವೇಶ ಎದುರಿಸಲು ಮುಂದಿಟ್ಟ ಪ್ರಸ್ತಾಪಗಳು ಮಾರ್ಕ್ಸ್‌ವಾದ-ಲೆನಿನ್‌ವಾದ ಒರೆಗಲ್ಲಲ್ಲಿ ನಿಲ್ಲುತ್ತವೆಯೇ ಎಂದು ನಿರ್ಧರಿಸಬೇಕು. ಇದರಿಂದ ಒಂದು ಫಲದಾಯಕ ಚರ್ಚೆ ನಡೆಯಲು ಹಾಗೂ ನಾವು ನಮ್ಮ ಸ್ವತಂತ್ರ ತೀರ್ಮಾನಕ್ಕೆ ಬರಲು ಅನುವಾಗುತ್ತದೆ. ○

ಸಮುದಾಯ ಘಟಕಗಳ ಆರಂಭ

ಸಮುದಾಯ ರಾಜ್ಯ ಸಮಿತಿ ಅಧ್ಯಕ್ಷರಾದ ಡಾ|| ಮರುಳು ಸಿದ್ದಪ್ಪನವರು ಜುಲೈ 20 ರಂದು ಬೆಂಗಳೂರಿನ ಶ್ರೀರಾಮಪುರ ಸಮುದಾಯ ಘಟಕವನ್ನು ಉದ್ಘಾಟಿಸಿದರು. ನಾಟಕದ ಮೂಲಕ ಜನಜಾಗೃತಿಯನ್ನುಂಟು ಮಾಡಲು ಸಾಧ್ಯವೆಂದ ಡಾ|| ಸಿದ್ದಪ್ಪನವರು ಸಿ. ಜಿ. ಗುಂಡಣ್ಣನವರು ನಿರ್ದೇಶಿಸಿದ 'ಹೆಣ್ಣು' ಎಂಬ ಬೀದಿನಾಟಕ ಜನತೆಯನ್ನು ತಲುಪಿ ಹೊಸ ಜಾಗೃತಿಯನ್ನುಂಟು ಮಾಡಲೆಂದು ಹಾರೈಸಿದರು. ಸಮಾರಂಭದಲ್ಲಿ ಸಮುದಾಯ ಕಾರ್ಯದರ್ಶಿ ಎರ. ಜಿ. ವೆಂಕಟೇಶ, ಸಿ. ಜಿ. ಗುಂಡಣ್ಣನವರು ಮಾತನಾಡಿದರು. 'ಹೆಣ್ಣು' ನಾಟಕವನ್ನು ಶ್ರೀರಾಮಪುರದಲ್ಲಿ ಜುಲೈ 20 ರಿಂದ 27 ರವರೆವಿಗೆ ಒಂದು ವಾರಗಳ ಕಾಲ ವಿವಿಧ ಬಡಾವಣೆಗಳಲ್ಲಿ ಪ್ರದರ್ಶನವನ್ನು ನೀಡಲಾಯಿತು. ಸಮುದಾಯ ಶ್ರೀರಾಮಪುರದ ನೂತನ ಘಟಕಕ್ಕೆ ಜನವಿಜ್ಞಾನ ಜಾಥದಲ್ಲಿ ಅಖಿಲಭಾರತ ಪ್ರವಾಸ ಮಾಡಿ ಅನುಭವ ಪಡೆದ ಕಲಾವಿದರಾದ ಭಾಸ್ಕರ್‌ರವರು ಸಂಚಾಲಕರಾಗಿ ಆಯ್ಕೆಗೊಂಡಿದ್ದಾರೆ.

ನಗರದ ಪೀಣ್ಯ, ದಾಸರಹಳ್ಳಿ, ಕೃಷ್ಣರಾಜಪುರಗಳಲ್ಲಿಯೂ ನೂತನ ಘಟಕಗಳನ್ನು ಹೊಂದಿರುವ ಸಮುದಾಯ ಇನ್ನೂ ಹಲವಾರು ಕಡೆಗಳಲ್ಲಿ ಘಟಕಗಳನ್ನು ರಚಿಸುವ ಯೋಜನೆ ಹೊಂದಿದೆ.

ಸೆಪ್ಟೆಂಬರ್ ಚಳುವಳಿಯತ್ತ ರೈತ ಸಂಪು...

ಮಂಗಳೂರು

ತಾಲ್ಲೂಕು ರೈತ ಸಂಘದ ಸಭೆ ಆಗಸ್ಟ್ 8 ರಂದು ಕಾರ್ಯದರ್ಶಿ ಕಾ|| ರಾಮಚಂದ್ರ ಉಚ್ಚಿಲ್‌ರವರು ಮಂಡಿಸಿದ ವರದಿಯನ್ನು ಚರ್ಚಿಸಿತು. ರಾಜ್ಯದ ಸಹಕಾರಿ ಸಂಘಗಳು ರೈತರ ಸಾಲಕ್ಕೆ ಶೇ. 7 ರ ಬಡ್ಡಿಗೆ ಬದಲಾಗಿ ಹನ್ನೆರಡುವರೆ ರೂಪಾಯಿ ಬಡ್ಡಿ ವಸೂಲಿ ಮಾಡುತ್ತಿರುವುದನ್ನು ಖಂಡಿಸಲಾಯಿತು.

ರೇಷನ್ ಕಡಿತ ಮತ್ತು ಬೆಲೆ ಏರಿಕೆ ಪ್ರತಿಭಟಿಸಿ ಆಗಸ್ಟ್ 23 ರಂದು ನಡೆಯುವ ಸಾರ್ವತ್ರಿಕ ಮುಷ್ಕರ ಬೆಂಬಲಿಸಲು ಹಾಗೂ ಸೆಪ್ಟೆಂಬರ್ 1 ರಿಂದ 15 ರವರೆಗೆ ಜಿಲ್ಲಾಧಿಕಾರಿ ಕಛೇರಿ, ಆಹಣ್ಯಾಧಿಕಾರಿಗಳ ಕಛೇರಿ ಪಿಕೆಟಿಂಗ್ ನಡೆಸಲು ನಿರ್ಣಯಿಸಲಾಯಿತು. ರೈತ ಸಂಘದ ಉಪಾಧ್ಯಕ್ಷ ಕಾ|| ಯು. ಜನಾರ್ಧನನಾಯಕ್‌ರವರು ಕಾರ್ಯಕ್ರಮದ ಬಗ್ಗೆ ವಿವರಿಸಿದರು.

ಉಡುಪಿ

ರೈತರ ಬೆಳೆಗೆ ಲಾಭದಾಯಕ ಬೆಲೆ ಬಡ ರೈತರ ಸಾಲ ರದ್ದು, ಕನಿಷ್ಠ ವೇತನ ಮುಂತಾದ ಬೇಡಿಕೆ ಮುಂದಿಟ್ಟು ನಡೆಯುವ ಸೆಪ್ಟೆಂಬರ್ ರೈತ ಚಳುವಳಿಯನ್ನು ಯಶಸ್ವಿಗೊಳಿಸಲು ಎಡ ಪಕ್ಷಗಳು ಹಾಗೂ ಅವುಗಳ ರೈತ ಸಂಘಗಳು ನೀಡಿರುವ ಕರೆಯಂತೆ ಉಡುಪಿ ತಾಲ್ಲೋಕಿನಾದ್ಯಂತ ಈ ಚಳುವಳಿಯನ್ನು ಯಶಸ್ವಿಗೊಳಿಸಲು ರೈತಸಂಘ ಹಾಗೂ ಕೃಷಿ ಕೂಲಿಗಾರರ ಸಂಘಗಳು ನಿರ್ಧರಿಸಿವೆ. ಸೆಪ್ಟೆಂಬರ್ 1 ರಿಂದ 3ರವರೆಗೆ ತಾಲ್ಲೂಕು ಕಛೇರಿ ಮುಂದೆ ಸಾಮೂಹಿಕ ಧರಣಿ ಸತ್ಯಾಗ್ರಹ ನಡೆಸಲು ನಿರ್ಧರಿಸಲಾಗಿದೆ. 5ರ ನಂತರ ಸಾಮೂಹಿಕ ಪಿಕೆಟಿಂಗ್ ನಡೆಸಲು ಹಾಗೂ ಅರಣ್ಯಾಧಿಕಾರಿ ಕಛೇರಿ ಪಿಕೆಟಿಂಗ್ ನಡೆಸಲು ನಿರ್ಧರಿಸಲಾಗಿದೆ.

ಶ್ಯಾಮಶೆಟ್ಟರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಕಾ|| ದೋಗುಸುವರ್ಣ ಸಂಜೀವನಾಯ್ಕ, ಎನ್. ಸಾಧು ಅಮೀನ್, ವಿಶ್ವನಾಥರೈ, ಬಿ. ರಾಮಕೃಷ್ಣರವರುಗಳು ಮಾತನಾಡಿದರು.

ಕುಂದಾಪುರ

ಕುಂದಾಪುರ ತಾಲ್ಲೂಕಿನ ಉಳ್ಳೂರು ಗ್ರಾಮದ ರೈತ ಸಂಘದ ಸಭೆ ಆಗಸ್ಟ್ 4 ರಂದು ಮಂಜಯ್ಯಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಸೇರಿ ಸೆಪ್ಟೆಂಬರ್ 10 ರಿಂದ 15ರ ವರೆವಿಗೆ ಜರುಗುವ ಅಖಿಲಭಾರತ ಪಿಕೆಟಿಂಗ್ ಚಳುವಳಿಯನ್ನು ಯಶಸ್ವಿಗೊಳಿಸಲು ನಿರ್ಧರಿಸಿತು. ಸಭೆಯಲ್ಲಿ ರೈತ ನಾಯಕರಾದ ಕಾ|| ಶಿವರಾಮಶೆಟ್ಟಿ, ದಾಸ್ ಭಂಡಾರಿಯವರುಗಳು ಕಾರ್ಯಕ್ರಮ ಕುರಿತು ಮಾತನಾಡಿದರು.

ತುಮಕೂರು

ಸೆಪ್ಟೆಂಬರ್ ರೈತ ಚಳುವಳಿಯನ್ನು ಜಿಲ್ಲೆಯಲ್ಲಿ ಯಶಸ್ವಿಗೊಳಿಸಲು ರೈತ ಸಂಘದ ಜಿಲ್ಲಾ ಸಮಿತಿ ಆಗಸ್ಟ್ 21 ರಂದು ತುಮಕೂರಿನ ಪುರಭವನದಲ್ಲಿ ರೈತ ಪ್ರತಿನಿಧಿಗಳ ಹಾಗೂ ರೈತ ಹಿತೈಷಿಗಳ ಸಮಾವೇಶವೊಂದನ್ನು ಏರ್ಪಡಿಸಿದೆ. ಈ ಸಮಾವೇಶವನ್ನುದ್ದೇಶಿಸಿ ಜಿಲ್ಲೆಯ ಪ್ರಮುಖ ರೈತ ಮುಖಂಡರುಗಳು ಮಾತನಾಡಲಿರುವರು.

ದೊಡ್ಡಬಳ್ಳಾಪುರ

ದೇಶದ ಎಡ ಪಕ್ಷಗಳ ನೇತೃತ್ವದ ರೈತ ಕೃಷಿ ಕೂಲಿಗಾರ ಸಂಘಗಳು ಜಂಟಿಯಾಗಿ ಸೆಪ್ಟೆಂಬರ್ 1 ರಿಂದ 15ರವರೆವಿಗೆ ನಡೆಸುತ್ತಿರುವ ಜೈಲ್‌ಭರೋ ಚಳುಳಿವಯನ್ನು ಯಶಸ್ವಿಗೊಳಿಸಲು ರೈತ ಸಂಘದ ದೊಡ್ಡಬಳ್ಳಾಪುರ ತಾಲೋಕು ಸಮಿತಿ ನಿರ್ಧರಿಸಿದೆ. ಸೆಪ್ಟೆಂಬರ್ 9 ರಂದು ಕಾರ್ಯಕರ್ತರ ಸಭೆಯೊಂದು ದೊಡ್ಡಬಳ್ಳಾಪುರದಲ್ಲಿ ಜರುಗಿತು. ಸಭೆಯಲ್ಲಿ ರೈತ ನಾಯಕ ಕಾ|| ಪಿ. ಜಗನ್ನಾಥ್, ಎ. ವಿ. ರಮೇಶ್, ಹಾಗೂ ಕೃಷ್ಣಮೂರ್ತಿಯವರುಗಳು ಮಾತನಾಡಿದರು.

ಬೆಂಗಳೂರಿನಲ್ಲಿ ನವಂಬರ್ 9-12 ರವರೆಗೆ

ಸಿ. ಪಿ. ಐ. (ಎಂ) ರಾಜ್ಯ ಸಮ್ಮೇಳನ

ಕೇರಳದ ತಿರುವನಂತಪುರದಲ್ಲಿ ಪಕ್ಷದ 13 ನೇ ಅಖಿಲ ಭಾರತ ಸಮ್ಮೇಳನವು ಡಿಸೆಂಬರ್ ಕೊನೆಯ ವಾರದಲ್ಲಿ ಜರುಗಲಿದ್ದು ಇದರ ಪೂರ್ವಭಾವಿಯಾಗಿ ಕರ್ನಾಟಕ ರಾಜ್ಯ ಸಮ್ಮೇಳನವು ನವಂಬರ್ 9 ರಿಂದ 12ರ ವರೆವಿಗೂ ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಜರುಗಲಿದೆ. ಪಕ್ಷದ ಪ್ರಧಾನ ಕಾರ್ಯದರ್ಶಿ ಕಾ|| ಇ.ಎಂ.ಎಸ್. ಕಾ|| ಬಿ. ಟಿ. ಆರ್. ಹಾಗೂ ಕಾ|| ಬಾಲನಂದನ್‌ರವರು ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ. ನವಂಬರ್ 12 ರಂದು ಬೆಂಗಳೂರಿನಲ್ಲಿ ಬೃಹತ್ ರ್‍ಯಾಲಿಯನ್ನು ಏರ್ಪಡಿಸಲಾಗಿದೆ. ಈ ಸಮ್ಮೇಳನವನ್ನು ಹಾಗೂ ರ್‍ಯಾಲಿಯನ್ನು ಯಶಸ್ವಿಗೊಳಿಸಲು ರಾಜ್ಯ ಸಮಿತಿ ಪಕ್ಷದ ಎಲ್ಲಾ ಸಂಗಾತಿಗಳಲ್ಲಿ ವಿನಂತಿಸುತ್ತದೆ.

ಡಿ. ವೈ. ಎಫ್. ಐ. ಘಟಕಗಳ ರಚನೆ

ಭದ್ರಾವತಿ

ಭದ್ರಾವತಿಯ ತಾಷ್ಕೆಂಟ್ ನಗರದಲ್ಲಿ ಡಿ. ವೈ. ಎಫ್. ಐ. ಕಛೇರಿಯನ್ನು ಜುಲೈ 29 ರಂದು ರಾಜ್ಯ ಸಹಕಾರ್ಯದರ್ಶಿ ಕಾ|| ಸ್ಟ್ಯಾನ್‌ಲಿವಾಸ್ ಉದ್ಘಾಟಿಸಿದರು. ರೈತ ನಾಯಕ ನರಸಿಂಹಯ್ಯ ಅಧ್ಯಕ್ಷತೆವಹಿಸಿದ್ದರು. ಜಿಲ್ಲಾ ಅಧ್ಯಕ್ಷ ಎಸ್. ಬಿ. ಶಿವಶಂಕರ್ ಹಾಗೂ ರಾಜ್ಯ ಸಮಿತಿ ಸದಸ್ಯ ಕಾ|| ದಾಸ್‌ರವರು ಮಾತನಾಡಿದರು.

ಭದ್ರಾವತಿ ತಾಲೋಕಿನ ಗ್ರಾಮಘಟಕವನ್ನು ಆಗಸ್ಟ್ 7 ರಂದು ರಚಿಸಲಾಯಿತು. ಕಾ|| ಸಿ. ಗಣೇಶ್ (ಅಧ್ಯಕ್ಷ) ಎನ್. ಚಂದ್ರ (ಕಾರ್ಯದರ್ಶಿ) ಟಿ. ದೊಡ್ಡಯ್ಯ (ಉಪಾಧ್ಯಕ್ಷ) ಕೃಷ್ಣಪ್ಪ (ಸಹಕಾರ್ಯದರ್ಶಿ) ಆರ್. ಪಚ್ಚಯ್ಯಪ್ಪನ್‌ರನ್ನೊಳಗೊಂಡ 8 ಜನರ ಸಮಿತಿ ಆಯ್ಕೆ ಮಾಡಲಾಯಿತು.

ಕುಂದಾಪುರ

ತಾಲೋಕಿನ ಬೈಂದೂರಿನ ಬೀಜೂರು ಗ್ರಾಮಘಟಕವನ್ನು ರಾಜ್ಯ ಸಮಿತಿ ಮಾಜಿ ಅಧ್ಯಕ್ಷ ಕಾ|| ಮಹಾಬಲ ವಡೇರಹೋಬಳಿಯವರು ಉದ್ಘಾಟಿಸಿದರು. ತಾಲೋಕು ಸಮಿತಿ ಸದಸ್ಯ ಕುಮಾರ್ ಅತಿಥಿಗಳಾಗಿದ್ದರು. ನೂತನ ಘಟಕಕ್ಕೆ ರಘುಬಿಲ್ಲವ (ಅಧ್ಯಕ್ಷ) ಮುಡುರ. ಬಿ. (ಉಪಾಧ್ಯಕ್ಷ) ಕೃಷ್ಣಮಾಗವೀರ (ಕಾರ್ಯದರ್ಶಿ) ಶ್ಯಾಮಲ ಬಿ. (ಜೊತೆ ಕಾರ್ಯದರ್ಶಿ) ಮುಂತಾದವರುಗಳು ಆಯ್ಕೆ ಗೊಂಡರು.

ಭಾವೈಕ್ಯತಾ ದಿನ

ಆಗಸ್ಟ್ 15 ರಂದು ಬೆಂಗಳೂರಿನ ಶ್ರೀರಾಮಪುರದ ಆರ್.ಜಿ.ಐ. ಕಾಲೋನಿ ಡಿ.ವೈ.ಎಫ್.ಐ. ಘಟಕದ ಆಶ್ರಯದಲ್ಲಿ ಸಂಜೆ ಪಾಠ ಶಾಲೆಯಲ್ಲಿ ರಾಷ್ಟ್ರೀಯ ಭಾವೈಕ್ಯತಾ ದಿನವನ್ನು ಆಚರಿಸಿತು. ಸಭೆಯಲ್ಲಿ 5 ಮಂದಿ ಪೌರ ಕಾರ್ಮಿಕರಿಗೆ ಸ್ಟೀಲ್ ಪ್ಲೇಟ್‌ಗಳನ್ನು ವಿತರಿಸಲಾಯಿತು. ಸಭೆಯನ್ನುದ್ದೇಶಿಸಿ ಸ್ಥಳೀಯ ನಾಯಕರಾದ ಕಾ|| ಗೋಪಾಲಕೃಷ್ಣ, ಮೋಹನ್, ರಾಜೇಂದ್ರಕುಮಾರ್, ಪುರುಷೋತ್ತಮ ಮುಂತಾದವರು ಮಾತನಾಡಿದರು.

ಬೆಂಗಳೂರು ಜಿಲ್ಲಾ ರಾಜಕೀಯ ಸಮಾವೇಶ

ಎಡ ಪಕ್ಷಗಳ ರಾಷ್ಟ್ರವ್ಯಾಪಿ ಆಂದೋಲನದ ಅಂಗವಾಗಿ ಸಿ. ಪಿ. ಐ. (ಎಂ) ಬೆಂಗಳೂರು ಜಿಲ್ಲಾ ಸಮಿತಿಯ ಆಶ್ರಯದಲ್ಲಿ ಕಳೆದ ಜುಲೈ 22 ರಂದು ನಗರದ ಪುರಭವನದಲ್ಲಿ ಪಂಜಾಬ್, ತ್ರಿಪುರ ಮತ್ತು 59ನೇ ತಿದ್ದುಪಡಿಯ ಕುರಿತು ರಾಜಕೀಯ ಸಮಾವೇಶವೊಂದನ್ನು ಏರ್ಪಡಿಸಲಾಗಿತ್ತು.

ಸಿ. ಪಿ. ಐ. (ಎಂ) ಕೇಂದ್ರ ಸಮಿತಿ ಸದಸ್ಯರೂ ಹಾಗೂ ರಾಜ್ಯ ಕಾರ್ಯದರ್ಶಿಯವರಾದ ಪಿ. ರಾಮಚಂದ್ರರಾವ್‌ರವರು ಸಮಾವೇಶವನ್ನು ಉದ್ಘಾಟಿಸಿದರು. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಸಿ. ನಂಜುಂಡಪ್ಪ, ಎನ್. ಕೆ. ಉಪಾಧ್ಯಾಯ ಹಾಗೂ ಎಸ್. ಸೂರ್ಯನಾರಾಯಣರಾವ್‌ರವರು ಮುಖ್ಯ ಭಾಷಣಕಾರರಾಗಿದ್ದರು. ಜಿಲ್ಲಾ ಸಮಿತಿ ಸದಸ್ಯರಾದ ಹೆಚ್. ಎನ್. ನಾಗಮೋಹನ್‌ದಾಸ್ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು. ಎಸ್. ಆರ್. ಆರಾಧ್ಯ ಮೇಲ್ಕಂಡ ವಿಷಯಗಳ ಬಗ್ಗೆ ಮೂರು ಪ್ರತ್ಯೇಕ ನಿರ್ಣಯಗಳನ್ನು ಮಂಡಿಸಿದರು, ಆರ್. ಶ್ರೀನಿವಾಸ್ ವಂದನಾರ್ಪಣೆ ಮಾಡಿದರು. ಇದೇ ಸಂದರ್ಭದಲ್ಲಿ ತ್ರಿಪುರಾ ಪ್ರಜಾಸತ್ತೆಯ ಮೇಲೆ ಕಾಂಗ್ರೆ ಆಕ್ರಮಣ ಎಂಬ ಶೀರ್ಷಿಕೆಯ ಸಿ. ನಂಜುಂಡಪ್ಪನವರು ಬರೆದ ಕಿರುಹೊತ್ತಿಗೆಯೊಂದನ್ನು ಬಿಡುಗಡೆ ಮಾಡಲಾಯಿತು. ಕಾರ್ಯಕ್ರಮದ ಕೊನೆಯಲ್ಲಿ ತ್ರಿಪುರಾ ಕಾಂಗ್ರೆ ಮುಖ್ಯಮಂತ್ರಿಯ ಪ್ರತಿಕೃತಿಯನ್ನು ದಹನ ಮಾಡಿದಾಗ ಎಡರಂಗದ ಮೇಲಿನ ಸರಫ್ಯಾಸಿಸ್ಟ್ ದಬ್ಬಾಳಿಕೆಯನ್ನು ಖಂಡಿಸಿ ಘೋಷಣೆಗಳು ಪ್ರತಿಧ್ವನಿಸಿದವು.

ಪಂಜಾಬ್‌ಗೆ ಸಂಬಂಧಿಸಿದಂತೆ ರಾಜೀವ್ ಲಾಂಗೋವಾಲರ ಒಪ್ಪಂದವನ್ನು ಕೂಡಲೇ ಜಾರಿಗೊಳಿಸಬೇಕೆಂದು, ತ್ರಿಪುರಾದಿಂದ ಸೈನ್ಯ ಪಡೆಗಳನ್ನು ತಕ್ಷಣ ಹಿಂತೆಗೆದುಕೊಳ್ಳಬೇಕೆಂದು ಹಾಗೂ 59ನೇ ಸಂವಿಧಾನ ತಿದ್ದುಪಡಿಯನ್ನು ರದ್ದುಗೊಳಿಸಬೇಕೆಂದು ಸಮಾವೇಶದಲ್ಲಿ ಅಂಗೀಕರಿಸಿದ ನಿರ್ಣಯಗಳಲ್ಲಿ ಒತ್ತಾಯಿಸಲಾಗಿದೆ.

ಪಡಿತರ ಕಡಿತ ಮತ್ತು ಬೆಲೆ ಏರಿಕೆ ವಿರುದ್ಧ

ಆಗಸ್ಟ್ 23 ರಂದು ದ.ಕ. ಜಿಲ್ಲೆಯಾದ್ಯಂತ ಸಾರ್ವತ್ರಿಕ ಮುಷ್ಕರ

ಪಡಿತರ ಅಕ್ಕಿಯ ಪ್ರಮಾಣ ಕಡಿತದ ವಿರುದ್ಧ ಮತ್ತು ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆಯ ವಿರುದ್ಧ ಪ್ರತಿಭಟಿಸಲು ಆಗಸ್ಟ್ 23ರಂದು ದ.ಕ. ಜಿಲ್ಲೆಯಾದ್ಯಂತ ಸಾರ್ವತ್ರಿಕ ಮುಷ್ಕರ ನಡೆಸಲು ಸಿ.ಐ.ಟಿ.ಯು ಜಿಲ್ಲಾ ಸಮಿತಿಯು ಜಿಲ್ಲೆಯ ಕಾರ್ಮಿಕರಿಗೆ ಕರೆ ನೀಡಿದೆ. ಆಗಸ್ಟ್ 14ರಂದು ಮಂಗಳೂರಿನಲ್ಲಿ ಕೆ. ಮೂಸಬ್ಬನವರ ಅಧ್ಯಕ್ಷತೆಯಲ್ಲಿ ಜರುಗಿದ ಜಿಲ್ಲಾ ಸಮಿತಿಯ ಸಭೆಯಲ್ಲಿ ಈ ತೀರ್ಮಾನವನ್ನು ಕೈಗೊಳ್ಳಲಾಯಿತು.

ರೇಶನ್ ವಿತರಣೆಯಲ್ಲಿ ನಗರ ಮತ್ತು ಗ್ರಾಮಾಂತರ ಪ್ರದೇಶಗಳ ನಡುವಿನ ತಾರತಮ್ಯವನ್ನು ಕೊನೆಗೊಳಿಸಬೇಕೆಂದೂ, ಕುಟುಂಬದ ಗಾತ್ರಕ್ಕೆ ಅನುಗುಣವಾಗಿ ಯೂನಿಟ್ ಆಧಾರದಲ್ಲಿ ಎಲ್ಲರಿಗೂ ಸಾಕಷ್ಟು ಪ್ರಮಾಣದಲ್ಲಿ ಅಕ್ಕಿ ವಿತರಿಸಬೇಕೆಂದೂ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ ಸಭೆಯು, ಸಕ್ಕರೆ, ಸಾಬೂನು, ಸೀಮೆಎಣ್ಣೆ, ಖಾದ್ಯತೈಲ ರವೆ, ದ್ವಿದಳ ದಾನ್ಯಗಳು ಇತ್ಯಾದಿ ನಿತ್ಯೋಪಯೋಗಿ ವಸ್ತುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ವಿತರಿಸಬೇಕೆಂದೂ, ಬೆಲೆ ಏರಿಕೆಯನ್ನು ತಡೆಯಲು ಕಟ್ಟುನಿಟ್ಟಾದ ಕ್ರಮಗಳನ್ನು ಕೈಗೊಳ್ಳಬೇಕೆಂದೂ, ಸರಕಾರವನ್ನು ಒತ್ತಾಯಿಸಿತು.

ಸಾರ್ವತ್ರಿಕ ಮುಷ್ಕರದ ಸಿದ್ಧತೆಗಳ ಅಂಗವಾಗಿ 19-8-88 ರಂದು ಮಂಗಳೂರಿನಲ್ಲಿ ಮೆರವಣಿಗೆ ಸಂಜೆ 5-30ಕ್ಕೆ ನೆಹರೂ ಮೈದಾನದಲ್ಲಿ ಸಾರ್ವಜನಿಕ ಸಭೆಯಲ್ಲೂ ಬೃಹತ್ ಸಂಖ್ಯೆಯಲ್ಲಿ ಭಾಗವಹಿಸಿ ಈ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಬೇಕೆಂದು ಸಭೆಯು ಕಾರ್ಮಿಕ ವರ್ಗಕ್ಕೆ ಕರೆ ನೀಡಿದೆ.

ಪಕ್ಷದ ಮಂಗಳೂರು ನಗರ ಸಮ್ಮೇಳನ

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಮಂಗಳೂರು ನಗರ ಸಮಿತಿ ಸಮ್ಮೇಳನವು ಕಾ|| ಉಮಾನಾಥ್‌ರವರ ಅಧ್ಯಕ್ಷತೆಯಲ್ಲಿ ಆಗಸ್ಟ್ 7 ರಂದು ಜರುಗಿತು. ಈ ಸಮ್ಮೇಳನದಲ್ಲಿ ಪಕ್ಷದ ಹಿರಿಯ ಮುಖಂಡರಾದ ಕಾ|| ಕೆ. ಆರ್. ಶ್ರೀಯಾನ್ ಹಾಗೂ ಮಾದವರವರು ದೇಶದ ಇಂದಿನ ಪರಿಸ್ಥಿತಿ ಕುರಿತು ಮಾತನಾಡಿದರು. ಮೂರು ವರ್ಷದ ಚಟುವಟಿಕೆಗಳ ವರದಿಯ ಮೇಲೆ ಚರ್ಚೆ ನಡೆದು ವರದಿಯನ್ನು ಅಂಗೀಕರಿಸಲಾಯಿತು. ನೂತನ ಸಮಿತಿಗೆ ಕಾ|| ಕಮಲಾಕ್ಷಬಂಗೇರರವರನ್ನು ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾಯಿತು.

ಪಡಿತರ ಅಕ್ಕಿ ಪ್ರಮಾಣ ಕಡಿತ ಹಾಗೂ ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆಯನ್ನು ಸಮ್ಮೇಳನವು ಖಂಡಿಸಿತು. ಆಗಸ್ಟ್ 23 ರಂದು ದ.ಕ. ಜಿಲ್ಲೆಯಾದ್ಯಂತ ನಡೆಯುವ ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಗೊಳಿಸಲು ನಿರ್ಣಯ ಕೈಗೊಂಡಿತು.

ಕ್ಲೋಸರ್, ಲೇಆಫ್, ರಿಟ್ರೆಂಚ್‌ಮೆಂಟ್ ವಿರುದ್ಧ ರಾಜ್ಯ ಮಟ್ಟದ ಜವಳಿ ಕಾರ್ಮಿಕರ ಸಮಾವೇಶ

ದೇಶದಲ್ಲಿ 140 ಹಾಗೂ ಕರ್ನಾಟಕ ರಾಜ್ಯದಲ್ಲಿ 14 ಗಿರಣಿ ಕೈಗಾರಿಕೆಗಳು ಕಾನೂನು ಬಾಹಿರವಾಗಿ ಮುಚ್ಚಿದ್ದು ರಾಜ್ಯದ ಸಹಸ್ರಾರು ಕಾರ್ಮಿಕರು ಬೀದಿ ಪಾಲಾಗಿದ್ದು ಕೇಂದ್ರ ಸರ್ಕಾರ ಅನುಸರಿಸುತ್ತಿರುವ ಕಾರ್ಮಿಕ ವಿರೋಧಿ ನೀತಿಯ ಫಲವಾಗಿ ಉಂಟಾಗಿರುವ ಬಿಕ್ಕಟ್ಟನ್ನು ಕುರಿತು ರಾಜ್ಯವ್ಯಾಪಿ ಐಕ್ಯ ಚಳುವಳಿ ರೂಪಿಸಲು, ಕಾರ್ಮಿಕ ಸಮಸ್ಯೆಗಳ ಕುರಿತು ಚರ್ಚಿಸಿ ಹೋರಾಟ ರೂಪಿಸಲು ಆಗಸ್ಟ್ 24, 1988 ರಂದು ಬೆಳಿಗ್ಗೆ 10 ಗಂಟೆಗೆ ಬೆಂಗಳೂರಿನ ಪುರಭವನದಲ್ಲಿ ರಾಜ್ಯಮಟ್ಟದ ಜವಳಿ ಕಾರ್ಮಿಕರ ಸಮಾವೇಶವನ್ನು ಏರ್ಪಡಿಸಲಾಗಿದೆ. ಈ ಸಮಾವೇಶದ ಯಶಸ್ವಿಗೆ ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ., ಹೆಚ್.ಎಂ.ಎಸ್., ಹಾಗೂ ರಾಜ್ಯದ ಇತರ ಸ್ವತಂತ್ರ ಕಾರ್ಮಿಕಸಂಘಗಳನ್ನೊಳಗೊಂಡ ಸ್ವಾಗತ ಸಮಿತಿಯನ್ನು ರಚಿಸಲಾಗಿದೆ. ಸಮಾವೇಶದ ನಂತರ ರಾಜಭವನಕ್ಕೆ ಬೃಹತ್ ರ್‍ಯಾಲಿವೊಂದನ್ನೂ ನಡೆಸಿ ರಾಜ್ಯಪಾಲರಿಗೆ ಮನವಿ ಅರ್ಪಿಸಲಾಗುವುದು. ಸಿ.ಐ.ಟಿ.ಯು. ವಿಗೆ ನೋಂದಾಯಿಸಲ್ಪಟ್ಟ ಹಾಗೂ ಇತರೆ ಎಲ್ಲಾ ಸಂಘಗಳ ಕಾರ್ಮಿಕರು ಈ ಸಮಾವೇಶ ಯಶಸ್ವಿಗೊಳಿಸಲು ಪೂರ್ಣ ಸಹಕಾರ ನೀಡಬೇಕೆಂದು ಸ್ವಾಗತ ಸಮಿತಿ ಕಾರ್ಯದರ್ಶಿಗಳಾದ ಕಾ|| ಪಿ.ಕೆ ಸುಬ್ರಮಣಿಯವರು ವಿನಂತಿಸಿದ್ದಾರೆ.

ಪಡಿತರ ಕಡಿತದ ವಿರುದ್ಧ ಪ್ರದರ್ಶನ

ಜನ ಸಾಮಾನ್ಯರ ಪಡಿತರ ಅಕ್ಕಿ ಮತ್ತಿತರ ಜೀವನಾವಶ್ಯಕ ವಸ್ತುಗಳ ವಿತರಣೆಯಲ್ಲಿ ರಾಜ್ಯ ಸರ್ಕಾರ ಕಡಿತಗೊಳಿಸಿರುವುದನ್ನು ಹಾಗೂ ಕೇಂದ್ರ ಸರ್ಕಾರ ಅಗತ್ಯಕನುಗುಣವಾಗಿ ರಾಜ್ಯಕ್ಕೆ ವಿತರಣೆ ಮಾಡದಿರುವುದನ್ನು ಪ್ರತಿಭಟಿಸಿ ಆಗಸ್ಟ್ 8ರಂದು ನೂರಾರು ರೈತ-ಕಾರ್ಮಿಕರು ಪುರಭವನದಿಂದ ಮೆರವಣಿಗೆ ನಡೆಸಿ ಬಹಿರಂಗ ಸಭೆಯನ್ನು ನಡೆಸಿದರು.

ತಹಸೀಲ್ದಾರ್ ಮೂಲಕ ರಾಜ್ಯದ ರಾಜ್ಯಪಾಲರಿಗೆ ಮನವಿಯೊಂದನ್ನು ನೀಡಿದ ನಿಯೋಗದಲ್ಲಿ ಕಾ|| ಪಿ. ಜಗನಾಥ್, ಎ.ವಿ. ರಮೇಶ್, ಕೃಷ್ಣಮೂರ್ತಿ, ರಾಮಾಂಜನೇಯರವರುಗಳು ಇದ್ದರು. ದಿನ ಬಳಕೆ ವಸ್ತುಗಳನ್ನು ಕಾಳಸಂತೆ ಕೋರರು ಹೆಚ್ಚಿನ ಬೆಲೆಯಲ್ಲಿ ಮಾರಾಟ ಮಾಡಿ ಭಾರಿ ಲಾಭಗಳಿಸಲಾಗುತ್ತಿದೆ ಎಂದು ಮನವಿಯಲ್ಲಿ ಆರೋಪಿಸಲಾಗಿದೆ.

ತರಗತಿ ಬಹಿಷ್ಕಾರ

ಕುಂದಾಪುರದಲ್ಲಿ ಎಸ್. ಎಫ್. ಐ. ರಾಜ್ಯ ಸಮಿತಿ ಕರೆಯಂತೆ ಆಗಸ್ಟ್ 10 ರಂದು ಕುಂದಾಪುರ ಕಾಲೇಜ್ ಮತ್ತು ಹೈಸ್ಕೂಲ್‌ನ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಸುಮಾರು 3 ಸಾವಿರ ವಿದ್ಯಾರ್ಥಿಗಳ ಬೃಹತ್ ರ್‍ಯಾಲಿ ನಡೆಸಿದರು. ತಹಸೀಲ್ದಾರ್‌ರಿಗೆ ಬೇಡಿಕೆಗಳ ಮನವಿ ಪತ್ರ ಅರ್ಪಿಸಲಾಯಿತು. ಜಾತಿಯವಾದಿ ವಿದ್ಯಾರ್ಥಿ ಗುಂಪಿನ ಅಡೆತಡೆಗಳಿದ್ದರೂ ಬಹಿಷ್ಕಾರ ಚಳುವಳಿ ಯಶಸ್ವಿಗೊಳಿಸಿದ ವಿದ್ಯಾರ್ಥಿ ಸಮುದಾಯವನ್ನು ಎಸ್. ಎಫ್. ಐ. ಘಟಕ ಅಭಿನಂದಿಸುತ್ತದೆ ಎಂದು ಕಾರ್ಯದರ್ಶಿ ಚಂದ್ರಶೇಖರ್‌ರವರು ತಿಳಿಸಿದ್ದಾರೆ.

ಸೆಪ್ಟೆಂಬರ್‌ನ ರೈತ ಮತ್ತು ಕೃಷಿ ಕೂಲಿಗಾರರ ಚಳುವಳಿಯತ್ತ

ಗ್ರಾಮೀಣ ಸಾಲದ ಹೊರೆ

—ಪಿ. ಕೆ. ಟಂಡನ್

ಅಖಿಲ ಭಾರತ ಕಿಸಾನ್ ಸಭಾ 1929-34ರಲ್ಲಿ ಭಾರಿ ಆರ್ಥಿಕ ಹಿಂಜರಿತದ ಅವಧಿಯಲ್ಲಿ ಹುಟ್ಟಿಕೊಂಡಿತು. ಆ ಅವಧಿಯಲ್ಲಿ ಕೃಷಿ ಉತ್ಪನ್ನಗಳ ಬೆಲೆಗಳು ದೊಡ್ಡ ಪ್ರಮಾಣದಲ್ಲಿ ಕುಸಿದು ರೈತರು ದೊಡ್ಡ ಸಂಖ್ಯೆಯಲ್ಲಿ ಭೂಮಿ ಕಳೆದುಕೊಳ್ಳತೊಡಗಿದರು. ಗೇಣಿ, ಕಂದಾಯ ಮತ್ತು ಸಾಲ ಮರುಪಾವತಿ ಮಾಡಲಾಗದೆ ಕೋರ್ಟುಗಳ ಮೂಲಕ ರೈತನ ಜಮೀನು ಕಿತ್ತುಕೊಳ್ಳಲಾಗುತ್ತಿತ್ತು. ಗೇಣಿ, ಕಂದಾಯ ಕಡಿಮೆ ಮಾಡಲು, ರೈತನ ಜಮೀನು ಕಿತ್ತುಕೊಳ್ಳದಂತೆ ರಕ್ಷಣೆ ಮತ್ತು ಸಾಲ ಮನ್ನಾ ಮಾಡಲು ಹೂಡಿದ ಚಳುವಳಿಯ ಸುತ್ತ ಕಿಸಾನ್ ಸಭಾ ಸಂಘಟನೆ ಹರಡಿತು.

ಲಕ್ನೋನಲ್ಲಿ 1936ರಲ್ಲಿ ನಡೆದ ಸ್ಥಾಪನಾ ಅಧಿವೇಶನದಲ್ಲೇ ಕಿಸಾನ್ ಸಭಾ 'ಗ್ರಾಮೀಣ ಸಾಲದ ಹೊರೆ ಮತ್ತು ವಿಪರೀತ ಬಡ್ಡಿ ದರದ ಪರಿಸ್ಥಿತಿಯನ್ನು ಗಮನಿಸಿತ್ತು. ಅದೇ ಅಧಿವೇಶನದಲ್ಲೇ ಹಳೆಯ ಸಾಲ ಮತ್ತು ಅದರ ಮೇಲಾಗಿರುವ ಬಡ್ಡಿಯ ಮರುಪಾವತಿ ರದ್ದು ಮಾಡಬೇಕೆಂದು ಒತ್ತಾಯಿಸಿತ್ತು. ಇದಲ್ಲದಿದ್ದರೆ ಐದು ವರ್ಷಗಳ ಸಾಲಕ್ಕೆ ವಜಾ, ಬಡ್ಡಿಗೆ ದುಡ್ಡು ಕೊಡುವವರಿಗೆ ಲೈಸೆನ್ಸ್, ಶೇಕಡಾ 5ಕ್ಕಿಂತ ಹೆಚ್ಚಿನ ಚಕ್ರಬಡ್ಡಿ ವಿಧಿಸುವ ವಿರುದ್ಧ ಪ್ರತಿಬಂಧ, ಶೇಕಡಾ 5ರ ಸರಳ ಬಡ್ಡಿಗಿಂತ ಹೆಚ್ಚಿಲ್ಲದ ದರದಲ್ಲಿ ರೈತರಿಗೆ ಕೃಷಿ ಸಾಲ, ಸಾಲ ಮರುಪಾವತಿಗೆ ಮನ್ನೆ, ಜಮೀನು ಕಿತ್ತುಕೊಳ್ಳುವ ಪದ್ಧತಿ ರದ್ದತಿ ಬೇಡಿಕೆಗಳನ್ನು ಮುಂದಿಟ್ಟಿತು. ಅಂದಿನಿಂದ ಇಂದಿನವರೆಗೆ ಈ ಬೇಡಿಕೆಗಳಿಗೆ ಕಿಸಾನ್ ಸಭಾ ಸತತವಾಗಿ ಹೋರಾಡಿದೆ.

ಸ್ವಾತಂತ್ರ್ಯ ನಂತರ ರಿಸರ್ವ್ ಬ್ಯಾಂಕ್ 1951ರಲ್ಲಿ ಮೊದಲನೇ ಗ್ರಾಮೀಣ ಸಾಲ ಸರ್ವೆ ನಡೆಸಿತು. ಗ್ರಾಮೀಣ ಸಾಲದ ದುರ್ಭರ ಪರಿಸ್ಥಿತಿ ಬಗ್ಗೆ ಸರ್ವೇ ಗಮನ ಸೆಳೆದು, ಪ್ರಾಥಮಿಕ ಹಂತದಿಂದ ಹಿಡಿದು ಜಿಲ್ಲೆ, ರಾಜ್ಯ, ದೇಶದ ಮಟ್ಟದಲ್ಲಿ ಸಹಕಾರಿ ಸಂಘಗಳ ಮೂಲಕ ಸಾಲ ಒದಗಿಸಬೇಕೆಂದು ಸಲಹೆ ಮಾಡಿತು. ಕಿಸಾನ್ ಸಭಾ ಈ ರೀತಿ ಸ್ಥಾಪಿತವಾಗುವ ಸಹಕಾರಿ ಸಂಘಗಳಲ್ಲಿ ಕೆಲಸ ಮಾಡಿ ಚಳುವಳಿಯ ಪ್ರಭಾವದಿಂದ ಗ್ರಾಮೀಣ ಬಡವರಿಗೆ ಇದರಿಂದ ಹೆಚ್ಚಿನ ಲಾಭ ದೊರಕುವಂತೆ ಮಾಡಬೇಕು ಎಂದು ನಿರ್ದೇಶನ ನೀಡಿತು.

1951ರ ಸರ್ವೆ ಗ್ರಾಮೀಣ ಸಾಲದ ಹೊರೆ 900 ಕೋಟಿ ರೂ. ಗಳಷ್ಟು ಇದೆ ಎಂದು ಹೊರಗೆಡವಿತು. ಇದಲ್ಲದೆ 750 ಕೋಟಿ ರೂ. ಗಳ ಸಾಲದ ಅಗತ್ಯವಿದೆ ಎಂದು ಅಂದಾಜು ಮಾಡಿತು. ಎರಡನೆಯ ಯೋಜನೆಯಲ್ಲಿ ಇದರ ಶೇಕಡಾ 20ರಷ್ಟು ಮಾತ್ರ ಇದಕ್ಕಾಗಿ ತೆಗೆದಿಟ್ಟಾಗ, 14ನೇ ಕಿಸಾನ್ ಸಭಾ ಅಧಿವೇಶನ ಪೂರ್ಣ ಹಣ ಕಾಸು ಒದಗಿಸಬೇಕೆಂದು ಒತ್ತಾಯಿಸಿತು.

ಅಂದಿನಿಂದ ಇಂದಿನವರೆಗೆ ಸಾಲದ ಸಮಸ್ಯೆ ಉಲ್ಬಣಗೊಳ್ಳುತ್ತಿದ್ದರೂ ಅಧಿಕೃತ ಏಜೆನ್ಸಿಗಳು ಇದನ್ನು ಮುಚ್ಚಿಡಲು ಪ್ರಯತ್ನಿಸುತ್ತಿವೆ.

ಮೋಸದ ಸರ್ವೇ

1981ರಲ್ಲಿ ನಡೆಸಿದ ಅಖಿಲ ಭಾರತ ಸಾಲ ಮತ್ತು ಹಣ ತೊಡಗಿಸುವಿಕೆಯ ಸರ್ವೇ ಜೂನ್ 30, 1981 ರಲ್ಲಿದ್ದಂತೆ ಸಾಲದ ಚಿತ್ರ ನೀಡುತ್ತದೆ. ಸರ್ವೇ ಸಾಲದಲ್ಲಿ ಅಧಿಕೃತ ಸಂಸ್ಥೆಗಳ ಪಾಲು ಮತ್ತು ಅದನ್ನು ಪಡೆದವರು ಅವರು ಸಾಲ ಪಡೆದಿರುವ ಉದ್ದೇಶದ ಬಗ್ಗೆ ಸರಿಯಾದ ಚಿತ್ರ ನೀಡುತ್ತದೆ. ಆದರೆ ಜಮೀನುದಾರರು, ಲೇವಾದೇವಿಗಾರರ ಮತ್ತು ವರ್ತಕರು ಕೊಟ್ಟಿರುವ ಸಾಲದ ಬಗ್ಗೆ ವಿವರಗಳು ನಿಜವಾದ ಸಂಖ್ಯೆಗಿಂತ ಭಾರಿ ಕಡಿಮೆ ಇದೆ. ಯಾಕೆಂದರೆ ಈ ಜನ ತಾವು ಮಾಡುತ್ತಿರುವ ಸುಲಿಗೆಯ ಬಗ್ಗೆ ವಿವರಗಳನ್ನು ಕೊಡುತ್ತಾರೆ ಎಂದು ನಿರೀಕ್ಷಿಸಲಾಗುವುದಿಲ್ಲ.

ತುರ್ತು ಪರಿಸ್ಥಿತಿ ದಿನಗಳ 20 ಅಂಶದ ಕಾರ್ಯಕ್ರಮದಲ್ಲಿ ಐದನೇ ಅಂಶ "ಗ್ರಾಮೀಣ ಸಾಲದ ಹೊರೆಯ ಮನ್ನಾ" ಹಲವು ರಾಜ್ಯಗಳಲ್ಲಿ ಭೂಹೀನ ಕೃಷಿ ಕಾರ್ಮಿಕರ ಸಾಲದ ಹೊರೆ ಮನ್ನಾ ಮಾಡುವ ಅಥವಾ ಕಡಿಮೆ ಮಾಡುವ ನಿರ್ಧಾರಗಳನ್ನು ಕೈಗೊಳ್ಳಲಾಯಿತು. ಆದರೆ ಈ ದುರ್ಬಲ ವರ್ಗಗಳಿಗೆ ಬದಲಿ ಸಾಲದ ವ್ಯವಸ್ಥೆ ಹೂಡದ್ದರಿಂದ, ಈ ನಿರ್ಧಾರಗಳೆಲ್ಲಾ ನೀರು ಪಾಲಾದವು. ಲೇವಾದೇವಿಗಾರರು ಹಳ್ಳಿಯ ಬಡವರಿಗೆ ಸಾಲದ ಒಂದೇ ಮೂಲ. ಬಡವರು ಅವರ ದುಸ್ತರ ಪರಿಸ್ಥಿತಿಯಲ್ಲಿ ಜೀವನ ಮಾಡಲೂ ಸಹ ಲೇವಾದೇವಿಗಾರರ ಮೇಲೆ ಅವಲಂಬಿಸಿರುತ್ತಾರೆ. ಆದ್ದರಿಂದ ಸರ್ಕಾರ ಸಾಲವನ್ನು 'ಮನ್ನಾ' ಮಾಡಿದರೂ, ಬಡವರು ಲೇವಾದೇವಿಗಾರರಿಗೆ ಸಾಲ ಮರುಪಾವತಿ ಮಾಡುವ ಆಶ್ವಾಸನೆಯ ಮೇಲೆ ಮಾತ್ರ ಮುಂದೆ ಸಾಲ ಪಡೆಯುವಂತಾಯಿತು.

ಸರ್ವೇ ಹಳ್ಳಿಯ ಸಾಲಗಾರರನ್ನು ಎರಡು ವಿಧಗಳಾಗಿ ವಿಂಗಡಿಸಿತು. ಸಾಗುವಳಿದಾರರಲ್ಲಿ 0.005 ಎಕ್ರೆಗಿಂತ ಹೆಚ್ಚು ಜಮೀನು ಇರುವವರೆಲ್ಲ ಸೇರುತ್ತಾರೆ. ಸಾಗುವಳಿದಾರರದವರಲ್ಲಿ ಭೂಹೀನ ಕೃಷಿ ಕಾರ್ಮಿಕರು, ಕಸಬುದಾರರು ಮತ್ತು ಗ್ರಾಮೀಣ ಕಾರ್ಮಿಕರು ಸೇರಿದ್ದಾರೆ. ಈ ವಿಂಗಡಣೆಯಲ್ಲಿ ಚೂರುಪಾರು ಭೂಮಿ ಇರುವ ಬಡ ರೈತರು ಮತ್ತು ಜಮೀನುದಾರರು ಶ್ರೀಮಂತ ರೈತರು ಒಂದೇ 'ಸಾಗುವಳಿದಾರರ' ವಿಭಾಗಕ್ಕೆ ಸೇರುತ್ತಾರೆ ಎಂದು ಗಮನಿಸಬೇಕು.

1960-61ರ ಬೆಲೆಗಳಲ್ಲಿ ಈ ಸರ್ವೇಯ ಅಂಕಿ ಸಂಖ್ಯೆಗಳನ್ನು ವಿಶ್ಲೇಷಿಸಿದರೆ ಈ ಕೆಳಗಿನ ಅಸಂಬದ್ಧ ತೀರ್ಮಾನಗಳಿಗೆ ಬರಬೇಕಾಗುತ್ತದೆ.

1961 ರಿಂದ 1971ರವರೆಗೆ ಸಾಗುವಳಿದಾರರ ಸಾಲದ ಹೊರೆ ಹೆಚ್ಚು ಕಡಿಮೆ ಒಂದೇ ಆಗಿತ್ತು. ಸಾಗುವಳಿದಾರರಲ್ಲದವರ ಸಾಲದ ಹೊರೆ ಕಡಿಮೆಯಾಗಿದೆ. 1971 ರಿಂದ 1981 ಎರಡು ವಿಧದ ಸಾಲಗಾರರ ಸಾಲದ ಹೊರೆ ಕಡಿಮೆಯಾಗಿದೆಯಂತೆ. ಸಾಗುವಳಿ ಮಾಡುವವರ ಸಾಲದ ಹೊರೆ ಹೆಚ್ಚಿನ ವೇಗದಲ್ಲಿ ಕಡಿಮೆಯಾಗುತ್ತಿದೆ.

ಅಂದರೆ ಕೃಷಿ ಕಾರ್ಮಿಕರು ಮತ್ತು ಗ್ರಾಮೀಣ ಕಸಬುದಾರರ ಸಾಲದ ಹೊರೆ ಈ ಸರ್ವೇ ಪ್ರಕಾರ ಕಡಿಮೆಯಾಗುತ್ತಿದೆ. ಸಾಗುವಳಿದಾರರಲ್ಲಿ 1971ರಲ್ಲಿ ಶೇಕಡಾ 41.3 ಮನೆಗಳಲ್ಲಿ ಸಾಲದ ಹೊರೆ ಇದ್ದರೆ 1981ರ ಹೊತ್ತಿಗೆ ಶೇಕಡಾ 19.4 ಕ್ಕೆ ಇಳಿದಿದೆ.

ಗಂಭೀರ ಪರಿಸ್ಥಿತಿ

ಈ ಸರ್ವೇ, ಸಾಗುವಳಿದಾರರ ಶೇಕಡಾ 55 ಮತ್ತು ಇತರರ ಶೇಕಡಾ 75 ಭಾಗ ಏನನ್ನೂ ಅಡವು ಇಡದೇ ಸಾಲ ಪಡೆದಿದ್ದಾರೆ ಎನ್ನುವಾಗ, ಗ್ರಾಮೀಣ ಭಾರತದಲ್ಲಿರುವ ಸಾಮಾಜಿಕ ಪರಿಸ್ಥಿತಿಯ ಆಳವಾದ ಅಧ್ಯಯನ ಮಾಡಿದಂತೆ ಕಂಡು ಬರುವುದಿಲ್ಲ. ಏಕೆಂದರೆ ಇಂತಹ ಸಾಲ ಸಾಗುವಳಿದಾರರು ಪಡೆದ ಒಟ್ಟು ಸಾಲದ ಶೇಕಡಾ 10.39, ಇತರರ ಒಟ್ಟು ಸಾಲದ ಶೇಕಡಾ 21.42 ಭಾಗ ಎಂದು ಸರ್ವೇ ಮುಚ್ಚಿಡುತ್ತದೆ.

ಅಡವು ಇಡದೆ ಕೊಟ್ಟ ಈ ಸಾಲ, ಜಮೀನುದಾರರ ಲೇವಾದೇವಿಗಾರರ ಔದಾರ್ಯದ ಫಲವಲ್ಲ. ಭೂಮಾಲೀಕರು ಹೇಳಿದ ಕೂಲಿಗೆ ಸಾಗುವಳಿ ಬಡ ರೈತರು ಮಾಡಿದರೆ, ಸಾಲ ಕೊಟ್ಟು ಪಾಶದಲ್ಲಿ ಸಿಲುಕಿಸಲು ಅವರು ತಯಾರು. ಅವರಿಗೆ ಸಾಲ ವಸೂಲಿ ಮಾಡಲು ಗೊತ್ತು. ಯಾಕೆಂದರೆ ಸಾಲ ವಾಪಸು ಕೊಡದಿದ್ದರೆ ಬಡಿತ, ಮನೆ ಸುಡುವುದರಿಂದ ಹಿಡಿದು ಹೆಂಗಸರ ಮೇಲೆ ಅತ್ಯಾಚಾರ ಮುಂತಾದ ಹಲವು ಅಸ್ತ್ರಗಳಿವೆ. ಇಂತಹ ಸಾಲಗಳನ್ನು ಏನನ್ನೂ ಅಡವು ಇಡದೆ ಕೊಟ್ಟ ಸಾಲ ಎಂದು ಸರ್ವೇ ಕರೆಯುತ್ತದೆ.

ಸರ್ವೆ ಮಾಡಿದವರು ವಸ್ತು ರೂಪದ ಸಾಲದ ಬಗ್ಗೆ ಸರಿಯಾದ ಚಿತ್ರ ಪಡೆಯಲು ಪ್ರಯತ್ನಿಸಿಲ್ಲ. ಬೀಜ, ಗೊಬ್ಬರ, ಹಸು-ಎತ್ತು, ಪಂಪುಸೆಟ್ಟು, ಕೃಷಿ ಯಂತ್ರಗಳನ್ನು ಬಾಡಿಗೆ ಕೊಡುವ ರೂಪದಲ್ಲಿಯೂ ಇಂದು ಸಾಲ ನೀಡಲಾಗುತ್ತಿದೆ. ಇದು ಬಡರೈತರ ಸಾಗುವಳಿ ವೆಚ್ಚವನ್ನು ಏರಿಸುತ್ತದೆ. ಕೃಷಿಯ ಏರುಪೇರುಗಳಿಂದ ಈ ರೀತಿಯ ಸಾಲವನ್ನು ವಾಪಸು ಮಾಡುವುದು ಇನ್ನೂ ಕಷ್ಟವಾಗುತ್ತದೆ.

ಸಾಲದ ಹೊರೆ

ಗ್ರಾಮೀಣ ಸಾಲದ ಬಗ್ಗೆ ಅಂಕಿ ಸಂಖ್ಯೆಗಳನ್ನು ವಿಶ್ಲೇಷಿಸಿದರೆ ಸಾಲದ ಹೊರೆಯ ಗಂಭೀರತೆ ಅರಿವಾಗುತ್ತದೆ.

ಮೊದಲನೆಯದಾಗಿ, ಹೊಂದಿರುವ ಆಸ್ತಿ, ಆದಾಯದ ಗುಂಪುಗಳ ಸಾಲದ ಹೊರೆಯನ್ನು ಗಮನಿಸಿದರೆ, ಆದಾಯ ಹೆಚ್ಚಿದಂತೆ ಯಾವುದೇ ಗುಂಪಿನಲ್ಲಿ ಸಾಲ ಮರುಪಾವತಿ ಮಾಡಬೇಕಾದ ಕುಟುಂಬಗಳ ಸಂಖ್ಯೆಯ ಶೇಕಡಾ ಏರುತ್ತಾ ಹೋಗುತ್ತದೆ. ಹಾಗೇನೇ ಪ್ರತಿ ಕುಟುಂಬ ಕೊಡಬೇಕಾದ ಸರಾಸರಿ ಬಾಕಿ ಸಾಲದ ಪ್ರಮಾಣ ಏರುತ್ತಾ ಹೋಗುತ್ತದೆ. ಮೊದಲ ನೋಟಕ್ಕೆ ಆಸ್ತಿ ಹೆಚ್ಚಿದಷ್ಟು ಸಾಲದ ಹೊರೆ ಹೆಚ್ಚಿದೆ ಎಂದು ಕಂಡರೂ, ಇದು ನಿಜವಲ್ಲ. ಕುಟುಂಬ ಹೊಂದಿರುವ ಆಸ್ತಿ-ಆದಾಯದ ಶೇಕಡಾವಾಗಿ ಸಾಲದ ಪ್ರಮಾಣ ನೋಡಿದರೆ ಇದು ತಿಳಿಯುತ್ತದೆ. ಇದು ಕುಟುಂಬದ ಆದಾಯ ಹೆಚ್ಚುತ್ತಾ ಹೋದಂತೆ ಶೇಕಡಾವಾರು ಸಾಲ ಬಾಕಿ ಇಳಿಯುತ್ತಾ ಹೋಗುತ್ತದೆ.

ಎರಡನೆಯದಾಗಿ, ಪ್ರತಿ ಆದಾಯದ ಗುಂಪು ಯಾವುದೇ ಬಡ್ಡಿಯ ದರಕ್ಕೆ ಪಡೆದುಕೊಂಡ ಸಾಲದ ಪ್ರಮಾಣ ಅಧ್ಯಯನ ಮಾಡಿದರೆ, ಆಸಕ್ತಿದಾಯಕ ವಿಷಯಗಳು ತಿಳಿದು ಬರುತ್ತವೆ.

ಇದರ ಪ್ರಕಾರ ಅತ್ಯಂತ ಕಡಿಮೆ ಆದಾಯದ ಗುಂಪು ಬಡ್ಡಿಯಿಲ್ಲದೆ ಪಡೆಯುವ ಮತ್ತು ಅತ್ಯಂತ ಹೆಚ್ಚಿನ ಬಡ್ಡಿದರ (ಶೇಕಡಾ 20 ಕ್ಕಿಂತ ಹೆಚ್ಚಿನ ದರ) ದಿಂದ ಪಡೆದ ಸಾಲದ ಪ್ರಮಾಣ ಅತ್ಯಂತ ಹೆಚ್ಚು. ಇವೆರಡೂ ಭೂಮಾಲೀಕರು ಮತ್ತು ಲೇವಾದೇವಿಗಾರರು ಕೊಟ್ಟಿರುವ ಸಾಲಗಳು. ಮೊದಲನೆಯ ರೀತಿ ಸಾಲ ಕೊಟ್ಟು ಒತ್ತೆಯಾಳುಗಳನ್ನಿಟ್ಟುಕೊಳ್ಳುವುದಾದರೆ, ಎರಡನೆಯದು ಅತ್ಯಂತ ಹೆಚ್ಚಿನ ಬಡ್ಡಿ ಸಂಪಾದಿಸುವುದು. ಇದೇ ಅಂಕಿ ಸಂಖ್ಯೆಗಳನ್ನು ವಿಶ್ಲೇಷಿಸಿದರೆ ಆದಾಯ ಹೆಚ್ಚಿದಂತೆ ಈ ಎರಡೂ ಬಡ್ಡಿದರಗಳಲ್ಲಿ ಸಾಲದ ಪ್ರಮಾಣ ಕಡಿಮೆಯಾಗುತ್ತಾ ಹೋಗುತ್ತದೆ. ಶೇಕಡಾ 10-15 ಬಡ್ಡಿದರದಲ್ಲಿ ಕೊಂಡ ಸಾಲದ ಪ್ರಮಾಣ ಏರುತ್ತಾ ಹೋಗುತ್ತದೆ. ಇದು ಸಹಕಾರಿ ಸಂಘಗಳು ತೆಗೆದುಕೊಳ್ಳುವ ಬಡ್ಡಿಯ ಪ್ರಮಾಣ. ಅಂದರೆ ಹೆಚ್ಚಿನ ಆದಾಯ ಗುಂಪುಗಳು ಹೆಚ್ಚೆಚ್ಚು ಸಹಕಾರಿ ಸಂಘದ ಮೂಲಕ ದೊರೆಯುವ ಸಾಲಗಳನ್ನು ಬಗಲಿಗೆ ಹಾಕಿಕೊಳ್ಳುತ್ತವೆ.

'ಬಡ ರೈತರ ಮತ್ತು ಕೃಷಿ ಕೂಲಿಗಾರರ ಮೇಲಿರುವ ಸಾಲದ ಹೊರೆ ಮತ್ತು ಇತರ ಬಾಕಿಗಳನ್ನು ರದ್ದು ಮಾಡುವುದು' ಸೆಪ್ಟೆಂಬರ್ ಚಳುವಳಿಯಲ್ಲಿ ಎಡ ನಾಯಕತ್ವದ ರೈತ ಮತ್ತು ಕೃಷಿ ಕೂಲಿಕಾರರ ಸಂಘಟನೆಗಳು ಮುಂದೊಡ್ಡುವ ಪ್ರಮುಖ ಬೇಡಿಕೆಗಳಲ್ಲೊಂದು.

ಸಾಲದ ಮೂಲ

ಇದೇ ಮಾತು, ಬೇರೆ ಬೇರೆ ಆದಾಯ ಗುಂಪುಗಳು ಅನುಕ್ರಮವಾಗಿ ಆರ್ಥಿಕ ಸಂಸ್ಥೆಗಳಿಂದ ಮತ್ತು ಖಾಸಗಿ ಮೂಲಗಳಿಂದ ಪಡೆದ ಸಾಲದ ಪ್ರಮಾಣಗಳಿಂದ ಸ್ಪಷ್ಟವಾಗುತ್ತದೆ. ಗುಂಪಿನ ಆದಾಯ ಪ್ರಮಾಣ ಹೆಚ್ಚಿದಂತೆ ಆರ್ಥಿಕ ಸಂಸ್ಥೆಗಳಿಂದ ಪಡೆದ ಸಾಲದ ಪ್ರಮಾಣ ಹೆಚ್ಚುತ್ತಾ ಹೋಗುತ್ತದೆ. 5 ಲಕ್ಷಕ್ಕಿಂತ ಹೆಚ್ಚು ಆದಾಯ ಇರುವ ಕುಟುಂಬಗಳು ಹೆಚ್ಚು ಕಡಿಮೆ ಎಲ್ಲಾ ಸಾಲಗಳನ್ನು ಆರ್ಥಿಕ ಸಂಸ್ಥೆಗಳಿಂದ ಪಡೆಯುತ್ತಾರೆ.

ವಿವಿಧ ಆದಾಯ ಗುಂಪುಗಳು ವಿವಿಧ ಉದ್ದೇಶಗಳಿಗೆ ತೆಗೆದುಕೊಂಡ ಸಾಲದ ಪ್ರಮಾಣ ವಿಶ್ಲೇಷಿಸಿದರೆ 'ಉತ್ಪಾದಕ ಖರ್ಚು'ಗಳಿಗೆ ತೆಗೆದುಕೊಂಡ ಪ್ರಮಾಣ ಗುಂಪಿನ ಆದಾಯ ಹೆಚ್ಚಿದಂತೆ ಹೆಚ್ಚುತ್ತಾ ಹೋಗುತ್ತದೆ. 'ಮನೆವಾರ್ತೆ ಖರ್ಚು'ಗಳಿಗೆ ತೆಗೆದುಕೊಂಡ ಸಾಲದ ಪ್ರಮಾಣ ಕಡಿಮೆ ಆದಾಯದ ಗುಂಪುಗಳಲ್ಲಿ ಜಾಸ್ತಿ. 'ಉತ್ಪಾದಕ ಖರ್ಚು'ಗಳು ಕೃಷಿ, ಕೃಷಿಯೇತರ ವ್ಯವಹಾರಗಳಲ್ಲಿ ಬಂಡವಾಳ ತೊಡಗಿಸುವುದಕ್ಕೆ ಇನ್ನೊಂದು ಹೆಸರು. ಅಲ್ಲದೆ ಕಡಿಮೆ ಆದಾಯದ ಕುಟುಂಬಗಳು ಎಲ್ಲದಕ್ಕೂ ಸಾಲ ಮಾಡಬೇಕಾಗುತ್ತದೆ ಎಂದರ್ಥ.

ಎರಡು ರೀತಿಯ ಸಾಲಗಳು

ಎರಡು ರೀತಿಯ ಸಾಲಗಳು ಇವೆ. ಆದರೆ ಅಧಿಕೃತ ಅಂಕಿಸಂಖ್ಯೆಗಳು ಈ ಎರಡು ವಿಧಗಳನ್ನು ಕಲಸುಮೇಲೋಗರ ಮಾಡುತ್ತವೆ. ಬಡವರ ಸಾಲ ಬಡತನ ಮತ್ತು ನಿರುದ್ಯೋಗದ ಫಲ. ದಿನನಿತ್ಯದ ಖರ್ಚುಗಳಿಗೂ ಅವರು ಸಾಲ ಮಾಡಬೇಕಾಗುತ್ತದೆ. ಬಡತನ ನಿವಾರಣೆ ಆಗದೆ ಈ ಸಾಲ ಮರುಪಾವತಿ ಮಾಡುವ ತಾಕತ್ತು ಅವರಿಗೆ ಬರುವುದಿಲ್ಲ. ಅವರ ಸಾಲದ ಬಾಕಿ ಹೆಚ್ಚಾಗುತ್ತಾ ಹೋದಂತೆ, ಅವರಿಗೆ ಆರ್ಥಿಕ ಸಂಸ್ಥೆಗಳ ಸಾಲ ಸಿಕ್ಕಿದರೂ ಮರು ಪಾವತಿ ಮಾಡಲಾಗದೆ ಇಂತಹ ಸಾಲ ತೆಗೆದುಕೊಳ್ಳುವ ಅರ್ಹತೆ ಕಳೆದುಕೊಳ್ಳುತ್ತಾರೆ. ಆದ್ದರಿಂದ ಅವರು ಒತ್ತೆಯಾಳುಗಳಾಗಿ ಕೆಲಸ ಮಾಡಬೇಕಾಗುತ್ತದೆ. ಅಥವಾ ತಮ್ಮ ಉತ್ಪನ್ನಗಳನ್ನು ಮಾರುಕಟ್ಟೆಯ ಬೆಲೆಗಿಂತ ಕಡಿಮೆಗೆ ಸಾಲ ಕೊಟ್ಟವರಿಗೆ ಕೊಡಬೇಕಾಗುತ್ತದೆ. ಸಾಲದ ಹೊರೆ ಅವರ ಹತಾಶೆ, ಶೋಷಣೆ, ಭೂಮಾಲೀಕರಿಗೆ ಅಡಿಯಾಳುತನದ ಸೂಚ್ಯಂಕ.

ಆದರೆ ಭೂಮಾಲೀಕರು ಮತ್ತು ಶ್ರೀಮಂತ ರೈತರ ಸಾಲ ಸಹ ಏರುತ್ತಿದೆ. ಆದರೆ ಇದು ಅವರು ಕೃಷಿ ಮತ್ತು ಕೈಗಾರಿಕೆಯಲ್ಲಿ ಹಣ ತೊಡಗುವಿಕೆಯ, ಹೆಚ್ಚಿದ ಆರ್ಥಿಕ ಚಟುವಟಿಕೆಯ ಮತ್ತು ಸಮೃದ್ಧಿಯ ಸೂಚಕ. ಪ್ರಾಕೃತಿಕ ಪ್ರಕೋಪಗಳು ಮತ್ತು ಲಾಭದಾಯಕ ಬೆಲೆಗಳಿಂದ ವಂಚಿತರಾಗಿರುವುದು ಅವರ ಲಾಭದ ಪ್ರಮಾಣವನ್ನು ಕಡಿಮೆ ಮಾಡಿದರೂ ಈ ರೀತಿಯ ಸಾಲವನ್ನು ಮೊದಲನೆಯ ಸಾಲದ ಹೊರೆ (ಬಡವರದ್ದು) ಜತೆ ಹೋಲಿಸಲು ಸಾಧ್ಯವಿಲ್ಲ.

ನಮ್ಮ ಕರ್ತವ್ಯಗಳು

ಕಿಸಾನ್ ಚಳುವಳಿ ಪ್ರತಿಯೊಂದು ರಾಜ್ಯದಲ್ಲಿರುವ ಸಾಲ ಕೊಡುವ ಆರ್ಥಿಕ ಸಂಸ್ಥೆಗಳ ನಿಯಮಗಳು ಮತ್ತು ಕೆಲಸದ ರೀತಿಯನ್ನು ಅಭ್ಯಸಿಸಿ, ಅವುಗಳನ್ನು ಪ್ರಜಾಸತ್ತಾತ್ಮಕವಾಗಿ ನಡೆಸಲು ಬಡವರಿಗೆ ಎಟಕುವಂತೆ ಮಾಡಲು ಘೋಷಣೆಗಳನ್ನು ತಯಾರಿಸಬೇಕು. ಇಂತಹ ಬದಲಾವಣೆಗೆ ಚಳುವಳಿ ನಡೆಸಬೇಕು ಮತ್ತು ಶ್ರೀಮಂತರು ಎಲ್ಲಾ ಸಾಲವನ್ನು ತಮ್ಮ ಬಗಲಿಗೆ ಹಾಕಿಕೊಳ್ಳದಂತೆ ಸತತ ಹೋರಾಟ ನಡೆಸಬೇಕು. ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಇಂತಹ ಸಂಸ್ಥೆಗಳ ಸಮಿತಿಗಳಲ್ಲಿ ದುಡಿಯುವ ಜನರ ಪ್ರತಿನಿಧಿಗಳಿರುವಂತೆ ಕ್ರಮ ಕೈಗೊಳ್ಳಬೇಕು.

IRDP, NREP ಯಂತಹ ಕಾರ್ಯಕ್ರಮಗಳಿಗೆ ಹೆಚ್ಚಿನ ಹಣ ಒದಗಿಸುವಂತೆ ಒತ್ತಾಯ ತರುವುದಲ್ಲದೆ, ಈ ಕಾರ್ಯಕ್ರಮಗಳು ಬಡವರಿಗೆ ಪ್ರಯೋಜನಕರವಾಗಿ ಜಾರಿಯಾಗುವಂತೆ ನೋಡಿಕೊಳ್ಳಬೇಕು. ಅಲ್ಲದೆ ಯಾವುದೇ ಅಡವು ಇಡದೆ ಬಡವರಿಗೆ ಸಾಲ ಕೊಡಿಸಲು ವ್ಯಾಪಕ ವ್ಯವಸ್ಥೆಗೆ ಹೋರಾಡಬೇಕು. ಸಾಲದ ವೆಚ್ಚವನ್ನು ಹಳ್ಳಿ ರಾಜ್ಯ ಮಟ್ಟದ ಆರ್ಥಿಕ ಸಂಸ್ಥೆಗಳ ನಡುವಣ ಅನಗತ್ಯ ಹಂತದ ಸಂಸ್ಥೆಗಳನ್ನು ಕಡಿಮೆ ಮಾಡುವುದರ ಮೂಲಕ ಕಡಿಮೆ ಮಾಡಬೇಕು.

ಬಡವರಿಗೆ ಸುಲಭ ಅಗ್ಗದ ಸಾಲಕ್ಕಾಗಿ ಹೋರಾಟ ವರ್ಗ ಹೋರಾಟದ ಒಂದು ರೂಪ. ಇಡೀ ಹಳ್ಳಿಯ ಜೀವನವನ್ನು ತಮ್ಮ ಕಪಿಮುಷ್ಟಿಯಲ್ಲಿಟ್ಟುಕೊಂಡಿರುವವರ ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ ಈ ಹೋರಾಟ. ಬೂರ್ಜ್ವಾ-ಭೂಮಾಲೀಕ ವರ್ಗಗಳ ವಿರುದ್ಧ ಸಾಮಾನ್ಯ ಹೋರಾಟದ ಭಾಗವಾಗಿ ಈ ಹೋರಾಟ ಮೂಡಿಬರಬೇಕು. ಹಳ್ಳಿಯ ದುಡಿಯುವವರ ಕ್ರಾಂತಿಕಾರಿ ಹೋರಾಟದತ್ತ ಸೆಪ್ಟೆಂಬರ್ ಚಳುವಳಿ ದೃಢ ಹೆಜ್ಜೆ ಇಡಬೇಕು.

ಕೇರಳ : ಎಡ ಪ್ರಜಾಪ್ರಭುತ್ವ ಸರ್ಕಾರದಡಿಯಲ್ಲಿ

ಹರಿಜನರಿಗೆ ಸಮಾನ ಹಕ್ಕುಗಳು

—ಕಾ॥ ಇ. ಎಂ. ಎಸ್.

ಆಗಸ್ಟ್ 2ರ "ಟೈಮ್ಸ್ ಆಫ್ ಇಂಡಿಯಾ" ಪತ್ರಿಕೆಯ ಸಂಪಾದಕೀಯದ ಶಿರೋನಾಮೆ "ಕೇರಳ ದಾರಿ ತೋರಿಸುತ್ತಿದೆ" ಆಗಿತ್ತು. ದೇಶದ ಇತರ ಭಾಗಗಳಿಗೆ ಬಹಳ ಕಾಲದಿಂದ ಅಕ್ಷರತೆ, ಸಾರ್ವಜನಿಕ ಆರೋಗ್ಯ, ಕುಟುಂಬ ಯೋಜನೆ ಮತ್ತು ಲಿಂಗ ಸಮಾನತೆಗಳಲ್ಲಿ ನೇತೃತ್ವ ಕೊಟ್ಟ ಕೇರಳ ಹರಿಜನರಿಗೆ ಪ್ರಸಿದ್ಧ ಗುರುವಾಯೂರು ದೇವಳದಲ್ಲಿ ಕೆಲವೊಂದು ಪೂಜೆಗಳನ್ನು ನಡೆಸಲು ಅನುಮತಿ ಕೊಡುವುದರ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

ಮುಂದುವರಿಯುತ್ತಾ ಸಂಪಾದಕೀಯ 'ಒಂದು ವಾರದ ಹಿಂದೆ ಒಂದು ಹರಿಜನರ ಗುಂಪು ದೇವಸ್ಥಾನದಲ್ಲಿ ಐದು ವಾದ್ಯಗಳ (ಪಂಚವಾದ್ಯ)ವನ್ನು ನುಡಿಸುವ ಒಂದು ಸಂಪ್ರದಾಯದಲ್ಲಿ ಭಾಗಿಯಾಯಿತು–ಇದು ಸಂಪ್ರದಾಯಗಳ ವಿರುದ್ಧ ಅವರು ನಡೆಸಿದ ಹೋರಾಟಕ್ಕೆ ಸಿಕ್ಕಿದ ಜಯ. ....ಈ ವಿಜಯಕ್ಕೆ ಕೇರಳದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೊಡುಗೆ ಅಲ್ಪವೇನಲ್ಲ. ಸ್ವಲ್ಪ ಕಾಲದ ಹಿಂದೆ ಒಬ್ಬ ಹಿಂದೂಧರ್ಮಕ್ಕೆ ಮತಾಂತರಿಯಾದ ಕ್ರಿಶ್ಚಿಯನನ್ನು ಗುರುವಾಯೂರು ದೇವಳದ ಸಮಿತಿಗೆ ಧೈರ್ಯದಿಂದ ಆ ಸರಕಾರ ನೇಮಕ ಮಾಡಿತ್ತು. ಅದೇ ಸಮಯದಲ್ಲಿ ಹಿಂದೂ ಏಕತಾ ರಂಗದ ಅಧ್ಯಕ್ಷರಾದ ಸ್ವಾಮಿ ಭೂಮಾನಂದರೂ ಈ ಚಳುವಳಿಯಲ್ಲಿ (ಹರಿಜನರನ್ನು ಮುಕ್ತವಾಗಿ ದೇವಸ್ಥಾನಕ್ಕೆ ತೆರೆದಿಡುವ ಚಳವಳಿ) ಭಾಗವಹಿಸಿದ್ದರು.

ಮತ್ತೂ ಮುಂದುವರಿಸುತ್ತಾ ಸಂಪಾದಕೀಯ 'ಎಲ್ಲಾ ಹಿಂದೂಗಳ ಹಿತಗಳನ್ನು ಪ್ರತಿನಿಧೀಕರಿಸುವವರು ತಾವು ಎಂದು ಹೇಳಿಕೊಳ್ಳುತ್ತಿರುವ ಬಿ.ಜೆ.ಪಿ. ಮತ್ತು ಹಿಂದೂ ಪರಿಷತ್ತು ಈ ಪ್ರಕರಣದಲ್ಲಿ ವಹಿಸಿದ ಪಾತ್ರವು ಚಂಚಲ, ದ್ವಿಮುಖ ಮತ್ತು ಸಂದರ್ಭವಾದಿಯಾಗಿತ್ತು, ಮೊದಲು ಅವರು 'ದೇವಸ್ಥಾನವನ್ನು ಸರ್ಕಾರದ ನಿಯಂತ್ರಣದಿಂದ ಬಿಡುಗಡೆಗೊಳಿಸಲು ಚಳವಳಿ ನಡೆಸಿದರು. ಆಮೇಲೆ, ಪ್ರವಾಹವು ಅವರ ವಿರುದ್ಧ ಹರಿಯಲಾರಂಭಿಸಿದಾಗ ಹರಿಜನರಿಗೆ ಬೆಂಬಲ ಕೊಡಲು ಸಹಾಯ ಮಾಡಿದರು.

ದೇವಳ ಪ್ರವೇಶ ಸತ್ಯಾಗ್ರಹ

ಈ ಸಂದರ್ಭದಲ್ಲಿ 1931ರಲ್ಲಿ 57 ವರ್ಷಗಳ ಹಿಂದೆ ನಡೆದ ಕೆಲವು ಬೆಳವಣಿಗೆಗಳನ್ನು ನೆನಪುಮಾಡುವುದರಿಂದ ಉಪಯೋಗವಾಗಬಹುದು. ಇದೇ ಗುರುವಾಯೂರು ದೇವಸ್ಥಾನವು ಕೇವಲ ಹರಿಜನರಿಗೆ ಮಾತ್ರವಲ್ಲ, ಜಾತಿಸ್ತರಗಳಲ್ಲಿ ಮೇಲಿರುವ ಈಳವರಿಗೆ, ಕುಂಬಾರ ಇತ್ಯಾದಿ ಜಾತಿಗಳವರಿಗೆ, ಕೂಡಾ ಪ್ರವೇಶದ ಅನುಮತಿ ನಿರಾಕರಿಸಲ್ಪಟ್ಟಿತ್ತು. ಈ ದೇವಸ್ಥಾನ ಇನ್ನು ಹಲವಾರು ವಯ್ಕಂನಂತಹ ದೇವಸ್ಥಾನಗಳಿಗೂ ಹೋಗುವ ದಾರಿಗಳು ಕೂಡಾ ಬ್ರಾಹ್ಮಣರಿಗೂ ನಾಯರರಿಗೂ ಮಾತ್ರ ತೆರೆದಿದ್ದವು. ಉಳಿದವರಿಗೆ ಅವು ಮುಚ್ಚಲ್ಪಟ್ಟಿದ್ದವು.

ಎಲ್ಲಾ ಜಾತಿಗಳಲ್ಲಿದ್ದ ಪುರೋಗಾಮಿಗಳು ಇದರ ವಿರುದ್ಧ ದೇವಸ್ಥಾನ ಪ್ರವೇಶ ಸತ್ಯಾಗ್ರಹವನ್ನು ಸಂಘಟಿಸಿದರು. ಹೆಸರುವಾಸಿಯಾಗಿದ್ದ ಗಾಂಧಿಯನ್ ಕಾಂಗ್ರೆಸ್ಸು ಮುಂದಾಳು ಕೇಳಪ್ಪನ್ ಇವರು ಈ ದೇವಸ್ಥಾನ ಪ್ರವೇಶ ಸತ್ಯಾಗ್ರಹ ಸಮಿತಿಯ ಕಾರ್ಯದರ್ಶಿಯಾಗಿದ್ದರು. ಅವರು ಉತ್ತರ ಮಲಬಾರಿನಿಂದ ಹೊರಟ 200 ಮೈಲು ದೂರದ ಜಾಥದ ಮುಂದಾಳಾಗಿದ್ದರು. ಈ ಸತ್ಯಾಗ್ರಹದ ಸ್ವಯಂಸೇವಕರ ದಳದ ಕ್ಯಾಪ್ಟನ್ ಎ.ಕೆ.ಗೋಪಾಲನರಾಗಿದ್ದರು. ಅವರ ಕಾಂಗ್ರೆಸ್ಸು ಸಹೋದ್ಯೋಗಿ ಮುಂದೆ ಕಮ್ಯುನಿಸ್ಟ್ ಮುಂದಾಳಾದ ಪಿ. ಕೃಷ್ಣ ಪಿಳ್ಳೈಯವರು ಆ ಚಳವಳಿಯ ಸಕ್ರಿಯ ಸಂಘಟಕರಾಗಿದ್ದರು.

ಮಹಾತ್ಮಾಗಾಂಧಿಯವರೇ ಸ್ವತಃ ಭಾಗವಹಿಸಿದ್ದ ಅವರ ಹಿಂದಿನ 1924ರ ವಾಯ್‌ಕಂ ಸತ್ಯಾಗ್ರಹದಂತೆ ಈ ಗುರುವಾಯೂರು ಕೇರಳದ ಇಡೀ ಜನತೆಯನ್ನು ಸ್ಫೂರ್ತಿಗೊಳಿಸಿತ್ತು. ನೂರಾರು ಪುರೋಗಾಮಿ ಯುವಕರು (ಅವರಲ್ಲಿ ಹಲವು ಮಂದಿ ಸಾಯುವ ತನಕ ಕಾಂಗ್ರೆಸ್ಸಿಗರಾಗಿಯೂ ಇದ್ದರು ಇನ್ನೂ ಹಲವರು ಮುಂದೆ ಕಮ್ಯುನಿಸ್ಟರು ಮತ್ತಿತರ ಎಡ ಮನೋಭಾವದ ವ್ಯಕ್ತಿಗಳಾದರು) ರಾಜ್ಯಾದ್ಯಂತ ಹಲವಾರು ದೇವಸ್ಥಾನಗಳ ಎದುರು ಇಂತಹ ಸತ್ಯಾಗ್ರಹಗಳನ್ನು ಸಂಘಟಿಸಿದರು. ಗುರುವಾಯೂರಿನಲ್ಲಿ ಕೇಳಪ್ಪನ್, ಸತ್ಯಾಗ್ರಹ ಸಮಿತಿಯ ಮುಂದಾಳು, ಇತರ ಸಕ್ರಿಯ ಸ್ವಯಂ ಸೇವಕರ ಜತೆ ಉಪವಾಸ ಮಾಡಲು ಉಪಕ್ರಮಿಸಿದರು. ಇದರಿಂದಾಗಿ ಸಮಾಜ ಸುಧಾರಣೆಗಳ ಚಳವಳಿಗೆ ಬಹಳಷ್ಟು ಶಕ್ತಿಯುಂಟಾಯಿತು.

ಈ ದೀರ್ಘಕಾಲದ ಸತ್ಯಾಗ್ರಹದ ಫಲ, ಕೇಳಪ್ಪನವರ ಉಪವಾಸದ ಹಿನ್ನಲೆಯಲ್ಲಿ, ರಾಜ್ಯದ ಹಲವಾರು ದೇವಸ್ಥಾನಗಳ ಟ್ರಸ್ಟಿಗಳು ಎಲ್ಲಾ ಹಿಂದೂಗಳಿಗೆ ದೇವಸ್ಥಾನ ಪ್ರವೇಶವನ್ನು ಮುಕ್ತಗೊಳಿಸಲಾಯಿತು, ಆದರೆ ಗುರುವಾಯೂರು ದೇವಸ್ಥಾನದ ಬಾಗಿಲುಗಳು ಎಲ್ಲಾ ಹಿಂದೂಗಳಿಗೆ ತೆರೆಯುವಂತಾಗಲು ಇನ್ನೂ ಕಠಿಣ ಹೋರಾಟಗಳ ಅವಶ್ಯಕತೆ ಇತ್ತು. ಆದರೂ, ಪ್ರಕ್ರಿಯೇ ಆರಂಭವಾದುದರಿಂದ ಅದು ಶಕ್ತಿಗೊಳ್ಳುತ್ತಾ ಹೋಗಿ ತಿರುವಾಂಕೂರು ಮಹಾರಾಜರು ರಾಜ್ಯದ ಎಲ್ಲಾ ದೇವಸ್ಥಾನಗಳ ಪ್ರವೇಶವನ್ನು 1936ಕ್ಕೆ ಮುಕ್ತಗೊಳಿಸುವ ಆಜ್ಞೆಯನ್ನು ಹೊರಡಿಸುವಂತಾಯಿತು. ಆದರೆ ಅವರ ಸಮಕಾಲೀನರಾದ ಕೊಚ್ಚಿಯ ಮಹಾರಾಜರು ಮತ್ತು ಎರಡು ದಶಕಗಳ ಕಾಲದವರೆಗೆ ಹರಿಜನರನ್ನು ದೇವಸ್ಥಾನಗಳಿಂದ ಹೊರಗಿಡುವ ದುಷ್ಟ ಸಂಪ್ರದಾಯವನ್ನು ಮುಂದುವರಿಸಿಕೊಂಡು ಹೋದರು. ಚಾರಿತ್ರಿಕ ಫಾಲಯಂ ದೇವಸ್ಥಾನದ ಸತ್ಯಾಗ್ರಹವು ಕೊಚ್ಚಿ ಪ್ರದೇಶದಲ್ಲಿ ದೇಶ ಸ್ವತಂತ್ರ್ಯವಾದ ನಂತರ ಸಂಘಟಿಸಲ್ಪಟ್ಟು ಕೊಚ್ಚಿಯಲ್ಲಿ ಜವಾಬ್ದಾರಿ ಸರಕಾರದ ಬೇಡಿಕೆ ಈಡೇರುವ ಮೊದಲೇ ಜಯಪ್ರದವಾಗಿತ್ತು. ಗುರುವಾಯೂರು ಅಥವಾ ಕೇರಳದ ಯಾವುದೇ ಇತರ ದೇವಸ್ಥಾನವು ಸ್ವತಂತ್ರ ಭಾರತದಲ್ಲಿ ಎಲ್ಲರಿಗೂ ಪ್ರವೇಶಕೊಡುವುದನ್ನು ತಡೆದು ಹಿಡಿಯಲು ಸಾಧ್ಯವಾಗಲಿಲ್ಲ.

ಪ್ರತಿಗಾಮಿ ಆಟ ಮುಂದುವರಿಯುತ್ತಿದೆ

ಟೈಮ್ಸ್ ಆಫ್ ಇಂಡಿಯಾ ಸಂಪಾದಕೀಯ ಸೂಚಿಸಿದ ''ಪಂಚವಾದ ನುಡಿಯುವ'' ಹಕ್ಕು ಗುರುವಾಯೂರಪ್ಪನ್ ಪ್ರಭುವಿನ ನೂರಾರು ಭಕ್ತರಿಗೆ ನಿರಾಕರಿಸಲ್ಪಟ್ಟಿತ್ತು. ಪೂಜಾ ವಿಷಯದಲ್ಲಿದ್ದ ಈ ಅಸಮಾನತೆಯ ತಡೆಯನ್ನು ಕೇರಳದ ಎಡ ಪೂಜಾ ಪ್ರಭುತ್ವ ಸರಕಾರವು ನೇಮಿಸಿದ ಗುರುವಾಯೂರು ಹೊಸ ಬೋರ್ಡು ಕಿತ್ತುಹಾಕಿತು. ಇಂತಹ ಎಡ ಪ್ರಜಾಪ್ರಭುತ್ವ ಸರಕಾರದ ವಿರುದ್ಧ ಭಾರತೀಯ ಜನತಾ ಪಕ್ಷ, ವಿಶ್ವ ಹಿಂದೂ ಪರಿಷತ್ ಮತ್ತು ಹಿಂದೂ ಸನ್ಯಾಸಿಗಳ ಒಂದು ವಿಭಾಗವು ಕತ್ತಿ ಮಸೆದು ಹಿಂದೂ ದೇವಸ್ಥಾನಗಳನ್ನು ರಾಜಕೀಯ ಪಕ್ಷಗಳಿಂದ ವಿಮೋಚನೆ ಮಾಡುವ ಹೋರಾಟವನ್ನು ಸಂಘಟಿಸಿದ್ದಾಗಿದೆ.

ಈ ಸಂದರ್ಭದಲ್ಲಿ 1931-32ರಲ್ಲಿ ಗುರುವಾಯೂರು ದೇವಳ ಸತ್ಯಾಗ್ರಹವು ನಡೆಯುತ್ತಿದ್ದಾಗ ಸಂಭವಿಸಿದ ಎರಡು ಘಟನೆಗಳು ನೆನಪಿಗೆ ಬರುತ್ತವೆ. ದೇವಸ್ಥಾನದ ಆಡಳಿತಗಾರರ ಗೂಂಡಾಗಳಿಂದ ಎ. ಕೆ. ಗೋಪಾಲನರು ತೀವ್ರ ಹೊಡೆತಗಳಿಗೆ ಗುರಿಯಾಗಿದ್ದರು. ರಾಜ್ಯದ ಜನತೆಯ ಪ್ರೀತಿಯ ಮುಂದಾಳಾದ ಕೃಷ್ಣಪಿಳ್ಳೆಯವರನ್ನೂ ದೇವಸ್ಥಾನದ ಒಳಗಡೆ ತೀವ್ರವಾಗಿ ಹೊಡೆದು ಹಾಕಿದ್ದರು.

ಕಾರಣ : ಪಿಳ್ಳೆ ಜಾತಿ ನಾಯರ್ ಆಗಿದ್ದುದರಿಂದ ದೇವಸ್ಥಾನದ ಒಳಗೆ ಅವರಿಗೆ ಪ್ರವೇಶವಿದ್ದಾಗ್ಯೂ, ದೇವರ ಮೂರ್ತಿ ಇದ್ದ ಗರ್ಭಗುಡಿಯೊಳಗೆ ಪ್ರವೇಶಿಸಿ ಅಲ್ಲಿನ ಗಂಟೆ ಬಾರಿಸುವ ಭಕ್ತರ ಹಕ್ಕು ಅವರಿಗೆ ನಿರಾಕರಿಸಲ್ಪಟ್ಟಿತ್ತು. ಅವರನ್ನು ಕೂಡಾ ದೇವಸ್ಥಾನದ ಒಳಗಡೆ ದೇವಸ್ಥಾನದ ಆಡಳಿತ ವರ್ಗದ ಗೂಂಡಾಗಳು ತೀವ್ರವಾಗಿ ಹೊಡೆತಕ್ಕೆ ಗುರಿಪಡಿಸಿದ್ದರು.

ಈ ಪ್ರಸಿದ್ಧ ರಾಜಕೀಯ ಮುಂದಾಳುಗಳು–ಗಾಂಧಿವಾದಿಯಾಗಿದ್ದ ಕೇಳಪ್ಪನ್, ಕಮ್ಯೂನಿಸ್ಟರಾದ ಎ.ಕೆ. ಗೋಪಾಲನ್ ಮತ್ತು ಕೃಷ್ಣಪಿಳ್ಳೆಯವರು —ಗುರುವಾಯೂರಪ್ಪನವರ ಭಕ್ತರು ತಾವು ಎಂದು ಹೇಳಿಕೊಳ್ಳುತ್ತಿದ್ದ ಕುರುಡುಸಂಪ್ರದಾಯವಾದಿಗಳ ವಿರುದ್ಧ ಹೋರಾಟ ನಡೆಸುತ್ತಾ ಬಂದರು, ಬಿ.ಜೆ.ಪಿ., ವಿಶ್ವ ಹಿಂದೂಪರಿಷತ್ ಮತ್ತಿತರ ಕುರುಡು ಸಂಪ್ರದಾಯವಾದಿಗಳು, ಗೋಪಾಲನ್, ಪಿಳ್ಳೆ ಇವರನ್ನು ಬಡಿದು ಹಾಕಿದ ಅಂದಿನ ಕುರುಡು ಸಂಪ್ರದಾಯವಾದಿಗಳ ನಿಜವಾದ ಉತ್ತರವಾದಿಗಳಾಗಿದ್ದಾರೆ.

ಎಡ ಪ್ರಜಾಪ್ರಭುತ್ವ ರಂಗ ಮತ್ತು ಅದರ ಸರಕಾರವು ಕೇಳಪ್ಪನ್, ಗೋಪಾಲನ್ ಮತ್ತು ಪಿಳ್ಳೆಯವರೂ ಇತರ ಸಾವಿರಾರು ಮಂದಿಯು ಸ್ಥಾಪಿಸಿದ ಪ್ರಜಾಪ್ರಭುತ್ವದ ಸಂಪ್ರದಾಯಗಳನ್ನು ಮುಂದುವರಿಸುತ್ತಿದ್ದಾರೆ. ಅವರು ತಮ್ಮ ಹೋರಾಟಗಳ ಮೂಲಕ ಎಲ್ಲಾ ಜಾತಿಯ ಜನತೆಗೆ ದೇವಸ್ಥಾನ ಪ್ರವೇಶ ಮತ್ತು ಪೂಜೆಮಾಡುವ ಸಮಾನತೆಯ ಹಕ್ಕನ್ನು ಪಡೆಯುವವರಾಗಿದ್ದರು. ಈ ದಿನ ಗುರುವಾಯೂರನ್ನು ಹಿಂದೂಗಳಿಗೆ 'ವಿಮೋಚನೆ' ಮಾಡುವ ಹೋರಾಟ ನಡೆಸುವವರು ಗೋಪಾಲನ್ ಮತ್ತು ಪಿಳ್ಳೆಯವರನ್ನು ಕ್ರೂರವಾಗಿ ಹೊಡೆದು ಹಾಕಿದವರ ಸಂಪ್ರದಾಯಗಳನ್ನು ಮುಂದುವರಿಸುವವರಾಗಿದ್ದಾರೆ. ಹಿಂದೂಗಳ ಹೆಸರಿನಲ್ಲಿ ಮಾತಾಡುವವರು ಹಿಂದೂ ತತ್ವಕ್ಕೆ ಪರಿವರ್ತನೆಗೊಳ್ಳುವ ಹಿಂದೂಯೇತರ ಜನರ ಹಕ್ಕುಗಳನ್ನು ಪ್ರತಿಭಟಿಸುತ್ತಿದ್ದಾರೆ. ಹಿಂದೂವಾಗಿ ಪರಿವರ್ತನೆಗೊಂಡ ಒಬ್ಬ ವ್ಯಕ್ತಿಯನ್ನು ಎಡಪ್ರಜಾಪ್ರಭುತ್ವ ರಂಗದ ಸರಕಾರವು ಬೋರ್ಡಿಗೆ ನೇಮಕ ಮಾಡಿರುವವರನ್ನು ವಿರೋಧಿಸುವ ಚಳವಳಿಗೆ ಬೇರೆ ಯಾವ ಕಾರಣವಿರುವುದಿಲ್ಲ. ಪಂಚವಾದ್ಯನುಡಿಸುವ ಹಕ್ಕನ್ನು ಹರಿಜನರಿಗೆ ಕೊನೆಯಗಳಿಗೆಯ ತನಕ ನಿರಾಕರಿಸಿದ ಈ 'ವಿಮೋಚನಾವಾದಿಗಳಿಗೆ' ಇದೇ ಕಾರಣವಾಗಿತ್ತು.

ಟೈಮ್ಸ್ ಆಫ್ ಇಂಡಿಯಾ ಹೇಳುವಂತೆ ಇದರಿಂದ ಎರಡು ಪಾಠಗಳನ್ನು ಕಲಿಯಬೇಕಾಗಿದೆ. ಒಂದನೇಯದಾಗಿ, ದೇವಸ್ಥಾನಗಳ ವ್ಯವಹಾರಗಳಲ್ಲಿ ಪ್ರವೇಶಿಸಿ ಅವುಗಳನ್ನು ಸರಿಪಡಿಸುವ ಹಕ್ಕು ಸರ್ಕಾರಕ್ಕಿದೆ, ಎರಡನೆಯದಾಗಿ, "ಸಾಮಾಜಿಕ ಸುಧಾರಣೆಗಾಗಿರುವ ಹೋರಾಟವು ವಿಶೇಷವಾಗಿ ದಲಿತರಿಗೆ ಸಮಾನ ಸ್ಥಾನ ಒದಗಿಸುವುದು –ಜಾತೀಯ ತಾರತಮ್ಯವನ್ನು ನಿಷೇಧಿಸುವ ಕಾನೂನುಗಳನ್ನು ಅಂಗೀಕರಿಸುವ ಮೂಲಕ ಮಾತ್ರ ಜಯಪ್ರದವಾಗುವುದಿಲ್ಲ. ....ಸರಕಾರವು ಈ ಜಾತಿವಿರೋಧಿ ಕಾನೂನುಗಳನ್ನು ಸಚೇತನಗೊಳಿಸುವಾಗಲೇ ಜಾತೀಯ ತಾರತಮ್ಯದ ವಿರುದ್ಧ ನಡೆಯುವ ಸಮಾಜ ಸುಧಾರಣಾ ಹೋರಾಟಗಳಿಗೆ ಅಸಂದಿಗ್ಧ ಬೆಂಬಲ ಕೊಡಬೇಕಾಗಿದೆ."

ಆಗಸ್ಟ್ 2ರ "ಟೈಮ್ಸ್ ಆಫ್ ಇಂಡಿಯಾ" ಪತ್ರಿಕೆಯ ಸಂಪಾದಕೀಯದ ಶಿರೋನಾಮೆ "ಕೇರಳ ದಾರಿ ತೋರಿಸುತ್ತಿದೆ" ಆಗಿತ್ತು. "ದೇಶದ ಇತರ ಭಾಗಗಳಿಗೆ ಬಹಳ ಕಾಲದಿಂದ ಅಕ್ಷರತೆ, ಸಾರ್ವಜನಿಕ ಆರೋಗ್ಯ, ಕುಟುಂಬ ಯೋಜನೆ ಮತ್ತು ಲಿಂಗಸಮಾನತೆಗಳಲ್ಲಿ ನೇತೃತ್ವ ಕೊಟ್ಟ ಕೇರಳ ಹರಿಜನರಿಗೆ ಪ್ರಸಿದ್ಧ ಗುರುವಾಯೂರು ದೇವಳದಲ್ಲಿ ಕೆಲವೊಂದು ಪೂಜೆಗಳನ್ನು ನಡೆಸಲು ಅನುಮತಿ ಕೊಡುವುದರ ಮೂಲಕ ಎಲ್ಲರ ಮೆಚ್ಚಿಗೆಗೆ ಪಾತ್ರವಾಗಿದೆ.

ಬಾಗೇಪಲ್ಲಿ ತಾಲೂಕು ಎ. ಐ. ಡಿ. ಡಬ್ಲ್ಯೂ. ಎ. ಸಮಾವೇಶ

ದಿನಾಂಕ 17-7-88 ರಂದು ಬಾಗೇಪಲ್ಲಿ ಪುರಭವನದಲ್ಲಿ ಬಾಗೇಪಲ್ಲಿ ತಾಲೂಕು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಪ್ರಥಮ ಸಮಾವೇಶವು ನಡೆಯಿತು. ನಾಲ್ಕು ದಿನಗಳಿಂದ ಎಡೆಬಿಡದೆ ಸುರಿಯುತ್ತಿದ್ದ ಮಳೆಯಲ್ಲೂ ಸುಮಾರು 200 ಮಂದಿ ಮಹಿಳೆಯರು ತಾಲೂಕಿನ ಬೇರೆ ಬೇರೆ ಭಾಗಗಳಿಂದ ಭಾಗವಹಿಸಿದ್ದರು.

ಕೋಲಾರ ಜಿಲ್ಲಾ ಸಂಚಾಲಕಿ ಕಾ॥ ಫ್ಲೋರಾರವರು ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಸಹ ಸಂಚಾಲಕಿ ಕಾ॥ ಬಿ. ಎ. ಪರ್ವೀನ್‌ತಾಜ್‌ರವರು ಸ್ವಾಗತ ಬಯಸಿದರು.

ಕಾ॥ ಜಿ. ವಿ. ಶ್ರೀರಾಮರೆಡ್ಡಿಯವರು ಸಮಾವೇಶವನ್ನು ಉದ್ಘಾಟಿಸುತ್ತಾ ಮಹಿಳೆ ಹೇಗೆ ಶೋಷಣೆಗೆ ಒಳಗಾಗಿದ್ದಾಳೆ. ಪಾಶ್ಚಾತ್ಯದೇಶಗಳಲ್ಲಿ ಮತ್ತು ಭಾರತದಲ್ಲಿ ಮಹಿಳೆಯರ ಸ್ಥಿತಿಗತಿಗಳ ಬಗ್ಗೆ ಮಾತಾಡಿ ತಾವು ಸೋವಿಯತ್ ರಷ್ಯಾಕ್ಕೆ ಭೇಟಿ ನೀಡಿದಾಗ ಸಮಾಜವಾದಿ ಸಮಾಜದಲ್ಲಿ ಮಹಿಳೆ ಹೇಗೆ ಪುರುಷನಿಗೆ ಸಮಾನವಾಗಿ ಸಮಾಜ ನಿರ್ಮಾಣಕಾರ್ಯದಲ್ಲಿ ತೊಡಗಿದ್ದಾಳೆ ಎಂಬುಕ್ಕೆ ಪ್ರತ್ಯಕ್ಷ ಉದಾಹರಣೆಗಳನ್ನು ಕೊಟ್ಟರು. ಸಾಮಾಜಿಕ ಬದಲಾವಣೆ ಯಾಗಬೇಕಾದರೆ ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರು ಜಾಗೃತರಾಗದೆ ಯಾವ ಬದಲಾವಣೆಯೂ ಸಾಧ್ಯವಿಲ್ಲವೆಂದರು.

ನಂತರ ಬೆಂಗಳೂರಿನಿಂದ ಬಂದಿದ್ದ ಎ.ಐ.ಡಿ.ಡಬ್ಲ್ಯು.ಎ. ನಾಯಕಿ ಕಾ॥ ವಿಮಲಾರವರು ಮಾತಾಡಿ ಹಳ್ಳಿಗಾಡಿನಲ್ಲಿ ಮಹಿಳೆಯರು ಹೆಚ್ಚಿನ ರೀತಿಯಲ್ಲಿ ಶೋಷಣೆಗೆ ಒಳಗಾಗುತ್ತಿದ್ದಾರೆ, ಇವೆಲ್ಲದರ ವಿರುದ್ಧ ಮಹಿಳೆ ಸಂಘಟಿತರಾಗಿ ಹೋರಾಡಬೇಕೆಂದು ಕರೆಯಿತ್ತರು.

ನಂತರ ತಾಲೂಕಿನ ರೈತಸಂಘ, ಕೃಷಿಕೂಲಿಕಾರರ ಸಂಘ,ಡಿ.ವೈ.ಎಫ್.ಐ. ಎಸ್.ಎಫ್.ಐ.ನ ಮುಖಂಡರು ಸಮಾವೇಶಕ್ಕೆ ಶುಭಕೋರಿದರು.

ಅಧ್ಯಕ್ಷರ ಭಾಷಣದಲ್ಲಿ ಕಾ॥ ಫ್ಲೋರಾರವರು ಈಗಾಗಲೇ ಜಿಲ್ಲೆಯ 5 ತಾಲೂಕುಗಳಲ್ಲಿ ಎ.ಐ.ಡಿ.ಡಬ್ಲ್ಯು.ಎ.ಯನ್ನು ಸಂಘಟಿಸಲು ಸಾಧ್ಯವಾಗಿದೆ ಮುಂದೆ ಇಡೀ ಜಿಲ್ಲೆಯಲ್ಲೇ ಸಂಘಟನೆಯನ್ನು ಕಟ್ಟಲಾಗುವುದೆಂದರು. ಬಾಗೇಪಲ್ಲಿ ತಾಲೂಕು ಸಂಘಟನಾ ಸಮಿತಿಗೆ ಸಂಚಾಲಕಿಯಾಗಿ ಕಾ॥ ಬಿ. ಎ. ಪರ್ವೀನ್‌ತಾಜ್, ಸಹ ಸಂಚಾಲಕಿಯರಾಗಿ ಕಾ॥ಎನ್.ಎನ್ ಸರೋಜಮ್ಮ ಮತ್ತು ಕಾ॥ ಡಿ. ಆರ್. ಚಂದ್ರಮ್ಮನವರನ್ನೊಳಗೊಂಡ 17 ಮಂದಿಯ ತಾಲೂಕು ಸಂಘಟನಾ ಸಮಿತಿಯನ್ನು ಆರಿಸಲಾಯಿತು.

ಕೊನೆಯಲ್ಲಿ ಕಾ॥ ಎಸ್. ಎನ್. ಸರೋಜಮ್ಮನವರು ವಂದನಾರ್ಪಣೆ ಮಾಡಿದರು.

ಕೋಲಾರ ತಾ॥ ಎಐಡಿಡಬ್ಲ್ಯುಎ ಸಂಘಟನಾ ಸಮಿತಿ ರಚನೆ

ದಿನಾಂಕ 16-7-88 ರಂದು ಕೋಲಾರ ತಾಲೂಕಿನ ಎ.ಐ.ಡಿ.ಡಬ್ಲ್ಯು.ಎ.ಯ ಸಂಘಟನಾ ಸಮಿತಿಯನ್ನು ರಚಿಸಲಾಯಿತು. ಎ.ಐ.ಡಿ.ಡಬ್ಲ್ಯು.ಎ. ಕೋಲಾರ ಜಿಲ್ಲಾ ಸಂಚಾಲಕಿ ಕಾ॥ ಫ್ಲೋರ ಮತ್ತು ಸಹಸಂಚಾಲಕಿ ಕಾ॥ ಬಿ. ಎ. ಪರ್ವೀನ್‌ತಾಜ್‌ರವರು ಸಭೆಯಲ್ಲಿ ಭಾಗವಹಿಸಿದ್ದರು. ಬೆಂಗಳೂರಿನಿಂದ ಎ.ಐ.ಡಿ.ಡಬ್ಲ್ಯು.ಎ ನಾಯಕಿ ಕಾ॥ ಶಾಂತಕುಮಾರಿಯವರು ಹಾಜರಿದ್ದರು. ಕಾ॥ ರತ್ನಮ್ಮ ಸಂಚಾಲಕಿ, ಮತ್ತು ಸಹಸಂಚಾಲಕಿಯರಾಗಿ ಕಾ॥ ಖೈರುನ್ನೀಸಾ ಕಾ॥ ಜಯಲಕ್ಷ್ಮಿ, ಅಲ್ಲದೆ ಇದರ ನಾಲ್ಕುಮಂದಿ ಸದಸ್ಯರಿರುವ ತಾಲೂಕು ಸಮಿತಿಯನ್ನು ರಚಿಸಲಾಯಿತು.

ಸುಗ್ರೀವಾಜ್ಞೆ ವಿರುದ್ಧ ರ್‍ಯಾಲಿ

ವಿನಾಃ ಕಾರಣ ವಿದ್ಯಾರ್ಥಿಗಳನ್ನು ಬಂಧಿಸುವ ಮತ್ತು ದಂಡ ವಿಧಿಸುವ ಸುಗ್ರೀವಾಜ್ಞೆ ವಿರೋಧಿಸಿ ಹಾಗೂ ಶಿಕ್ಷಣ ಹಕ್ಕು ಸ್ವಾತಂತ್ರ್ಯಗಳನ್ನು ಮೊಟಕುಗೊಳಿಸುವುದರ ನೀತಿಯ ವಿರುದ್ಧ ಜುಲೈ '12' ರಂದು ರಾಜ್ಯ ಸಮಿತಿ ಕರೆಯ ಮೇರೆಗೆ ಹೋರಾಟ ರೂಪಿಸಿಕೊಳ್ಳಲಾಗಿದ್ದು, ರಾಯಚೂರು ಜಿಲ್ಲೆಯ 2000 ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ಮೆರವಣಿಗೆ ಹೊರಟು ಸುಗ್ರೀವಾಜ್ಞೆ ಹಿಂತೆಗೆಯುವಂತೆ ಒತ್ತಾಯಿಸಿದರು.

ಹಿರೋಶಿಮಾ-ನಾಗಸಾಕಿ ದುರಂತ ಖಂಡಿಸಿ

ಶಾಂತಿಗಾಗಿ ಜನಜಾಗೃತಿ ಸಪ್ತಾಹ

'ಇಂದು ಜಗತ್ತಿನಲ್ಲಿ ನಡೆಯುತ್ತಿರುವುದು ಎರಡೇ ಓಟಗಳು. ಒಂದು ಉಳಿವಿಗಾಗಿ ಓಟ, ಮತ್ತೊಂದು ಶಾಂತಿಗಾಗಿ ಓಟ. ಈ ಸಾಂಕೇತಿಕ ಓಟಗಳು ಜನರನ್ನು ಎಚ್ಚರಿಸುವ ನಿರಂತರ ಓಟವಾಗಬೇಕು' ಎಂದು ಪ್ರಸಿದ್ಧ ಕವಿ ಸುಬ್ಬಣ್ಣ ರಂಗನಾಥ ಎಕ್ಕುಂಡಿಯವರು ಕರೆ ನೀಡಿದರು.

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ರಾಜಾಜಿನಗರ ಘಟಕವು ಹಿರೋಶಿಮಾ ಹಾಗೂ ನಾಗಸಾಕಿ ದುರಂತವನ್ನು ಖಂಡಿಸಿ ಆಚರಿಸಿದ 'ಅಣ್ವಸ್ತ್ರಮುಕ್ತ ಜಗತ್ತಿಗಾಗಿ ವಿಜ್ಞಾನ' ಸಪ್ತಾಹದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡುತ್ತಿದ್ದರು.

ಅಣ್ವಸ್ತ್ರಗಳಲ್ಲಿ ಕಡಿತ ಉಂಟುಮಾಡಲು ಮುಂದೆ ಬಂದಿರುವ ಗೋರ್ಬಚೆವ್‌ರವರ ಪ್ರಯತ್ನ ಅತ್ಯಂತ ಪ್ರಶಂಸನೀಯ. ಜಗತ್ತನ್ನು ಅಣ್ವಸ್ತ್ರ ಮುಕ್ತವಾಗಿಸುವಲ್ಲಿ ಇದೊಂದು ದಿಟ್ಟ ಹೆಜ್ಜೆ ಎಂದು ಹೇಳುತ್ತ 'ಖಡ್ಗಗಳನ್ನು ಮುರಿದು ಅವನ್ನು ಉಳುವ ನೇಗಿಲುಗಳನ್ನಾಗಿ ಮಾಡಬೇಕು' ಎಂದು ಕರೆ ನೀಡಿದರು.

ಖ್ಯಾತ ಬಂಡಾಯ ಬರಹಗಾರರಾದ ಬರಗೂರು ರಾಮಚಂದ್ರಪ್ಪನವರು ಮಾತನಾಡುತ್ತಾ 'ಶಾಂತಿ ಎಂಬುದು ಇಂದಿನ ತುರ್ತು ಅಗತ್ಯತೆ. ಮಾನವೀಯತೆಯ ಉಳಿವಿಗಾಗಿ ಮನುಷ್ಯತ್ವದ ಸ್ಥಾಪನೆಗಾಗಿ ಶಾಂತಿ ಅತ್ಯಗತ್ಯವಾಗಿದೆ. ಅಣ್ವಸ್ತ್ರ ಭೀತಿಯನ್ನು ತೊಲಗಿಸಲು ನಾವು ಶ್ರಮಿಸೋಣ' ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯರಾದ ಜಯಕುಮಾರ್ ಅನಗೋಳ್‌ರವರು ಮಾತನಾಡಿದರು.

ಹಿರೋಶಿಮಾ ನಾಗಸಾಕಿ ದುರಂತದ ನೆನಪಿಗಾಗಿ ರಾಜಾಜಿನಗರ ಘಟಕ ಹಮ್ಮಿಕೊಂಡ ಈ ಬೃಹತ್ ಸಪ್ತಾಹ ಆಗಸ್ಟ್ 6 ರಂದು ರಾಜಾಜಿನಗರ ಒಂದನೇ ಬ್ಲಾಕಿನ ವಾಣಿ ವಿದ್ಯಾ ಕೇಂದ್ರದಲ್ಲಿ ಉದ್ಘಾಟನೆಯಾಯಿತು.

ಕ.ರಾ.ವಿ.ಪ.ದ ಗೌರವ ಕಾರ್ಯದರ್ಶಿಗಳಾದ ಎಂ.ಎ.ಸೇತುರಾವ್‌ರವರು ಶಾಂತಿ ಸಂದೇಶದ ಪಾರಿವಾಳವನ್ನು ಹಾರಿಬಿಡುವುದರ ಮೂಲಕ ಈ ಸಪ್ತಾಹವನ್ನು ನೂರಾರು ವಿದ್ಯಾರ್ಥಿಗಳ ಹರ್ಷೋದ್ಗಾರದ ನಡುವೆ ಉದ್ಘಾಟಿಸಿದರು.

ಕ.ರಾ.ವಿ.ಪ. ತುಮಕೂರು ಘಟಕದ ಸಂಚಾಲಕರಾದ ಸಿ. ಯತಿರಾಜುರವರು ಈ ಸಂದರ್ಭದಲ್ಲಿ, ಹಿರೋಶಿಮಾ ನಾಗಸಾಕಿಯಲ್ಲಿ ನಡೆದ ದುರಂತದ ವಿವರಗಳನ್ನು ನೀಡುತ್ತಾ, ಹಿರೋಶಿಮಾ, ನಾಗಸಾಕಿ ದುರಂತದ ನೆನಪು ಜಗತ್ತು ಅಣ್ವಸ್ತ್ರ ಮುಕ್ತವಾಗುವಂತೆ ಪ್ರೇರೇಪಿಸಲಿ ಎಂದರು.

ರಾಜಾಜಿನಗರ ಘಟಕದ ಸಂಚಾಲಕರಾದ ಜಿ.ಎನ್ ಮೋಹನ್‌ರವರು ಮಾತನಾಡುತ್ತಾ ರಾಜಾಜಿನಗರ ಘಟಕವು ಶಾಂತಿಗಾಗಿ ಸಮೂಹ ಚಳುವಳಿ ಬೆಳೆದು ಬರಬೇಕಾದ ಅಗತ್ಯತೆಯನ್ನು ವಿವರಿಸಿದರು.

ಈ ಸಪ್ತಾಹದಡಿಯಲ್ಲಿ 10 ಶಾಲೆಯಲ್ಲಿ ಪ್ರತೀದಿನ ಹಿರೋಶಿಮಾ ನಾಗಸಾಕಿ ದುರಂತದ ವಿವರಗಳನ್ನು ನೀಡಲಾಯಿತು. ವಿದ್ಯಾರ್ಥಿಗಳು ಶಾಂತಿಪರ ಘೋಷಣೆಗಳನ್ನು ಕೂಗಿದರು. ಈ ಸಪ್ತಾಹದಲ್ಲಿ 3 ಸಾವಿರ ವಿದ್ಯಾರ್ಥಿಗಳನ್ನು ತಲುಪಲಾಯಿತು. ಪ್ರತೀ ಶಾಲಾ ಕಾಲೇಜಿನಲ್ಲೂ ಚಲನಚಿತ್ರ ಪ್ರದರ್ಶನ ಹಾಗೂ ಮಿನಿ ಪ್ಲಾನಿಟೇರಿಯಂನ ಮೂಲಕ ಖಗೋಳಲೋಕದ ಪರಿಚಯ ಮಾಡಿಕೊಡಲಾಯಿತು.

ಸಪ್ತಾಹದ ಸಮಾರೋಪದ ಅಂಗವಾಗಿ ರಾಜಾಜಿನಗರದ ಬೀದಿ ಬೀದಿಗಳಲ್ಲಿ ಶಾಂತಿ ಓಟವನ್ನು ಹಮ್ಮಿಕೊಳ್ಳಲಾಗಿತ್ತು. ಸುಮಾರು 500 ಜನ ವಿದ್ಯಾರ್ಥಿ, ವಿದ್ಯಾರ್ಥಿನಿಯರು, ಸಾರ್ವಜನಿಕರು ಭಾಗವಹಿಸಿದ ಈ ಶಾಂತಿ ಓಟವನ್ನು ವಾಣಿವಿದ್ಯಾ ಕೇಂದ್ರದಲ್ಲಿ ಎಸ್.ಎಸ್. ಶರ್ಮ ಉದ್ಘಾಟಿಸಿದರು. ನಂತರ 7ಕಿ.ಮೀ ಓಟದಲ್ಲಿ ವಿದ್ಯಾರ್ಥಿಗಳು ಹಿರೊಶಿಮಾ ನಾಗಸಾಕಿ ಬೇಡ! ಬೇಡ! ಎಂಬ ಘೋಷಣೆ ಕೂಗಿದರು. ಶಾಂತಿ ಓಟದಲ್ಲಿ ಪಾಲ್ಗೊಂಡವರನ್ನು ಸು.ರಂ ಎಕ್ಕುಂಡಿ ಬರಮಾಡಿಕೊಂಡರು.

ಪಡಿತರ ಖೋತಾ ವಿರುದ್ಧ ಪ್ರತಿಭಟನೆ

ಇತ್ತೀಚೆಗೆ ಕೇಂದ್ರ ಸರ್ಕಾರವು ರಾಜ್ಯಕ್ಕೆ ಸರಬರಾಜು ಮಾಡುತ್ತಿದ್ದ ಪಡಿತರ ಧಾನ್ಯಗಳ ಪ್ರಮಾಣವನ್ನು ತೀವ್ರವಾಗಿ ಕಡಿತಗೊಳಿಸಿರುವುದರ ವಿರುದ್ಧ ಸಿ.ಪಿ.ಐ. (ಎಂ) ಬೆಂಗಳೂರು ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಕಳೆದ ಜುಲೈ 19ರಂದು ಪ್ರತಿಭಟನಾ ಕಾರ್ಯಕ್ರಮವೊಂದನ್ನು ಏರ್ಪಡಿಸಲಾಗಿತ್ತು. ನಗರದ ಚಿಕ್ಕಲಾಲ್‌ಬಾಗ್‌ನಿಂದ ಸುರಿಯುವ ಮಳೆಯನ್ನು ಲೆಕ್ಕಿಸದೆ ಖಾಲಿ ತಟ್ಟೆಗಳನ್ನು ಬಡಿಯುತ್ತಾ, ಘೋಷಣೆಗಳನ್ನು ಕೂಗುತ್ತಾ ಮಹಿಳೆಯರೂ, ಮಕ್ಕಳೂ ಸೇರಿದಂತೆ ನೂರಾರು ಕಾರ್ಯಕರ್ತರು ರಾಜಭವನಕ್ಕೆ ಮೆರವಣಿಗೆಯಲ್ಲಿ ತೆರಳಿ ರಾಜ್ಯಪಾಲರಿಗೆ ಮನವಿ ಅರ್ಪಿಸಲಾಯಿತು.

ಕೇಂದ್ರ ಸರ್ಕಾರವು ಪ್ರತಿ ತಿಂಗಳು ರಾಜ್ಯಕ್ಕೆ ಒದಗಿಸುತ್ತಿದ್ದ ಅಕ್ಕಿಯ ಪ್ರಮಾಣವನ್ನು 25 ಸಾವಿರ ಟನ್‌ಗಳಿಂದ 15 ಸಾವಿರ ಟನ್‌ಗಳಿಗೆ ಇಳಿಸಿದ ಪರಿಣಾಮವಾಗಿ ರಾಜ್ಯ ಸರ್ಕಾರವು ತೀವ್ರ ಪಡಿತರ ಖೋತಾವನ್ನು ಜಾರಿಗೊಳಿಸಿದೆ. ಇದರಿಂದಾಗಿ ಬೆಂಗಳೂರು ನಗರದಲ್ಲಿ ರೇಷನ್‌ಕಾರ್ಡುದಾರರಿಗೆ ದೊರೆಯುತ್ತಿದ್ದ ಗರಿಷ್ಠ 25 ಕೆ.ಜಿ. ಅಕ್ಕಿಯ ಬದಲು ಈಗ ಕೇವಲ 17.5 ಕೆ.ಜಿ. ಮಾತ್ರ ನೀಡಲಾಗುತ್ತಿದೆ. ರಾಜ್ಯದ ಇತರೆ ಭಾಗಗಳಿಗೂ ಪಡಿತರ ಖೋತಾ ಅನ್ವಯಗೊಳಿಸಲಾಗಿದೆ. ಕಳೆದ ಒಂದು ವರ್ಷದ ಅವಧಿಯಲ್ಲಿ ಸುಮಾರು ಶೇ. 50 ರಷ್ಟು ಖೋತಾ ವಿಧಿಸಲಾಗಿದ್ದು ಬೆಲೆಗಳನ್ನು ಏರಿಸಲಾಗಿದೆಯಲ್ಲದೆ ಪದಾರ್ಥಗಳ ಗುಣ ಮಟ್ಟವೂ ಬಹಳ ಕಳಪೆಯಾಗಿದೆ ಎಂದು ಮನವಿಯಲ್ಲಿ ಆರೋಪಿಸಲಾಗಿದೆ.

ಜನತೆಯ ವಿಶ್ವಾಸದೊಂದಿಗೆ ಸರ್ಕಾರದ ದೃಢ ಹೆಜ್ಜೆ

'ಗಾಂಧೀಜಿಯ ಆವಿರ್ಭಾವ. ಅದೊಂದು ಅಪೂರ್ವ ಸನ್ನಿವೇಶ. ಅವರು ಹೊಸ ವಾತಾವರಣದ ವಿದ್ಯುತ್ ಸ್ಪರ್ಶ ಮಾಡಿದ ವಿಶಿಷ್ಟ ವ್ಯಕ್ತಿ. ಆ ಸ್ಪರ್ಶದಿಂದ ನಮ್ಮ ಕಾರ್ಯಕ್ಷೇತ್ರದ ಹರಹು ಮತ್ತಷ್ಟು ವಿಸ್ತಾರವಾಯಿತು. ಆ ದಿವ್ಯ ಚೇತನದ ಉಜ್ವಲ ಪ್ರಕಾಶದಿಂದ ನಮ್ಮ ಕಣ್ಣುಗಳನ್ನು ಕವಿದಿದ್ದ ಕತ್ತಲೆಯ ತೆರೆ ಸರಿಯಿತು. ಗಾಂಧೀಜಿ ಅಂತರಿಕ್ಷದಿಂದ ಇಳಿದು ಬಂದವರಲ್ಲ. ಭಾರತದ ಕೋಟಿ ಕೋಟಿ ಜನರ ನಡುವೆ ಉದಿಸಿ ಬಂದವರು'.

—ಜವಾಹರಲಾಲ್ ನೆಹರು

ಜವಾಹರಲಾಲ್ ನೆಹರು, ಸರ್ದಾರ್ ಪಟೇಲ್, ಸುಭಾಷ್‌ಚಂದ್ರ ಭೋಸ್, ಸರೋಜಿನಿ ನಾಯ್ಡು, ಜಯಪ್ರಕಾಶ್ ನಾರಾಯಣ್ ಮೊದಲಾದ ಮಹಾನ್ ಸ್ವಾತಂತ್ರ್ಯ ಯೋಧರೊಂದಿಗೆ ಭಾರತದ ವೈಭವಪೂರ್ಣ ಸ್ವಾತಂತ್ರ್ಯ ಧ್ಯೇಯಕ್ಕಾಗಿ ರಾಷ್ಟ್ರದ ಸಹಸ್ರ, ಸಹಸ್ರ ಸಂಖ್ಯೆಯ ಜನತೆಗೆ ಸ್ಫೂರ್ತಿ ನೀಡಿ, ಹುರಿದುಂಬಿಸಿದ ಅದ್ಭುತ ದಾರ್ಶನಿಕ ಚೇತನ, ಮಹಾತ್ಮಾ ಗಾಂಧೀಜಿ.

ತಮ್ಮ ಅಪೂರ್ವ ತ್ಯಾಗ ಮತ್ತು ಬಲಿದಾನದಿಂದ ರಾಷ್ಟ್ರಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟ ಹುತಾತ್ಮರಿಗೆ ಸ್ವಾತಂತ್ರ್ಯ ದಿನದಂದು ಶ್ರದ್ಧಾಂಜಲಿಯನ್ನರ್ಪಿಸುವುದು ನಮ್ಮ ಕರ್ತವ್ಯ. ಇದು ಒಂದು ಸಂಭ್ರಮದ ದಿನ, ನಿಜ. ಆದರೆ ಅದರೊಂದಿಗೇ ಸ್ವಾತಂತ್ರ್ಯ ಪದದ ಪೂರ್ಣವಾದ ಅರ್ಥವನ್ನು ಅರಿತುಕೊಳ್ಳುವ ದಿನವೂ ಹೌದು, ಎಂಬುದನ್ನು ನಾವು ಮರೆಯಬಾರದು.

ಕಳೆದ ಐದು ವರ್ಷಗಳಲ್ಲಿ ಕರ್ನಾಟಕ ರಾಜ್ಯ ವಿವಿಧ ಅಭಿವೃದ್ಧಿ ಕ್ಷೇತ್ರಗಳಲ್ಲಿ ಹೆಮ್ಮೆಪಟ್ಟುಕೊಳ್ಳುವಂತಹ ಸಾಧನೆ ಮಾಡಿದೆ. ಒಟ್ಟು ಜನತೆಯ ಕ್ಷೇಮಾಭ್ಯುದಯಕ್ಕಾಗಿ ಹಲವಾರು ಪ್ರಗತಿಪರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿರುವ ಕರ್ನಾಟಕ, ಮುನ್ನಡೆಯ ಹಾದಿಯಲ್ಲಿರುವ ಮುಂಚೂಣಿಯಲ್ಲಿರುವ ರಾಜ್ಯ.

ಕುಟುಂಬ ಯೋಜನೆ

ಕುಟುಂಬ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನದಲ್ಲಿ 1986-87 ರಲ್ಲಿ ಶೇ. 91.3 ರಷ್ಟು ಪ್ರಗತಿ ಸಾಧಿಸಿರುವ ಕರ್ನಾಟಕ ಚಿಕ್ಕ ಕುಟುಂಬದ ಆದರ್ಶಕ್ಕೆ ಮಾದರಿಯಾಗಿದೆ.

ಕುಡಿಯುವ ನೀರು

ಕಳೆದ 5 ವರ್ಷಗಳಲ್ಲಿ 50 ಸಾವಿರ ಕೊಳವೆ ಬಾವಿಗಳನ್ನು ಕೊರೆದಿರುವ ಕರ್ನಾಟಕ ದಾಖಲೆಯ ನಿರ್ಮಿಸಿದೆ.

ಪಂಪುಸೆಟ್ಟುಗಳಿಗೆ ವಿದ್ಯುತ್ ಪೂರೈಕೆ

ಪಂಪುಸೆಟ್ಟುಗಳಿಗೆ ವಿದ್ಯುತ್ ಪೂರೈಸುವ ವಿಚಾರದಲ್ಲಿ ಗುರಿ ಮೀರಿದ ಸಾಧನೆಯಾಗಿದೆ.

ಖುಷ್ಕಿಭೂಮಿ ಅಭಿವೃದ್ಧಿ

ಖುಷ್ಕಿಭೂಮಿ ಅಭಿವೃದ್ಧಿಗಾಗಿ ವೈಜ್ಞಾನಿಕ ಯೋಜನೆ ಕೈಗೊಂಡಿರುವ ಕರ್ನಾಟಕ, ಇರುವ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿ, ಕೃಷಿ ಕ್ಷೇತ್ರದಲ್ಲಿ ಅಧಿಕ ಉತ್ಪಾದನೆಗೆ ಅವಕಾಶ ಕಲ್ಪಿಸಿದೆ. ಇಪ್ಪತ್ತು ಅಂಶಗಳ ಕಾರ್ಯಕ್ರಮದ ಅನುಷ್ಠಾನದಲ್ಲಿ ಕರ್ನಾಟಕ ಒಳ್ಳೆಯ ಸಾಧನೆ ತೋರಿದೆ.

ಜನತೆಯ ಕೈಗೇ ಅಧಿಕಾರ

ಗಾಂಧೀಜಿಯ 'ಗ್ರಾಮರಾಜ್ಯ'ದ ಕಲ್ಪನೆಯನ್ನು ಕೃತಿಗಿಳಿಸಿ ಪಂಚಾಯತಿ ರಾಜ್ಯ ವ್ಯವಸ್ಥೆಯನ್ನು ಜಾರಿಗೆ ತಂದಿರುವ ಕರ್ನಾಟಕ, ಅಧಿಕಾರ ವಿಕೇಂದ್ರೀಕರಣದ ಹಾದಿಯಲ್ಲಿ ದಿಟ್ಟ ಹೆಜ್ಜೆಯನ್ನಿಟ್ಟಿರುವ ರಾಜ್ಯ. ಈಗ ರಾಜ್ಯದಲ್ಲಿ ಜನತೆಯ ಕೈಗೇ ಅಧಿಕಾರ. ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸುವವರೂ ಅವರೇ, ಅನುಷ್ಠಾನಗೊಳಿಸುವ ಹೊಣೆಯೂ ಅವರದೇ.

ಚುನಾವಣಾ ಸುಧಾರಣೆ

ಹಲವಾರು ಚುನಾವಣಾ ಸುಧಾರಣೆಗಳನ್ನು ಜಾರಿಗೆ ತಂದಿರುವ ಕರ್ನಾಟಕ ಪ್ರಜಾಪ್ರಭುತ್ವ ತತ್ವವನ್ನು ಅನ್ವರ್ಥಗೊಳಿಸಿದೆ.

ಸ್ವಚ್ಛ ಆಡಳಿತ

ಅಧಿಕಾರದ ದುರುಪಯೋಗ ಮತ್ತು ಭ್ರಷ್ಟಾಚಾರವನ್ನು ತಡೆಗಟ್ಟಿ, ಆಡಳಿತ ಕ್ಷೇತ್ರದಲ್ಲಿ ಸ್ವಚ್ಛತೆ ಮತ್ತು ದಕ್ಷತೆಯನ್ನು ಮೂಡಿಸುವ ಸಲುವಾಗಿ ಕರ್ನಾಟಕ ಸರಕಾರ ಕೈಗೊಂಡಿರುವ ಒಂದು ಆದರ್ಶ ನಿರ್ಧಾರ, ಲೋಕಾಯುಕ್ತದ ರಚನೆ.

ಬಡತನ, ಅನಕ್ಷರತೆ, ಅಜ್ಞಾನ ಮತ್ತು ಶೋಷಣೆಗಳ ನಿರ್ಮೂಲನಕ್ಕೆ ನಿರಂತರ ಪ್ರಯತ್ನ ನಡೆಸುತ್ತಿರುವ ಕರ್ನಾಟಕ ಸರ್ಕಾರ, ಜನತೆಯ ವಿಶ್ವಾಸದೊಂದಿಗೇ ಸಾಮಾಜಿಕ ಸಮಾನತೆಯನ್ನು ಸಾಧಿಸುವ ದೃಢವಿಶ್ವಾಸವನ್ನು ಹೊಂದಿದೆ.

ಕರ್ನಾಟಕ ವಾರ್ತೆ

ದ. ಆಫ್ರಿಕಾ : ಪತ್ರಕರ್ತರ ಹೋರಾಟ

ದ.ಆಫ್ರಿಕಾದ ಪತ್ರಕರ್ತರು, ಕಾರ್ಮಿಕ ಸಂಘಟನೆಗಳು, ಚರ್ಚ್ ಪ್ರಮುಖರು, ವ್ಯಾಪಾರಿಗಳು, 'ಪತ್ರಕರ್ತರು ಖಡ್ಡಾಯವಾಗಿ ನೊಂದಾಯಿಸಬೇಕು' ಎಂಬ ನಿರ್ಬಂಧವು ಸೇರಿದಂತೆ ದಕ್ಷಿಣ ಆಫ್ರಿಕಾದ ವರ್ಣದ್ವೇಷಿ ಆಡಳಿತ ವರ್ಗವು ಅನುಸರಿಸುತ್ತಿರುವ ಪತ್ರಿಕಾ ಸ್ವಾತಂತ್ರ್ಯ ವಿರೋಧಿ ನೀತಿಗಳನ್ನು ವಿರೋಧಿಸಿ ಬೀದಿಗಿಳಿದಿದ್ದಾರೆ. ಇತ್ತೀಚೆಗೆ ನಡೆದ ಬಹಿರಂಗ ಸಭೆಯೊಂದರಲ್ಲಿ ಪತ್ರಿಕಾ ಸೆನ್ಸಾರ್ ಕ್ರಮವನ್ನು ಉಗ್ರವಾಗಿ ಖಂಡಿಸಿ -ಪತ್ರಕರ್ತರು ನೊಂದಾಯಿಸಿಕೊಳ್ಳದಿರಲು ತೀರ್ಮಾನಿಸಲಾಯಿತು.

ಕಳೆದ ಜೂನ್ ತಿಂಗಳಲ್ಲಿ ದ. ಆಫ್ರಿಕಾದ ಆಡಳಿತ ವರ್ಗವು ವಿದೇಶಿ ಬಡ್ಡಿದಾರರನ್ನು ಹೊರತು ಪಡಿಸಿ ಸುದ್ದಿಸಂಸ್ಥೆಗಳಿಗೆ ಕೆಲಸ ಮಾಡುವ ಎಲ್ಲಾ ಪತ್ರಕರ್ತರು ಖಡ್ಡಾಯವಾಗಿ ನೊಂದಾವಣೆ ಮಾಡಿಸಿಕೊಳ್ಳಬೇಕೆಂದು ಆದೇಶ ಹೊರಡಿಸಿರುವುದನ್ನು ಇಲ್ಲಿ ಸ್ಮರಿಸಬಹುದು. ನೊಂದಾಯಿಸಿಕೊಳ್ಳದಿದ್ದಲ್ಲಿ ಅಂತವರಿಗೆ 10 ವರ್ಷ ಜೈಲು ಶಿಕ್ಷೆ ಹಾಗೂ 20,000 ರಾಂಡ್ (ಸುಮಾರು 9,400 ಡಾಲರ್) ದಂಡ ವಿಧಿಸಲಾಗುವುದು. ಬೋಥಾ ಪ್ರಭುತ್ವ ಪತ್ರಿಕಾ ಸ್ವಾತಂತ್ರ್ಯದ ಮೇಲೆ ನಡೆಸಿರುವ ನೇರ ದಾಳಿ ಇದು.

ಒಲಿಂಪಿಕ್ಸ್ ಸಂದರ್ಭದಲ್ಲಿ ಯುದ್ಧದ ಆಟಕ್ಕೆ ಸಿದ್ಧತೆ

ಮುಂಬರುವ ಸಿಯೋಲ್ ಒಲಿಂಪಿಕ್ಸ್ ಸಂದರ್ಭದಲ್ಲಿ ಪ್ರಚೋದನಕಾರಿ ನಾವಿಕ ಯುದ್ಧದ ಆಟಕ್ಕೆ ಅಮೇರಿಕ ಮತ್ತು ಜಪಾನ್ ಒಂದೆಡೆ ಹಾಗು ದಕ್ಷಿಣ ಕೊರಿಯ ಇನ್ನೊಂದೆಡೆ ಸಿದ್ಧತೆ ಮಾಡುವ ಸನ್ನಾಹದಲ್ಲಿವೆ. ಜಪಾನ್ ಪತ್ರಿಕೆಯೊಂದು ಇತ್ತೀಚೆಗೆ ಈ ಬಗ್ಗೆ ವರದಿ ಪ್ರಕಟಿಸಿದೆ. ಕೊರಿಯಾ ಜಲಯುದಲ್ಲಿ ವರ್ಷಂ ಪ್ರತಿ ಅಮೇರಿಕವು ಬಲ ಪ್ರದರ್ಶನೆಯೊಂದಿಗೆ ತಿಂಗಳಾನುಗಟ್ಟಲೆ 'ಟೀಮ್ ಸ್ಪಿರಿಟ್' ಎಂಬ ಹೆಸರಿನಲ್ಲಿ ಸೈನಿಕ ಕವಾಯಿತನ್ನು ನಡೆಸುತ್ತಲೇ ಬರುತ್ತಿದೆ. ಇತ್ತೀಚೆಗಷ್ಟೇ ಈ ಕವಾಯಿತು ಮುಗಿದಿದ್ದಾಗ್ಯೂ, ಈಗ ಒಲಿಂಪಿಕ್ಸ್ ಆಟದ ಸಂದರ್ಭದಲ್ಲಿ ಮತ್ತೆ ಎರಡನೇ ಬಾರಿಗೆ ಈ ಬಗ್ಗೆ ಅಮೇರಿಕ ತಯಾರಿ ನಡೆಸಿದೆ.

ಶಾಂತಿಯ ಸಂಕೇತವಾದ ಒಲಿಂಪಿಕ್ಸ್ ಸ್ಪರ್ಧೆಯ ಸಂದರ್ಭದಲ್ಲಿ ಘರ್ಷಣೆಯ ವಾತಾವರಣ ನಿರ್ಮಿಸಲು ಹಾಗು ಎರಡೂ ಕೊರಿಯಾ ಪ್ರಾಂತ್ಯಗಳ ವಿದ್ಯಾರ್ಥಿಗಳು ತಮ್ಮ ತಾಯ್ನಾಡನ್ನು ಐಕ್ಯಗೊಳಿಸಲು ಸ್ನೇಹಪೂರ್ಣ ಸಂಬಂಧ ಏರ್ಪಡಿಸುವ ಪರಿಸ್ಥಿತಿಯನ್ನು ಕದಡಲು ಅಮೇರಿಕ ಉದ್ದೇಶಿಸಿದಂತಿದೆ.

ಇದೇ ಸಂದರ್ಭದಲ್ಲಿ ದಕ್ಷಿಣ ಕೊರಿಯಾದಲ್ಲಿ ಕಾರ್ಮಿಕ ವರ್ಗ ತಮ್ಮ ಬೇಡಿಕೆಗಳನ್ನು ಮುಂದಿರಿಸಿ ದೀರ್ಘಕಾಲದ ಮುಷ್ಕರವನ್ನು ನಡೆಸುತ್ತಿದ್ದು ಸರ್ಕಾರ ತೀವ್ರ ಆರ್ಥಿಕ ಹೊಡೆತ ತಿನ್ನಲಾರಂಭಿಸಿದೆ.

'ಸೋತ' ಆಗಿರುವ ಅಮೇರಿಕಾದ ಬ್ಯಾಂಕುಗಳು

ಜಗತ್ತಿನ ಲೇವಾದೇವಿ ದೊರೆ, ಚಕ್ರಬಡ್ಡಿ ನೇತಾರ, ಬಂಡವಾಳಶಾಹಿ ಪ್ರಭು ಅಮೇರಿಕ ಬ್ಯಾಂಕಿಂಗ್ ವ್ಯವಹಾರದ ಸ್ಪರ್ಧೆಯಲ್ಲಿ ಸೋಲಿನ ಹೊಸ್ತಿಲಿಗೆ ತಳ್ಳಲ್ಪಟ್ಟಿದೆ. ಕಳೆದ ವರ್ಷ ಜಗತ್ತಿನ ಅತೀ ದೊಡ್ಡ 25 ಬ್ಯಾಂಕುಗಳ ಪಟ್ಟಿಯಲ್ಲಿ ಅಮೇರಿಕಾದ ಯಾವೊಂದು ಬ್ಯಾಂಕಿನ ಹೆಸರೂ ಇಲ್ಲದಿರುವುದು ಗಮನೀಯ ಅಂಶ. 1987 ವರ್ಷದ ಕೊನೆಯಲ್ಲಿ ಜಗತ್ತಿನ 500 ಅತೀ ದೊಡ್ಡ ಬ್ಯಾಂಕುಗಳ ಡಿಪೋಸಿಟ್ ಪಟ್ಟಿಯಲ್ಲಿ 101.1 ಬಿಲಿಯನ್ ಡಾಲರ್ ಡಿಪೋಸಿಟ್ ಹೊಂದಿರುವ ಅಮೇರಿಕಾದ 'ಸಿಟಿಬ್ಯಾಂಕ್' 28ನೇ ಸ್ಥಾನವನ್ನು ಪಡೆದಿದೆ. 1986 ರಲ್ಲಿ ಇದೇ ಸಿಟಿಬ್ಯಾಂಕ್ 17ನೇ ಸ್ಥಾನ ಹೊಂದಿತ್ತು. 'ಅಮೇರಿಕನ್ ಬ್ಯಾಂಕರ್' ಎಂಬ ಆರ್ಥಿಕ ಸಲಹಾ ದೈನಿಕವು ಬಿಡುಗಡೆ ಮಾಡಿರುವ ಸಮೀಕ್ಷ ವರದಿ ಗೀತ್ಯ ಜಗತ್ತಿನ ಅತ್ಯಂತ ದೊಡ್ಡ ಬ್ಯಾಂಕುಗಳ ಪಟ್ಟಿಯಲ್ಲಿ 101 ಬ್ಯಾಂಕುಗಳು ಜಪಾನ್ ಮೂಲದ್ದಾಗಿವೆ. ಬ್ಯಾಂಕಿಂಗ್ ಸ್ಪರ್ಧೆಯಲ್ಲಿ ಜಪಾನ್ ಅಮೇರಿಕವನ್ನು ಹಿಂದಕ್ಕೆ ಸರಿಸಿರುವುದು ಇದರಿಂದ ಸ್ಪಷ್ಟವಾಗಿದೆ.

275.3 ಬಿಲಿಯನ್ ಡಾಲರ್ ಡಿಪೋಸಿಟ್ ಹೊಂದಿರುವ ಟೋಕಿಯೋದ ಡಾ-ಇಚಿ ಕಾಂಗ್ಯೋ ಬ್ಯಾಂಕ್ ಠೇವಣಿಯಲ್ಲಿ ಮೊದಲ ಸ್ಥಾನ ಪಡೆದಿದೆ.

ಟರ್ಕಿ ದೇಶದ ಕಮ್ಯೂನಿಸ್ಟರ ಮುಂದುವರಿದ ವಿಚಾರಣೆ

ಟರ್ಕಿ ದೇಶದ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಹೇದರ್ ಕುಟ್ಲು ಹಾಗೂ ಟರ್ಕಿಯ ಕಾರ್ಮಿಕರ ಪಕ್ಷದ ಪ್ರಧಾನ ಕಾರ್ಯದರ್ಶಿ ನಿಹಾತ್ ಸಾರ್‌ಗಿನ್‌ರವರುಗಳ ಮೇಲೆ ಅವರ ಇತರೇ ಸಂಗಾತಿಗಳೊಂದಿಗೆ ಸುಳ್ಳು ಮೊಖದ್ದಮೆ ಹೂಡಿರುವ ಟರ್ಕಿಯ ಪ್ರತಿಗಾಮಿ ಸರಕಾರ ವಿಚಾರಣೆಯನ್ನು ಮುಂದುವರಿಸಿದೆ. ವಿಚಾರಣೆಯ ಸಂದರ್ಭದಲ್ಲಿ ತನ್ನ ಮೇಲೆ ಹಾಗೂ ಕಮ್ಯೂನಿಸ್ಟ್ ಪಕ್ಷದ ಮೇಲೆ ಹೊರಿಸಲಾಗಿರುವ ಆಪಾದನೆಗಳನ್ನು ಖಂಡ ತುಂಡವಾಗಿ ನಿರಾಕರಿಸಿದ ಹೇದರ್ ಕುಟ್ಲುರವರು ಈ ವಿಚಾರಣೆಯು ನ್ಯಾಯಬಾಹಿರವೂ-ಪಕ್ಷಪಾತಿಯೂ ಆಗಿದೆ ಎಂದು ವಾದಿಸಿದರು. ಮಾರ್ಕ್ಸ್‌ವಾದಿ-ಲೆನಿನ್ ಸಿದ್ಧಾಂತಕ್ಕೆ ತದ್ವಿರುದ್ಧವಾದ ಉದ್ದೇಶ ವಿಚಾರಣೆಯಲ್ಲಿರುವುದಾಗಿ ಅಭಿಪ್ರಾಯಪಟ್ಟರು.

1980 ರ ಸೈನ್ಯದಂಗೆಯ ಸಂದರ್ಭದಲ್ಲಿ ದೇಶದಾದ್ಯಂತ ನಡೆದ ಭಯೋತ್ಪಾದಕತೆಯನ್ನು ಟರ್ಕಿಯ ಕಮ್ಯೂನಿಸ್ಟ್ ಪಕ್ಷ ಹರಿಯಬಿಟ್ಟಿತೆಂಬ ಆಪಾದನೆ ನಿರಾಧಾರವಾದದ್ದೆಂದು ಅವರು ವಾದಿಸಿದರು.

ಆಫ್ರಿಕಾ : ಹೆಚ್ಚುತ್ತಿರುವ ನಿರಾಶ್ರಿತರ ಸಮಸ್ಯೆ

ಜಗತ್ತಿನ ನಿರಾಶ್ರಿತರಲ್ಲಿ 1/3 ಭಾಗ ಅಂದರೆ ಸುಮಾರು 4 ಮಿಲಿಯ ನಿರಾಶ್ರಿತರು ಈಗ ಆಫ್ರಿಕಾದಲ್ಲಿದ್ದಾರೆ. ವಿಶ್ವಸಂಸ್ಥೆಯ ನಿರಾಶ್ರೀತರ ಹೈಕಮೀಷನರ್ ಕಛೇರಿ ವರದಿ ಪ್ರಕಾರ ದಕ್ಷಿಣ ಆಫ್ರಿಕಾದಲ್ಲಿ ಈ ಸಮಸ್ಯೆ ಅತ್ಯಂತ ಕೆಟ್ಟದಾಗಿದೆ. ಅಂಗೋಲ ಒಂದರಲ್ಲೆ 91 ಸಾವಿರ ನಿರಾಶ್ರಿತರಿದ್ದಾರೆ. ಇದರಲ್ಲಿ 69 ಸಾವಿರ ಜನ ನಮೀಬಿಯಾದಿಂದ, 10 ಸಾವಿರ ಜನ ದಕ್ಷಿಣ ಆಫ್ರಿಕಾದಿಂದ ಮತ್ತು 12 ಸಾವಿರ ಜನ ನಿರಾಶ್ರಿತರು ಜ್ಯಾರಿ ದೇಶಗಳಿಂದ ವಲಸೆ ಬಂದವರಾಗಿದ್ದಾರೆ.

ಆಫ್ರಿಕಾದ ಐಕ್ಯತಾ ಸಂಸ್ಥೆ (O.A.U.) ಜೂನ್ 20 ರಂದು "ಆಫ್ರಿಕಾದ ನಿರಾಶ್ರಿತರ ದಿನ" ವನ್ನು ಆಚರಿಸಿರುವುದನ್ನು ನಾವು ಇಲ್ಲಿ ಗಮನಿಸಬಹುದು. ಬಹುಪಾಲು ನಿರಾಶ್ರಿತರು ಕನಿಷ್ಠ ಆಹಾರ ಹಾಗೂ ಬಟ್ಟೆಯು ಇಲ್ಲದೆ ಬಳಲುತ್ತಿದ್ದಾರೆ.

ಭಾರತೀಯ ಕಾರ್ಮಿಕರ ಸಂಘಟನೆ (ಗ್ರೇಟ್ ಬ್ರಿಟನ್) : ಸುವರ್ಣ ಮಹೋತ್ಸವ ಆಚರಣೆ

ಗ್ರೇಟ್ ಬ್ರಿಟನ್‌ನಲ್ಲಿರುವ 'ಭಾರತೀಯ ಕಾರ್ಮಿಕರ ಸಂಘಟನೆ' (ಐ. ಡಬ್ಲ್ಯು .ಎ) ಇತ್ತೀಚೆಗೆ(ಜುಲೈ 9) ಲಂಡನ್ನಿನ ಸೌತ್ಹಾಲ್‌ನಲ್ಲಿ ತನ್ನ ಸುವರ್ಣ ಮಹೋತ್ಸವವನ್ನು ಆಚರಿಸಿತು.

ಲಂಡನ್ ಮಹಾ ನಗರದಿಂದ 90 ಮೈಲು ದೂರದಲ್ಲಿರುವ ಕೈಗಾರಿಕಾ ನಗರವಾದ ಕೊವೆಂಟ್ರಿಯಲ್ಲಿ 1938 ರಲ್ಲಿ ಬ್ರಿಟನ್ನಿನಲ್ಲಿರುವ ಭಾರತೀಯ ಕಾರ್ಮಿಕರ ಸಣ್ಣ ಗುಂಪಾಗಿ ಪ್ರಾರಂಭಿಸಲ್ಪಟ್ಟ ಐ.ಡಬ್ಲ್ಯು.ಎ ಇಂದು ಬ್ರಿಟನ್ನಿನ 15 ಪ್ರಮುಖ ನಗರಗಳಲ್ಲಿ ಹಾಗು ಇತರ ಪಟ್ಟಣ ಪ್ರದೇಶಗಳನ್ನು ಒಳಗೊಂಡಂತೆ 20 ಸಾವಿರ ಸದಸ್ಯ ಬಲವನ್ನು ಪಡೆದಿದೆ. ಬ್ರಿಟನ್ನಿನ ವರ್ಣಪಕ್ಷಪಾತಿ ವಲಸೆ ಕಾಯಿದೆ ವಿರುದ್ಧ ಧೀಮಂತ ಹೋರಾಟ ನಡೆಸುತ್ತಿರುವ ಪ್ರಮುಖ ಸಂಘಟನೆ ಇದಾಗಿದೆ.

ಈ ಹಿಂದೆ ಭಾರತದ ಸ್ವಾತಂತ್ರ್ಯಕ್ಕಾಗಿ ಕೆಲಸ ನಿರ್ವಹಿಸಿದ ಐ.ಡಬ್ಲ್ಯು.ಎ ಈಗ ಭಾರತದ ಸ್ವಾತಂತ್ರ್ಯ-ಐಕ್ಯತೆ-ಸಮಗ್ರತೆಗೆ ಬಂದಿರುವ ಗಂಭೀರ ಅಪಾಯದ ವಿರುದ್ಧ ಜನಾಭಿಪ್ರಾಯ ಮೂಡಿಸುತ್ತಾ ಹೋರಾಡುತ್ತಿದೆ. ಖಲಿಸ್ತಾನ್ ಚಳುವಳಿ ವಿರುದ್ಧ ದೃಢವಾಗಿ ನಿಂತ ಈ ಸಂಘಟನೆಯ ನಾಯಕತ್ವ ತೀವ್ರ ದೈಹಿಕ ದಾಳಿಗೂ ಒಳಗಾಗಿದೆ.

ಈ ಸುವರ್ಣ ಮಹೋತ್ಸವದ ವರ್ಷದಲ್ಲಿ ಬ್ರಿಟನ್ನಿನ ವಿವಿಧ ನಗರಗಳಲ್ಲಿ ಐ.ಡಬ್ಲ್ಯು.ಎ ಸಭೆಸಮಾರಂಭಗಳನ್ನು ನಡೆಸಿದೆ. ಆಚರಣೆಯ ಅಂಗವಾಗಿ ವಿಶೇಷ ಸಮಾರಂಭವೊಂದು ಜೂನ್ 9 ರಂದು ಲಂಡನ್ನಿನ ಸೌತ್ಹಾಲ್‌ನ ವಿಲ್ಲಿಯರ್ಸ್ ಹೈಸ್ಕೂಲಿನಲ್ಲಿ ಸಂಘಟಿಸಲಾಗಿತ್ತು. ಗ್ರೇಟ್ ಬ್ರಿಟನ್ನಿನ ಎಲ್ಲಾ ಭಾಗಗಳಿಂದ 600 ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದ್ದರು. ವಿಶೇಷವಾಗಿ ರಚಿಸಲಾಗಿದ್ದ ವೇದಿಕೆಯಲ್ಲಿ ದಕ್ಷಿಣ ಆಫ್ರಿಕಾದ ಮುಖಂಡ ನೆಲ್ಸನ್ ಮಂಡೇಲಾ ಹಾಗು ಭಾರತದ ಸಿ.ಪಿ. ಐ.(ಎಂ) ಮುಂದಾಳು, ಹುತಾತ್ಮ ಸಂಗಾತಿ ಚನ್ನನ್‌ಸಿಂಗ್ ದಾವುತ್‌ರವರ ದೊಡ್ಡ ಗಾತ್ರದ ಛಾಯಚಿತ್ರಗಳನ್ನು ಇರಿಸಲಾಗಿತ್ತು.

ಈ ಹಿಂದೆಯೂ ಹಲವಾರು ಬಾರಿ ಭಾರತದಿಂದ ಮುಖಂಡರುಗಳು ಐ.ಡಬ್ಲ್ಯು.ಎ. ಸಮಾರಂಭಗಳಲ್ಲಿ ಹಾಜರಾಗಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ವಿವಿಧ ಹೋರಾಟಗಾರ ಸಂಘಟನೆಗಳು ಈ ಸಂದರ್ಭದಲ್ಲಿ ಹಾಜರಿದ್ದರೆ, ಕೆಲವು ಸಂಘಟನೆಗಳಿಂದ ಶುಭ ಸಂದೇಶಗಳು ಬಂದಿದ್ದವು. ಸಿ.ಪಿ.ಐ.(ಎಂ) ಪಾಲಿಟ್ ಬ್ಯೂರೋ ಸದಸ್ಯ ಹರ್‌ಕಿಶನ್‌ಸಿಂಗ್ ಸುರ್ಜಿತ್ ಸಮಾರಂಭದ ಮುಖ್ಯ ಅತಿಥಿಗಳಾಗಿದ್ದರು. ಪಕ್ಷದ ಕೇಂದ್ರ ಸಮಿತಿ ಸದಸ್ಯ ಡಾ||ಬಿಪಲಾಬ್ ದಾಸ್‌ಗುಪ್ತ ಕೂಡ ಸಮಾರಂಭದಲ್ಲಿ ಹಾಜರಿದ್ದರು.

ಸಮಾರಂಭದಲ್ಲಿ ಮಾತನಾಡಿದ ಸುರ್ಜಿತ್‌ರವರು ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಪಂಜಾಬ್ ಜನತೆಯ ಪಾತ್ರವನ್ನು ವಿವರಿಸಿದರು. ಕೆಲವು ಜನ ಈಗ ಕೋಮುದೃಷ್ಟಿಕೋನದಿಂದ ಚರಿತ್ರೆಯನ್ನು ವಿಕೃತಗೊಳಿಸಲು ಪ್ರಯತ್ನಿಸುತ್ತಿದ್ದಾರೆ. ಆದರೆ ವಾಸ್ತವದಲ್ಲಿ ಪಂಜಾಬಿನ ಸಿಕ್ಕರು, ಹಿಂದುಗಳು ಮತ್ತು ಮುಸ್ಲೀಮರು ಪ್ರತ್ಯೇಕ ಕೋಮುಗಳಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಲಿಲ್ಲ. ಆದರೆ ಪಂಜಾಬಿಗಳಾಗಿ, ಭಾರತೀಯರಾಗಿ ಅವರು ಹೋರಾಟಕ್ಕೆ ಧುಮುಕಿದರು. ಧಾರ್ಮಿಕ ಸಂಕುಚಿತತೆಯನ್ನು ಬಿಟ್ಟು ಈ ದಿನ ರಾಷ್ಟ್ರೀಯ ಐಕ್ಯತೆಗಾಗಿ ನಾವು ದುಡಿಯಬೇಕಾಗಿದೆ ಎಂದು ಸುರ್ಜಿತ್ ಕರೆ ನೀಡಿದರು.

ಸಿಪಿಐ(ಎಂ) ಕೋಲಾರ ಜಿಲ್ಲಾ ಸಮಿತಿ ಕಛೇರಿ ಉದ್ಘಾಟನೆ

ಕೋಲಾರ ಜಿಲ್ಲೆಯಲ್ಲಿ ಕಮ್ಯೂನಿಸ್ಟ್ ಚಳುವಳಿ ಕಳೆದ ನಾಲ್ಕು ದಶಕಗಳಿಂದ ಬೆಳೆದು ಬಂದಿದ್ದರೂ ಇದುವರೆವಿಗೂ ಜಿಲ್ಲಾ ಕೇಂದ್ರದಿಂದ ಕಾರ್ಯ ನಿರ್ವಹಿಸುವುದು ಸಾಧ್ಯವಾಗಿರಲಿಲ್ಲ. ಜಿಲ್ಲೆಯ ಹೆಚ್ಚಿನ ತಾಲೂಕುಗಳಲ್ಲಿ ಸಾಮೂಹಿಕ ಸಂಘಟನೆಗಳು ಬೆಳೆಯುತ್ತಿರುವ ಮತ್ತು ಪಕ್ಷದ ಪ್ರಭಾವವು ವ್ಯಾಪಕವಾಗಿ ಬೆಳೆದು ಬರುತ್ತಿರುವ ಈ ಸಂದರ್ಭದಲ್ಲಿ ಕೋಲಾರ ಜಿಲ್ಲೆಯ ಸಿ.ಪಿ.ಐ.(ಎಂ) ಪಕ್ಷದ ಜಿಲ್ಲಾ ಸಮಿತಿಯು ಈ ಎಲ್ಲಾ ಹೋರಾಟಗಳಿಗೆ ಮತ್ತು ಬೆಳೆಯುತ್ತಿರುವ ಸಾಮೂಹಿಕ ಸಂಘಟನೆಗಳಿಗೆ ಸಮರ್ಥ ನಾಯಕತ್ವವನ್ನು ಜಿಲ್ಲಾ ಕೇಂದ್ರದಿಂದ ಕೊಡಲು ಅನುಕೂಲವಾಗುವಂತೆ ಪಕ್ಷದ ಜಿಲ್ಲಾ ಸಮಿತಿಯ ಕಛೇರಿಯನ್ನು ಕೋಲಾರ ನಗರದಲ್ಲಿ ದಿನಾಂಕ 16-7-88 ರಂದು ಸಂಜೆ 4.00 ಗಂಟೆಗೆ ಉದ್ಘಾಟಿಸಲಾಯಿತು.

ಪಕ್ಷದ ಕೇಂದ್ರ ಸಮಿತಿ ಸದಸ್ಯ ಹಾಗೂ ರಾಜ್ಯ ಸಮಿತಿ ಕಾರ್ಯದರ್ಶಿಯುಮಾದ ಕಾ|| ಪಿ. ರಾಮಚಂದ್ರರಾವ್‌ರವರು ಕಛೇರಿಯ ಕಲಾಪಗಳನ್ನು ಉದ್ಘಾಟನೆ ಮಾಡಿದರು. ಕಾ||ಜಿ.ವಿ. ಶ್ರೀರಾಮರೆಡ್ಡಿಯವರು ಸ್ವಾಗತಿಸಿದರು. ಅಧ್ಯಕ್ಷತೆಯನ್ನು ಮುಳಬಾಗಿಲು ಶಾಸಕರಾದ ಕಾ|| ಆರ್. ವೆಂಕಟರಾಮಯ್ಯನವರು ವಹಿಸಿದ್ದರು. ಕಾ|| ಪಿ. ರಾಮಚಂದ್ರ ರಾವ್‌ರವರು ಉದ್ಘಾಟನಾ ಭಾಷಣ ಮಾಡಿದರು.

ಜಿಲ್ಲೆಯ ಬೇರೆ ಬೇರೆ ತಾಲೂಕುಗಳಿಂದ ಉದ್ಘಾಟನಾ ಸಮಾರಂಭಕ್ಕೆ ಪಕ್ಷದ ಸಂಗಾತಿಗಳು ಮತ್ತು ಹಿತೈಷಿಗಳು ಆಗಮಿಸಿದ್ದರು.

ಕಾ|| ಶ್ರೀರಾಮರೆಡ್ಡಿ, ಕಾ|| ಟಿ. ಎಸ್ ಮಣಿ, ಕಾ|| ಕೆ. ಎಂ. ವೆಂಕಟೇಶ್ ಮುಂತಾದವರು ಮಾತನಾಡಿದರು.

ಹೋರಾಟದಲ್ಲಿ ಜನರನ್ನು ಅಣಿನೆರಸಿ

(1ನೇ ಪುಟದಿಂದ)

ಕ್ರಮಗಳನ್ನು ಮಾತ್ರ ತೆಗೆದುಕೊಳ್ಳುತ್ತಿದ್ದರು. ಈ ರೀತಿ ಮುಂದುವರಿಯಬಲ್ಲದೇ ಎಂದು ನಾವು ಹೇಳಲು ಸಾಧ್ಯವಿಲ್ಲ. ಬೊಮ್ಮಾಯಿ ಸರ್ಕಾರ ಕನಿಷ್ಟ ಪಕ್ಷ ಈ ಪಕ್ಷಪಾತಿಯಲ್ಲದ ನಿಲುವೊಯನ್ನು ಉಳಿಸಿಕೊಳ್ಳದಿದ್ದಲ್ಲಿ ಈ ಹಿಂದಿನ ಕಾರ್ಮಿಕ ಸಚಿವರು ಅನುಸರಿಸುತ್ತಿದ್ದ ಕಾರ್ಮಿಕ ಪರವಾದ ನೀತಿಯನ್ನು ಬಿಟ್ಟು ಕೊಟ್ಟು-ಸ್ಥಾಪಿತ ಹಿತಾಸಕ್ತಿಗಳ ಜಾಲಕ್ಕೆ ಬಿದ್ದಲ್ಲಿ-ತೀವ್ರವಾದ ಹಾನಿಯಾಗಲಿದೆ ಹಾಗೂ ಜನ ಸಮೂಹ ದಿಕ್ಕೆಡಲಿದೆ. ಬೆಂಗಳೂರು ಮತ್ತು ಇತರ ಪ್ರದೇಶಗಳ ಕಾರ್ಮಿಕ ವರ್ಗ ಕೇಂದ್ರ ಸರ್ಕಾರದ ನೀತಿಗಳ ವಿರುದ್ಧ ಸಾರ್ವಜನಿಕ ವಲಯದಲ್ಲಿ ನಡೆಸಿದ ಹೋರಾಟ, ಗುಂಡೂರಾವ್ ಸರ್ಕಾರ ಹರಿಯಬಿಟ್ಟ ದಾಳಿಯ ವಿರುದ್ಧ ರೈತ ಸಮೂಹ ನಡೆಸಿದ ಹೋರಾಟ-ಇವುಗಳು 1983ರಲ್ಲಿ ಜನತಾ ಪಕ್ಷದ ಸರ್ಕಾರವನ್ನು ಅಧಿಕಾರಕ್ಕೆ ತಂದಿತೇ ವಿನಃ 'ಆಕರ್ಷಣೆ' ಇಲ್ಲವೇ ಇತರೆ ಅಸ್ತಿತ್ವದಲ್ಲಿ ಇಲ್ಲದ ವಿಚಾರಗಳು ಅವರನ್ನು ಅಧಿಕಾರಕ್ಕೆ ಏರಿಸಲಿಲ್ಲ ಎಂಬುದನ್ನು ಅವರು ನೆನಪಿಸಿಕೊಂಡರೆ ಉತ್ತಮ.

ಸಾಮಾನ್ಯ ಸಾರ್ವತ್ರಿಕ ಚುನಾವಣೆ ಬರಲು ಕೇವಲ ಇನ್ನು 17 ತಿಂಗಳು ಮಾತ್ರ ಇದ್ದು ಈ ಸರ್ಕಾರದ ಸಾಧನೆ ರಾಜ್ಯಕ್ಕೆ ಹಾಗೂ ರಾಷ್ಟ್ರಕ್ಕೆ ಅತ್ಯಂತ ಪ್ರಮುಖವಾಗಲಿದೆ.

1983-85 ರಲ್ಲಿ ಕೇವಲ ಸೀಮಿತ ಮಟ್ಟದಲ್ಲಿ ನಡೆಸಲಾಗಿದ್ದ ಎಡ ಪಕ್ಷಗಳೊಂದಿಗಿನ ಮಾತುಕತೆಗಳನ್ನು ಜನತಾ ಪಕ್ಷವು ಮತ್ತೆ ಆರಂಭಿಸಲು ರಾಜ್ಯ ಸಮಿತಿಯು ಕರೆನೀಡುತ್ತದೆ. ಈ ಕೆಳಗಿನ ತುರ್ತು ಕ್ರಮಗಳನ್ನು ಕೈಗೊಳ್ಳಲು ಆಗ್ರಹಿಸುತ್ತದೆ.

1. ಬಡ ಮತ್ತು ಮಧ್ಯಮ ವರ್ಗದ ಪಾಳು ಭೂಮಿ ಉಳುಮೆಗಾರರಿಗೆ ಹಕ್ಕುಪತ್ರ ನೀಡುವುದು. ತೋಟಮಾಲೀಕರು ಮತ್ತು ಭೂಮಾಲೀಕರು ಆಕ್ರಮಿಸಿರುವ ಭೂಮಿಯನ್ನು ಕಾನೂನುಬದ್ಧಗೊಳಿಸಬಾರದು.

2. ಕಾರ್ಮಿಕ ವರ್ಗದ ಪರ ನೀತಿಯನ್ನು ಬಿಟ್ಟು ಕೊಡದೆ ಇದನ್ನು ಕಾರ್ಮಿಕ ಪ್ರತಿನಿಧಿಗಳೊಂದಿಗೆ ಮಾತುಕತೆನಡೆಸಿ ಮತ್ತಷ್ಟು ವಿಸ್ತರಿಸುವುದು.

3. ಕ್ಯಾಪಿಟೇಷನ್ ಫೀ — ವಿಸ್ತೃತ ಫೀ ಕ್ರಮಗಳನ್ನು ವೃತ್ತಿಪರ ಸಂಸ್ಥೆಗಳಲ್ಲಿ ಕೊನೆಗೊಳಿಸಿ, ವೃತ್ತಿಪರ ವಿದ್ಯಾಸಂಸ್ಥೆಗಳ ಗೌರವವನ್ನು ಮತ್ತೆ ಎತ್ತಿ ಹಿಡಿಯುವುದು.

4. ಕೇಂದ್ರ ಸರ್ಕಾರವು ಅಕ್ಕಿ ಕೋಟಾ ಕಡಿತ ಮಾಡಿಸಿರುವುದು ಇವೇ ಮೊದಲಾದ ಜನ ವಿರೋಧಿ ಕ್ರಮಗಳನ್ನು ಕೈಗೊಂಡಿರುವಾಗ ರಾಜ್ಯ, ಎಡ ಪ್ರಜಾಸತ್ತಾತ್ಮಕ ಜಾತ್ಯತೀತ ಪಕ್ಷಗಳೊಂದಿಗೆ ಸೇರಿ ಜನರನ್ನು ಸಂಘಟಿಸಿ, ಪ್ರತಿರೋಧ ರೂಪಿಸುವುದು.

5. ಪಡಿತರ ಕಡಿತವನ್ನು ರದ್ದುಪಡಿಸಿ. ಸೂಕ್ತ ಕ್ರಮಗೊಳ್ಳಲು ಕೂಡಲೆ ಕ್ರಮ ವಹಿಸುವುದು.

6. ಮುಚ್ಚಲ್ಪಟ್ಟ ಮಿಲ್ಲುಗಳು ಮತ್ತು ಕಾರ್ಖಾನೆಗಳನ್ನು ತೆರೆಸಲು ಕ್ರಮ ಕೈಗೊಂಡು ಜವಳಿ ಮತ್ತು ಇತರೆ ಕೈಗಾರಿಕೆಗಳಲ್ಲಿ ನಿರುದ್ಯೋಗವನ್ನು ಹೆಚ್ಚಿಸಲು ಕೇಂದ್ರ ಸರ್ಕಾರ ನಡೆಸುವ ಪ್ರಯತ್ನದ ವಿರುದ್ಧ ದೃಢವಾದ ಕ್ರಿಯಾಶೀಲವಾದ ಕ್ರಮವನ್ನು ವಹಿಸುವುದು.

ಈ ಎಲ್ಲದಕ್ಕಿಂತ ಮಿಗಿಲಾಗಿ ತನ್ನೊಳಗೆ ಮತ್ತೆ ಒಳ ಜಗಳ ಬಾರದಂತೆ ಕಾಯ್ದುಕೊಂಡು ಅಖಿಲ ಭಾರತ ಮಟ್ಟದಲ್ಲಿ ಸಾಧ್ಯವಿರುವ ಪರ್ಯಾಯವನ್ನು ಕನಿಷ್ಟ ಕಾರ್ಯಕ್ರಮದ ಆಧಾರದಲ್ಲಿ ರೂಪಿಸಲು ಎಡ ಪ್ರಜಾಪ್ರಭುತ್ವವಾದಿ ಜಾತ್ಯಾತೀತ ಶಕ್ತಿಗಳೊಂದಿಗೆ ಸೇರಿ ರೂಪಿಸಲು ಪ್ರಯತ್ನಿಸಬೇಕು.

ರಾಷ್ಟ್ರ ಮಟ್ಟದಲ್ಲಿ ಹಾಗೂ ರಾಜ್ಯದಲ್ಲಿ ಕಾಂಗ್ರೆಸ್ (ಐ) ಪಕ್ಷದ ಕುಕೃತ್ಯಗಳ ವಿರುದ್ಧ ಜನ ಜಾಗೃತರಾಗಲು ಹಾಗೂ ಜನತಾ ಪಕ್ಷದ ಸರ್ಕಾರ ಅಂತರಿಕ ಗುದ್ದಾಟಕ್ಕೆ ಬೀಳದಿರಲು ಹಾಗೂ ಮಾಲೀಕ ವರ್ಗ ಮತ್ತು ಗ್ರಾಮೀಣ ಶ್ರೀಮಂತರ ಹಿತಕ್ಕಾಗಿ ಜನತೆಯ ಹಿತವನ್ನು ಬಲಿ ಕೊಡದಿರಲು ಸಿ. ಪಿ. ಐ (ಎಂ) ರಾಜ್ಯ ಸಮಿತಿ ಒತ್ತಾಯಿಸುತ್ತದೆ.

ಪಿ. ರಾಮಚಂದ್ರರಾವ್
ಕಾರ್ಯದರ್ಶಿ

ರಾಷ್ಟ್ರೀಯ ರಂಗ: ಒಂದು ಪ್ರಮುಖ ಹೆಜ್ಜೆ

(1ನೇ ಪುಟದಿಂದ)

ಹಾದಿಯಲ್ಲಿನ ಆತಂಕಗಳು ನಿವಾರಣೆಯಾಗಿರುವ ಕೇಂದ್ರ ಸಮಿತಿ ತೃಪ್ತಿ ವ್ಯಕ್ತಪಡಿಸಿತು. ಪ್ರಾದೇಶಿಕ ಸ್ವಾಯತ್ತತೆಯ ಆಧಾರದ ಮೇಲೆ ಉಂಟಾಗಿರುವ ಒತ್ತುಕರ್ಷದಿಂದ ಈ ಯೋಜನೆ ಯಶಸ್ವಿಯಾಗುವಂತೆ ಹಾಗೂ ನೇಪಾಳೀ ಭಾಷಿಕರು ಮತ್ತು ಬಂಗಾಳಿಗಳ ಐಕ್ಯತೆಗಾಗಿ ಶಕ್ತಿಯುತ ರಾಜಕೀಯ ಪ್ರಯತ್ನ ನಡೆಯುತ್ತದೆ ಎಂಬ ಆಶಯವನ್ನು ಕೇಂದ್ರ ಸಮಿತಿ ವ್ಯಕ್ತಪಡಿಸಿದೆ.

ವಿರೋಧ ಪಕ್ಷಗಳ ಐಕ್ಯತೆ

ರಾಷ್ಟ್ರೀಯ ರಂಗದ ಸ್ಥಾಪನೆ ಮುಂಬರುವ ಚುನಾವಣೆಗಳಲ್ಲಿ ಕಾಂಗ್ರೆಸ್ (ಐ) ವಿರುದ್ಧ ಐಕ್ಯ ಹೋರಾಟದತ್ತ ಒಂದು ಪ್ರಮುಖ ಹೆಜ್ಜೆಯೆಂದು ಹೇಳಿ ಕೇಂದ್ರ ಸಮಿತಿ ಈ ಬೆಳವಣಿಗೆ ಕಾಂಗ್ರೆಸ್ (ಐ) ದುರಾಡಳಿತದ ವಿರುದ್ಧ ತಮ್ಮ ಸಿಟ್ಟನ್ನು ವ್ಯಕ್ತಪಡಿಸಲು ಒಂದು ನಂಬಲರ್ಹವ ರಂಗದ ನಿರೀಕ್ಷೆಯಲ್ಲಿರುವ ಜನತೆಯ ಆಕಾಂಕ್ಷೆಗೆ ಅನುಗುಣವಾಗಿದೆ ಎಂದು ಸ್ವಾಗತಿಸಿದೆ. ರಾಜೀವ್ ಸರ್ಕಾರವನ್ನು ಅಧಿಕಾರದಿಂದಿಳಿಸಲು ಎಡಶಕ್ತಿಗಳೊಂದಿಗೆ ಸೇರಲು ಜಾತ್ಯತೀತ ವಿರೋಧ ಪಕ್ಷಗಳು ಒಟ್ಟಾಗಿ ಮುಂದೆ ಬರಬೇಕೆಂದು ಸಿ. ಪಿ. ಐ. (ಎಂ) ಒತ್ತಾಯಿಸುತ್ತಾ ಬಂದಿರುವುದರತ್ತ ಈ ಸಂದರ್ಭದಲ್ಲಿ ಕೇಂದ್ರ ಸಮಿತಿ ಗಮನ ಸೆಳೆದಿದೆ.

ಇದುವರೆಗೆ ಈ ರಂಗ ಬಿ.ಜೆ.ಪಿ. ಯಂತಹ ಕೋಮು ಪಕ್ಷಗಳಿಂದ ದೂರವಿದೆ. ಆದರೆ ರಂಗದ ಕೆಲವು ಮುಖಂಡರ ಎಡಬಿಡಂಗಿ ಹೇಳಿಕೆಗಳು ಈ ರಂಗ ತನ್ನ ಜಾತ್ಯತೀತ ಸ್ವರೂಪವನ್ನು ಕಾದು ಕೊಳ್ಳುವ ಬಗ್ಗೆ ಸಂಶಯ ಎಬ್ಬಿಸಿದೆ. ಒಂದೆಡೆ ಕೋಮುವಾದಿ ಹಾಗೂ ಪ್ರತ್ಯೇಕತಾವಾದಿ ಶಕ್ತಿಗಳಿಗೆ ಮನವಿ ಮಾಡಿಕೊಳ್ಳುತ್ತಾ ಇನ್ನೊಂದೆಡೆ ಎಡಶಕ್ತಿಗಳ ಮನ ವೊಲಿಸುವ ತಂತ್ರ ಪ್ರಜಾಪ್ರಭುತ್ವಕ್ಕೆ ಮತ್ತು ರಾಷ್ಟ್ರೀಯ ಐಕ್ಯತೆಗೆ ಹಾನಿಕಾರಕವಾಗಬಹುದು, ಎಂದು ಕೇಂದ್ರ ಸಮಿತಿ ಅಭಿಪ್ರಾಯಪಟ್ಟಿದೆ.

ರಂಗದ ಸ್ಥಾಪನೆಯಲ್ಲಿ ಕೆಲವು ಪ್ರಾದೇಶಿಕ ಪಕ್ಷಗಳು ಐಕ್ಯತೆಗೆ ಭಾರೀ ಬೆಲೆ ಕೇಳುತ್ತಿರುವುದನ್ನು ಉಪೇಕ್ಷಿಸಲು ಸಾಧ್ಯವಿಲ್ಲ. ಅಲ್ಪ ಸಂಖ್ಯಾತರ ಹಿತಾಸಕ್ತಿಗೆ ವಿರುದ್ಧವಾಗಿರುವ ಅಸ್ಸಾಂ ಒಪ್ಪಂದಕ್ಕೆ ಬೆಂಬಲ ಮತ್ತು ಶ್ರೀಲಂಕಾ ಒಪ್ಪಂದಕ್ಕೆ ವಿರೋಧ ಜನರಲ್ಲಿ ಭರವಸೆ ಮೂಡಿಸುವ ನಿಲುವುಗಳಲ್ಲ ರಂಗ 71 ಅಂಶದ ಕಾರ್ಯಕ್ರಮ ಅಂಗೀಕರಿಸಿದೆ. ಆದರೆ ಇದನ್ನು ಎಷ್ಟರ ಮಟ್ಟಿಗೆ ಜನ ಜನಿತಗೊಳಿಲಾಗುತ್ತದೆ ಎಂಬುದು ಮುಖ್ಯ. ವಿದೇಶಾಂಗ ಧೋರಣೆಯ ಬಗ್ಗೆ ಒಂದು ಸಂಕ್ಷಿಪ್ತ ಮಾತಿದೆ ಯಷ್ಟೆ. ಸಾಮ್ರಾಜ್ಯ ಶಾಹಿಗಳ ಪಿತೂರಿಗಳನ್ನು ಪೂರ್ಣವಾಗಿ ಗ್ರಹಿಸಿಲ್ಲ. ರಾಷ್ಟ್ರೀಯ ಐಕ್ಯತೆಗಾಗಿ ಮತ್ತು ಕೋಮುಶಕ್ತಿಗಳ ವಿರುದ್ಧ ಹೋರಾಟದ ಮೇಲೆ ಒತ್ತು ನೀಡಿರುವುದನ್ನು ಎಲ್ಲರೂ ಮೆಚ್ಚಿಕೊಂಡಿದ್ದಾರೆ. ಆದರೆ ಜನತೆಯ ನಡುವೆ ಇದರ ಬಗ್ಗೆ ಪ್ರಚಾರ ಪ್ರಕ್ಷೋಭೆಯಲ್ಲಿ ಎಷ್ಟು ಆಸ್ಥೆತಗೊಳ್ಳಲಾಗುತ್ತದೆ ಎಂಬುದರ ಮೇಲೇನೆ, ಬಹಳಷ್ಟು ಯಶಸ್ಸು ಅವಲಂಬಿಸಿದೆ ಎಂದು ಕೇಂದ್ರ ಸಮಿತಿ ಹೇಳಿದೆ.

ಮಹಿಳೆಯರ ಬಗ್ಗೆ

ಸಾಮಾಜಿಕ ಅಸಮಾನತೆ, ಪಕ್ಷಪಾತ ಮತ್ತು ಊಳಿಗಮಾನ್ಯ ಪೂರ್ವಗ್ರಾಹಗಳು ಮುಂತಾದ ಮಹಿಳೆಯರ ಮೂಲಭೂತ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಶೋಚನೀಯವಾಗಿ ಸೋತಿರುವ ಕಾಂಗ್ರೆಸ್ (ಐ) ಸರ್ಕಾರ ಈಗ ಚುನಾವಣೆಯ ಮೇಲೆ ಕಣ್ಣಿಟ್ಟುಕೊಂಡು ಮಹಿಳೆಯರ ಕುರಿತು ರಾಷ್ಟ್ರೀಯ ದೂರಗಾಮೀ ಯೋಜನೆಯೊಂದನ್ನು ಘೋಷಿಸಿದೆ. ಇದರಲ್ಲಿ ದೊಡ್ಡ ದೊಡ್ಡ ಗುರಿಗಳನ್ನೇನೋ ಹಾಕಿಕೊಳ್ಳಲಾಗಿದೆ. ಅದಕ್ಕನುಗುಣವಾಗಿ ಹೆಚ್ಚಿನ ಸಂಪನ್ಮೂಲಗಳನ್ನು ಒದಗಿಸುವ ಬಗ್ಗೆ ಏನು ಹೇಳುತ್ತಿಲ್ಲ. ಮಹಿಳಾ ಸಂಘಟನೆಗಳೊಂದಿಗೆ ಈ ಯೋಜನೆಯ ಬಗ್ಗೆ ಚರ್ಚಿಸದಿರುವುದೇ ಇದೊಂದು ಪ್ರಚಾರ ಗಿಟ್ಟಿಸುವ ನಾಟಕ ಎಂಬುದನ್ನು ಬಯಲಿಗೆಳೆದಿದೆ ಮಹಿಳಾ ಸಂಘಟನೆಗಳೊಂದಿಗೆ ಇದನ್ನು ಚರ್ಚಿಸಿದರೆ ತನ್ನ ನಿಜ ಉದ್ದೇಶ ಬಯಲಿಗೆ ಬರಬಹುದೆಂಬ ಭೀತಿ ಸರ್ಕಾರಕ್ಕಿದೆ ಎಂದು ಕೇಂದ್ರ ಸಮಿತಿ ಅಭಿಪ್ರಾಯ ಪಟ್ಟಿದೆ.

ರೈತ ಚಳುವಳಿ

ಎಡ-ನೇತೃತ್ವದ ಸಾಮೂಹಿಕ ಸಂಘಟನೆಗಳ ಸಂಯೋಜಕ ಸಮಿತಿ ಸಂಘಟಿಸುವ ರೈತರ ಮತ್ತು ಕೃಷಿ ಕೂಲಿಗಾರರ ಸೆಪ್ಟಂಬರ್ ಚಳುವಳಿಯ ತಯಾರಿಯ ವರದಿಗಳನ್ನು ಅರಿಸಿದ ಕೇಂದ್ರ ಸಮಿತಿ ಈ ಚಳುವಳಿ, ಕೇಂದ್ರ ಸರ್ಕಾರದ ಕಾರ್ಮಿಕ-ವಿರೋಧಿ ಶಾಸನದ ವಿರುದ್ಧ ಕಾರ್ಮಿಕ ಸಂಘಟನೆಗಳ ಆಂದೋಲನ ಮತ್ತು ವಿದ್ಯಾರ್ಥಿಗಳ, ಯುವಕರ, ಮಹಿಳೆಯರ ಹೋರಾಟಗಳೊಂದಿಗೆ ಕ್ರಮೇಣ ಮೂಡಿ ಬರುತ್ತಿರುವ ವಿರೋಧ ಪಕ್ಷಗಳ ಐಕ್ಯತೆಯ ಒಂದು ಮಹತ್ವದ ಅಂಶ ಎಂದು ವಿಶ್ಲೇಷಿಸಿದೆ. ಆದ್ದರಿಂದ ವಿರೋಧ ಪಕ್ಷಗಳ ಐಕ್ಯತೆಗಾಗಿ ದುಡಿಯಬೇಕೆಂದಿರುವವರೆಲ್ಲಾ ಈ ಹೋರಾಟಗಳಲ್ಲಿ ತಮ್ಮನ್ನೂ ತೊಡಗಿಸಿಕೊಳ್ಳಬೇಕೆಂದು ಕೇಂದ್ರ ಸಮಿತಿ ಮನವಿ ಮಾಡಿಕೊಂಡಿದೆ. ರೈತರ ಸೆಪ್ಟಂಬರ್ ಚಳುವಳಿಗೆ ಪೂರ್ಣ ಬೆಂಬಲ ನೀಡಬೇಕೆಂದು ಕೇಂದ್ರ ಸಮಿತಿ ಪಕ್ಷದ ಘಟಕಗಳಿಗೆ ಕರೆ ನೀಡಿದೆ.

ಮಹಾಧಿವೇಶನಕ್ಕೆ ಸಿದ್ಧತೆ

ಡಿಸೆಂಬರ್‌ನಲ್ಲಿ ಪಕ್ಷದ ಮಹಾಧಿವೇಶನದ ಮೊದಲು ಎಲ್ಲಾ ಹಂತಗಳಲ್ಲಿ ನಡೆಯಬೇಕಾದ ಪಕ್ಷದ ಸಮ್ಮೇಳನಗಳ ವೇಳಾಪಟ್ಟಿಯನ್ನು ಕೇಂದ್ರ ಸಮಿತಿಯು ಈ ಸಭೆ ರೂಪಿಸಿತು. ಮಹಾಧಿವೇಶನದ ಕರಡು ರಾಜಕೀಯ ನಿರ್ಣಯವನ್ನು ತಯಾರಿಸಲು ಅಕ್ಟೋಬರ್ ಮೊದಲವಾರದಲ್ಲಿ ಕೇಂದ್ರ ಸಮಿತಿ ಮತ್ತೆ ಸಭೆ ಸೇರಲಿದೆ. ಈ ಕರಡು ನಿರ್ಣಯವನ್ನು ಅಕ್ಟೋಬರ್ ಅಂತ್ಯದಿಂದ ಎರಡು ತಿಂಗಳ ಕಾಲ ಪಕ್ಷದ ಎಲ್ಲಾ ಘಟಕಗಳು ಚರ್ಚಿಸುತ್ತವೆ ಎಂದು ಈ ಹೇಳಿಕೆ ತಿಳಿಸಿದೆ.

ಸೋವಿಯತ್ ಒಕ್ಕೂಟದ ಇತ್ತೀಚಿನ ಆಂತರಿಕ ಬೆಳವಣಿಗೆಗಳನ್ನು ನಾವು ಹೇಗೆ ಕಾಣಬೇಕು ? — ಈ ಬಗ್ಗೆ ಕೇಂದ್ರ ಸಮಿತಿಯ ಸಭೆ ಅಂಗೀಕರಿಸಿದ ಮಾರ್ಗದರ್ಶಕ ನಿರ್ಣಯಕ್ಕೆ ನೋಡಿ ಪುಟ 2.

ತ್ರಿಪುರಾ ಜನತೆಗೆ ರಕ್ಷಣೆ ಒದಗಿಸಲು ಮನವಿ

ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ಬೆಂಗಳೂರು ಜಿಲ್ಲಾ ಸಂಘಟನಾ ಸಮಿತಿಯ 5 ಮಂದಿ ನಿಯೋಗವು ಜುಲೈ 12 ರಂದು ರಾಜ್ಯದ ರಾಜ್ಯಪಾಲ ಶ್ರೀ ಪಿ.ವೆಂಕಟಸುಬ್ಬಯ್ಯನವರಿಗೆ ಮನವಿಯೊಂದನ್ನು ಅರ್ಪಿಸಿ ತ್ರಿಪುರಾದಲ್ಲಿ ಅಸ್ಸಾಂ ರೈಫಲ್‌ನ ಪ್ಯಾರಾ ಮಿಲಿಟರಿ ಸೈನಿಕರು ಬುಡಕಟ್ಟು ಮಹಿಳೆಯರ ಮೇಲೆ ಅತ್ಯಾಚಾರವೆಸಗಿರುವುದನ್ನು ಖಂಡಿಸಿದೆ.

ಕಾಂಗ್ರೆ-ಟಿ.ಯು.ಜೆ.ಎಸ್.ಸೇರಿ ಗುಂಡಾಗಿರಿ ಮೂಲಕ ಮಿಲಿಟರಿ ಸಹಾಯ ಪಡೆದು ನಡೆಸುತ್ತಿರುವ ಅಮಾನುಷ ಕೃತ್ಯದ ಫಲವಾಗಿ ತ್ರಿಪುರಾದ ಸಾಮಾನ್ಯ ಜನತೆ ಕಂಗಾಲಾಗಿದ್ದಾರೆಂದು ಆರೋಪಿಸಲಾಗಿದೆ. ಜನತೆಯ ಹಿತಾಸಕ್ತಿ ಕಾಪಾಡುವಲ್ಲಿ ಪೂರ್ಣ ವಿಫಲವಾಗಿರುವ ತ್ರಿಪುರಾದ ಕಾಂಗ್ರೆ ಸರ್ಕಾರ ಜನತೆಯನ್ನು ಆಳುವ ನೈತಿಕ ಹಕ್ಕನ್ನು ಕಳೆದುಕೊಂಡಿದೆ ಎಂದು ಹೇಳಿದೆ. ದೇಶದ ವಿವಿಧ ಭಾಗಗಳಲ್ಲಿ ಹೆಚ್ಚುತ್ತಿರುವ ಮಹಿಳೆಯರ ಮೇಲಿನ ಹಲ್ಲೆಗಳ ಬಗ್ಗೆ ಗಮನ ಸೆಳೆದಿರುವ ಮನವಿ ಪತ್ರ 59 ನೇ ಸಂವಿಧಾನದ ತಿದ್ದುಪಡಿಯ ಮೂಲಕ ಪಂಜಾಬ್‌ನಲ್ಲಿ ತುರ್ತು ಪರಿಸ್ಥಿತಿಯನ್ನು ಹೇರುವ ಕೇಂದ್ರದ ನೀತಿಯನ್ನು ತೀವ್ರವಾಗಿ ಖಂಡಿಸಿದೆ. 1. ತ್ರಿಪುರಾದಿಂದ ಮಿಲಿಟರಿಯನ್ನು ಹಿಂತೆಗೆದುಕೊಳ್ಳಬೇಕು. 2. ಮಹಿಳೆಯರ ಮೇಲೆ ನಡೆದ ಅತ್ಯಾಚಾರದ ಕುರಿತು ನ್ಯಾಯಾಂಗ ತನಿಖೆ ನಡೆಯಬೇಕು. 3. ರಾಜೀವ್ ಲೋಂಗೋವಾಲರ ಪಂಜಾಬ್ ಒಪ್ಪಂದ ಜಾರಿಗೆ ಬರಬೇಕು. 4. 59 ನೇ ಸಂವಿದಾನದ ತಿದ್ದುಪಡಿ ವಾಪಸಾಗಬೇಕು. 5) ಜನತೆಯ ನಾಗರೀಕ ಪ್ರಜಾಪ್ರಭುತ್ವ ಹಕ್ಕುಗಳ ಮೇಲಿನ ಹಲ್ಲೆಯನ್ನು ಕೊನೆಗೊಳಿಸಬೇಕೆಂಬ ಪ್ರಮುಖ ಬೇಡಿಕೆಗಳನ್ನು ಮನವಿಪತ್ರ ಒಳಗೊಂಡಿತು.

ರಾಜ್ಯಪಾಲರು ಈ ಮೇಲ್ಕಂಡ ಕೇಳಿಕೆಗಳ ಕುರಿತು ಕ್ರಮ ಜರುಗಿಸಲು ನೊಂದ ಜನತೆಗೆ ನ್ಯಾಯ ದೊರಕಿಸಲು ತ್ರಿಪುರಾದ ಕಾಂಗ್ರೆ ಮುಖ್ಯ ಮಂತ್ರಿಯವರ ಗಮನಕ್ಕೆ ತಂದು ತ್ರಿಪುರಾದಲ್ಲಿ ಜನರು ಶಾಂತಿಯಿಂದ ಬಾಳುವಂತೆ ಮಾಡಬೇಕೆಂದು ಒತ್ತಾಯಿಸಲಾಯಿತು. ಕಾ|| ರಾಜಮ್ಮ, ವಿಮಲಾ, ಶಾಂತಕುಮಾರಿ, ಸುಶೀಲಾ, ಶ್ರೀಮತಿ ಕೆ. ಯವರುಗಳು ನಿಯೋಗದ ನಾಯಕತ್ವ ವಹಿಸಿದ್ದರು.

ಭಾವೈಕ್ಯತಾ ದಿನದ ಪ್ರತಿಜ್ಞೆ

ರಾಣೆಬೆನ್ನೂರಿನ ಡಿ. ವೈ. ಎಫ್. ಐ. ಘಟಕದ ಆಶ್ರಯದಲ್ಲಿ ಆಗಸ್ಟ್ 15ರ ಸ್ವಾತಂತ್ರ್ಯ ದಿನವನ್ನು ರಾಷ್ಟ್ರೀಯ ಭಾವೈಕ್ಯತಾ ದಿನವಾಗಿ ಆಚರಿಸಲಾಯಿತು.

ದೇಶದ ಸಮಸ್ತ ಜನತೆ ತಾವೆಲ್ಲರೂ ಒಂದೇ ಎಂಬ ಐಕ್ಯತಾ ಮನೋಭಾವದಿಂದ ಕೂಡಿ ಬಾಳುವ ಹಾಗೂ ಅನ್ಯತೆಯನ್ನು ತೊರೆದು ಒಂದಾಗಿ ನಿಲ್ಲಬೇಕೆಂದು ಹರಿಹರದ ಸ್ಥಳೀಯ ಕಿರಿಯ ಸರ್ಕಾರಿ ಕಾಲೇಜು ಉಪನ್ಯಾಸಕರಾದ ಡಾ|| ಐ. ಎ. ಲೋಕಾಪುರರವರು ಕರೆ ನೀಡಿದರು. ಅವರು ಸಮಾರಂಭದ ಮುಖ್ಯ ಅತಿಥಿಗಳಾಗಿ ಮಾತನಾಡುತಿದ್ದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾರ್ಮಿಕ ಧುರೀಣ ಕಾ|| ನಿತ್ಯಾನಂದ ಸ್ವಾಮಿಯವರು ಕೇಂದ್ರ ಸರ್ಕಾರದ ಸಮಯ ಸಾಧಕ ನೀತಿಯಿಂದ ದೇಶದ ಐಕ್ಯತೆ ಸಮಗ್ರತೆಗೆ ಇಂದು ತೀವ್ರ ಅಪಾಯ ಒದಗಿದೆ ಎಂದು ಹೇಳಿದರು. ಪರಶುರಾಮ ಬಗಾದಿ ಸ್ವಾಗತಿಸಿದ್ದರು. ನೇಕಾರರ ಸಂಘದ ಕ್ಯಾದಗಿ ಮತ್ತು ಎಸ್. ಎಫ್. ಐ. ಸಂಘಟನೆಯ ಕಾ|| ಕೃಷ್ಣಾಜಿ ಕಲಾಲ್ ಸಭೆಯಲ್ಲಿ ಮಾತನಾಡಿದರು. ಕೊನೆಯಲ್ಲಿ ಕಾ|| ಫಕ್ಕೀರಪ್ಪ ವಿಭೂತಿ ವಂದಿಸಿದರು.

ಪ್ರತಿಜ್ಞೆ ಮತ್ತು ಜಾಥಾ

ನೂರಾರು ಕಾರ್ಯಕರ್ತರು ದೇಶದ ಐಕ್ಯತೆ ಕಾಪಾಡಲು ಹಾಗೂ ಜಾತಿವಾದಿ—ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಡಲು ಪ್ರತಿಜ್ಞೆ ಸ್ವೀಕರಿಸಿ ರಾಣೆಬೆನ್ನೂರಿನ ಪ್ರಮುಖ ಬೀದಿಯಲ್ಲಿ ಸೈಕಲ್ ಜಾಥ ಹೊರಟು ರಾಷ್ಟ್ರೀಯ ಐಕ್ಯತಾ ಸಂದೇಶವನ್ನು ಸಾರಿದರು.

Printed & Published by P. Ramachandra Rao on be half of the Communist Party of India (Marxist) Karnataka State Committee, K. V. Temple Street, Sulthanpet, Bangalore-560053. Editorial and Managerial Office : L-56, K. V. Temple Street, Sulthanpet, B-53, Phone : 75331. Editor : P. Ramachadra Rao, Managing Editor : N. K. Upadhayaya. Janagere Mudrana, Bangalore-21.